ಸೋಮವಾರ, ಜೂನ್ 13, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 163 | ಪುಟ 10

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಕನ್ನಡ ಮಾಧ್ಯಮದಲ್ಲಿ ಕಲಿತವರಿಗೆ ಇಂಗ್ಲಿಷ್ ಮಾಧ್ಯಮದಲ್ಲಿ ಪಿಯುಸಿ ಓದುವುದು ಬಹಳ ಕಷ್ಟ ಎಂಬುದು ಸುಳ್ಳು. ಕನ್ನಡವನ್ನು ಸರಿಯಾಗಿ ಕಲಿತವರು ಬೇರೆ ಭಾಷೆಯನ್ನು ಚೆನ್ನಾಗಿ ಕಲಿಯುತ್ತಾರೆ



ಪ್ರತಿಭಟನಕಾರರಿಗೆ 'ಶಿಕ್ಷೆ': ಮತ್ತೆ ಬುಲ್ಡೋಜರ್ ಕಾರ್ಯಾಚರಣೆ

ಆರೋಪಿಯ ಮನೆ ನೆಲಸಮ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದಾದ್ಯಂತ ನಡೆದ ಪ್ರತಿಭಟನೆಯ ನೇತೃತ್ವ ವಹಿಸಿದ್ದರು ಎನ್ನಲಾದ ಮುಸ್ಲಿಂ ವ್ಯಕ್ತಿಗಳ ಮನೆಗಳನ್ನು ನೆಲಸಮ ಮಾಡಲಾಗಿದೆ. ಬಿಜೆಪಿ ವಕ್ತಾರೆಯಾಗಿದ್ದ ನೂಪುರ್ ಶರ್ಮಾ ಅವರು ಪ್ರವಾದಿ ಮಹಮ್ಮದ್ ಅವರ ಬಗ್ಗೆ ನೀಡಿದ 'ಅವಹೇಳನಕಾರಿ' ಹೇಳಿಕೆಯನ್ನು ಖಂಡಿಸಿ ಈ ಪ್ರತಿಭಟನೆ ನಡೆಸಲಾಗಿದೆ. ಈ ಮನೆಗಳು 'ಅಕ್ರಮ' ಎಂಬ ಕಾರಣಕ್ಕೆ ಸ್ಥಳೀಯಾಡಳಿತ ಸಂಸ್ಥೆಗಳು ಮನೆ ಧ್ವಂಸ ಕಾರ್ಯಾಚರಣೆ ನಡೆಸಿವೆ.

ಪ್ರಯಾಗರಾಜ್‌ನಲ್ಲಿ ನಡೆದ ಪ್ರತಿಭಟನೆಯ ಪಿತೂರಿ ರೂಪಿಸಿದ ಆರೋಪ ಹೊತ್ತಿರುವ ಜಾವೇದ್ ಮಹಮ್ಮದ್ ಅವರ ಮನೆಯ ಒಂದು ಭಾಗವನ್ನು ಬುಲ್ಡೋಜರ್ ಬಳಸಿ ಭಾನುವಾರ ಉರುಳಿಸಲಾಗಿದೆ. ಈ ಮನೆಯ ಒಂದು ಭಾಗವು 'ಅಕ್ರಮ' ಎಂದು ಹೇಳಲಾಗಿದೆ. ಅವರಿಗೆ ಹಲವು ಬಾರಿ ನೋಟಿಸ್ ನೀಡಲಾಗಿದೆ ಎಂದು ಸ್ಥಳೀಯಾಡಳಿತ ಹೇಳಿದೆ.

8ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 8



ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಆರೋಪಿಯ ಪ್ರಯಾಗರಾಜ್‌ನಲ್ಲಿರುವ ಮನೆಯನ್ನು ಭಾನುವಾರ ಧ್ವಂಸಗೊಳಿಸಲಾಯಿತು –ಪಿಟಿಐ ಚಿತ್ರ

> ದ್ವೇಷದ ಮಾತು ಹೆಚ್ಚುತ್ತಿರುವ ಈ ಸಂದರ್ಭವು ಪ್ರಧಾನಿ ಮೌನ ಮುರಿಯಲು ಸಕಾಲವಾಗಿದೆ. ಇಲ್ಲದಿದ್ದರೆ, ಇದಕ್ಕೆ ಅವರ ಸಹಮತ ಇದೆ ಎಂದು ವ್ಯಾಖ್ಯಾನಿಸಬಹುದು
>
> **ಶಶಿ ತರೂರ್,** ಕಾಂಗ್ರೆಸ್ ಸಂಸದ

> ಆಕ್ಷೇಪಾರ್ಹ ಹೇಳಿಕೆ ನೀಡಿದ ವ್ಯಕ್ತಿಗೆ (ನೂಪುರ್ ಶರ್ಮಾ) ಭದ್ರತೆ ನೀಡಲಾಗಿದೆ. ಶಾಂತಿಯಿಂದ ಪ್ರತಿಭಟಿಸಿದವರಿಗೆ ಶಿಕ್ಷೆ ನೀಡಲಾಗುತ್ತಿದೆ
>
> **ಅಖಿಲೇಶ್ ಯಾದವ್**
> ಸಮಾಜವಾದಿ ಪಕ್ಷದ ಅಧ್ಯಕ್ಷ

'ಗಲಭೆಕೋರರಿಗೆ ಏಟಿನ ಉಡುಗೊರೆ'

ಶುಕ್ರವಾರದ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಮುಸ್ಲಿಮರಿಗೆ ಪೊಲೀಸರು ಥಳಿಸಿದ್ದಾರೆ ಎಂಬುದನ್ನು ಬಿಂಬಿಸುವ ವಿಡಿಯೊವನ್ನು ಬಿಜೆಪಿ ಶಾಸಕ ಶಲಭ್ ಮಣಿ ತ್ರಿಪಾಠಿ ಅವರು ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿದ್ದಾರೆ. ಥಳಿಸುತ್ತಿರುವ ಸ್ಥಳವು ಪೊಲೀಸ್ ಠಾಣೆಯಂತೆ ಕಾಣಿಸುತ್ತಿದೆ. ಇದು 'ಗಲಭೆಕೋರರಿಗೆ ಸಿಕ್ಕ ಉಡುಗೊರೆ' ಎಂದು ತ್ರಿಪಾಠಿ ಅವರು ಹೇಳಿದ್ದಾರೆ.

ಒಂಬತ್ತು ಮಂದಿಗೆ ಮೂವರು ಪೊಲೀಸರು ಲಾಠಿಯಿಂದ ಮನಬಂದಂತೆ ಥಳಿಸುವ ದೃಶ್ಯ ವಿಡಿಯೊದಲ್ಲಿದೆ. 'ಥಳಿಸಬೇಡಿ' ಎಂದು ಪ್ರತಿಭಟನಕಾರರು ಕೈಮುಗಿಯುವ ಮತ್ತು ಕೈಯಿಂದ ಹೊಡೆತವನ್ನು ತಡೆಯುವ ದೃಶ್ಯಗಳೂ ವಿಡಿಯೊದಲ್ಲಿ ಇವೆ. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಘಟನೆ ನಡೆದಿದೆ ಎನ್ನಲಾದ ಠಾಣೆಯು ಸಹಾರನ್‌ಪುರ ಜಿಲ್ಲೆಯದ್ದು ಎಂದು ಮೂಲಗಳು ಹೇಳಿವೆ. ಉತ್ತರ ಪ್ರದೇಶ ಪೊಲೀಸರು ಯಾವುದೇ ಪ್ರತಿಕ್ರಿಯೆ ಕೊಟ್ಟಿಲ್ಲ.

ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಈ ಘಟನೆಯನ್ನು ಖಂಡಿಸಿದ್ದಾರೆ. 'ಇಂತಹ ಘಟನೆಗಳನ್ನು ಖಂಡಿಸಿದೇ ಇದ್ದರೆ ನ್ಯಾಯವು ಅದರ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತದೆ' ಎಂದು ಅವರು ಹೇಳಿದ್ದಾರೆ.





ಚಿನಕುರಳಿ

ಪ್ರಕಾಶ್ ಶೆಟ್ಟಿ



ವಿಧಾನ ಪರಿಷತ್ ಚುನಾವಣೆ 4 ಕ್ಷೇತ್ರಗಳಲ್ಲಿ ಮತದಾನ ಇಂದು

ಬೆಂಗಳೂರು: ವಿಧಾನ ಪರಿಷತ್‌ನ ವಾಯವ್ಯ ಮತ್ತು ದಕ್ಷಿಣ ಪದವೀಧರರ ಕ್ಷೇತ್ರಗಳು ಹಾಗೂ ವಾಯವ್ಯ ಮತ್ತು ಪಶ್ಚಿಮ ಶಿಕ್ಷಕರ ಕ್ಷೇತ್ರಗಳ ಪ್ರತಿನಿಧಿಗಳ ಆಯ್ಕೆಗೆ ಸೋಮವಾರ ಮತದಾನ ನಡೆಯಲಿದೆ. ರಾಜ್ಯದ 11 ಜಿಲ್ಲೆಗಳ ವ್ಯಾಪ್ತಿಯಲ್ಲಿ ಈ ಚುನಾವಣೆ ನಡೆಯಲಿದೆ.

ನಾಲ್ಕು ಕ್ಷೇತ್ರಗಳಲ್ಲಿ ಒಟ್ಟು 417 ಮತಗಟ್ಟೆಗಳನ್ನುತೆರೆಯಲಾಗಿದೆ.ನಾಲ್ಕು ಕ್ಷೇತ್ರಗಳಲ್ಲಿ ಒಟ್ಟು 49 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಸೋಮವಾರ ಬೆಳಿಗ್ಗೆ 8 ರಿಂದ ಸಂಜೆ 5 ಗಂಟೆಯವರೆಗೆ ಮತದಾನಕ್ಕೆ ಅವಕಾಶವಿದೆ. ಬುಧವಾರ (ಜೂನ್ 15) ಮತ ಎಣಿಕೆ ನಡೆಯಲಿದೆ.

ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿ ಹೊಂದಿರುವ ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಬಿಜೆಪಿಯ ಮೈ.ವಿ. ರವಿಶಂಕರ್, ಜೆಡಿಎಸ್‌ನ ಎಚ್.ಕೆ. ರಾಮು, ಕಾಂಗ್ರೆಸ್‌ನ ಮಧು ಜಿ. ಮಾದೇಗೌಡ, ಕನ್ನಡ ಚಳವಳಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್, ಪಕ್ಷೇತರ ಪ್ರಸನ್ನ ಎನ್. ಗೌಡ ಸೇರಿದಂತೆ 19 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

4ನೇ ಪುಟ ನೋಡಿ

ಐಪಿಎಲ್ ಪ್ರಸಾರ ಹಕ್ಕು: ಪಂದ್ಯವೊಂದಕ್ಕೆ ₹ 100ಕೋಟಿ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಮುಂದಿನ ಐದು ವರ್ಷಗಳ ಪ್ರಸಾರ ಹಕ್ಕುಗಳ ಹರಾಜು ಪ್ರಕ್ರಿಯೆಯಲ್ಲಿ ಪ್ರತಿ ಪಂದ್ಯದ ಮೌಲ್ಯ ₹ 100 ಕೋಟಿ ದಾಟಿತು. ಹರಾಜಿನ ಮೊದಲ ದಿನವಾದ ಭಾನುವಾರದ ಮುಕ್ತಾಯಕ್ಕೆ ಟಿ.ವಿ. ಮತ್ತು ಡಿಜಿಟಲ್ ಪ್ರಸಾರ ಹಕ್ಕುಗಳ ಒಟ್ಟು ಮೌಲ್ಯವು ₹ 50 ಸಾವಿರ ಕೋಟಿ ದಾಟುವ ನಿರೀಕ್ಷೆ ಮೂಡಿದೆ. 9

ಎಂಟು ಅಡಿ ದಂತದ 'ಭೋಗೇಶ್ವರ' ಇನ್ನಿಲ್ಲ

ಎಚ್.ಡಿ. ಕೋಟೆ (ಮೈಸೂರು ಜಿಲ್ಲೆ): ನಾಗರಹೊಳೆ ಮತ್ತು ಬಂಡೀಪುರ ವ್ಯಾಪ್ತಿಯಲ್ಲಿರುವ ಕಬಿನಿ ಹಿನ್ನೀರಿನಲ್ಲಿ ಕಾಣಸಿಗುತಿದ್ದ, 'ಮಿಸ್ಟರ್ ಕಬಿನಿ' ಖ್ಯಾತಿಯ ಮತ್ತು 'ಭೋಗೇಶ್ವರ' ಎಂಬ ಹೆಸರಿನಿಂದ ಕರೆಯಲಾಗುತ್ತಿದ್ದ ಗಂಡಾನೆ ವಯೋಸಹಜ ಕಾರಣಗಳಿಂದಾಗಿ ಸಾವಿಗೀಡಾಗಿದೆ. 4

ಸೋಮವಾರದ ಉಷ್ಣಾಂಶ 31° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣ. ತುಂತುರು ಮಳೆಯಾಗುವ ಸಾಧ್ಯತೆ.

ಹವಾಮಾನ

ಮಂಗಳವಾರ	ಬುಧವಾರ	ಗುರುವಾರ
31° 21°	31° 20°	30° 21°


ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿಗಿರಿಧಾಮದ ಪ್ರವೇಶ ದ್ವಾರದಲ್ಲಿ ವಾಹನ ದಟ್ಟಣೆ

ನಂದಿ ಗಿರಿಧಾಮ: ಪ್ರವಾಸಿಗರು ಹೈರಾಣು

ಚಿಕ್ಕಬಳ್ಳಾಪುರ: ಪ್ರಸಿದ್ಧ ನಂದಿ ಗಿರಿಧಾಮದಲ್ಲಿ ಭಾನುವಾರ ಮುಂಜಾನೆ ಸಂಚಾರ ದಟ್ಟಣೆ ಉಂಟಾಗಿದ್ದು, ಪ್ರವಾಸಿಗರು ಹೈರಾಣಾದರು. ಕಾರಹಳ್ಳಿ ಕ್ರಾಸ್‌ನಿಂದ ಆರಂಭವಾದ ದಟ್ಟಣೆ, ಗಿರಿಧಾಮದ ಪ್ರವೇಶದ್ವಾರದಲ್ಲಿ ತೀವ್ರವಾಗಿತ್ತು.

ಪ್ರವಾಸಿಗರು ಹಿಂದಿರುಗಲೂ ಆಗದೇ ಪರದಾಡಿದರು. ಮಧ್ಯಾಹ್ನದವರೆಗೂ ವಾಹನಗಳಲ್ಲಿ ಅಪಾರ ಸಂಖ್ಯೆಯಲ್ಲಿ ಪ್ರವಾಸಿಗರು ನಂದಿಬೆಟ್ಟಕ್ಕೆ ಬಂದರು. ವಾರಾಂತ್ಯದಲ್ಲಿ ಬೆಳಿಗ್ಗೆಯೇ ಪಾರ್ಕಿಂಗ್ ಸ್ಥಳ ಭರ್ತಿಯಾಗಲಿದೆ. ನಂತರ ಬರುವ ಪ್ರವಾಸಿಗರಿಗೆ ಪ್ರವೇಶ ಸಿಗುವುದು ದುಸ್ತರ. ಹೀಗಾಗಿ ವಾರಾಂತ್ಯದಲ್ಲಿ ಕಿಲೋಮೀಟರ್ ಗಟ್ಟಲೆ ವಾಹನಗಳು ನಿಲ್ಲುತ್ತವೆ.

ಗಿರಿಧಾಮದ ವಾಹನ ನಿಲುಗಡೆ ಸ್ಥಳದಲ್ಲಿ 300 ಕಾರುಗಳಿಗಷ್ಟೇ ಜಿಲ್ಲಾಡಳಿತ ಅವಕಾಶ ನೀಡುತ್ತಿದೆ. ಶನಿವಾರ ಮತ್ತು ಭಾನುವಾರ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಲಿದ್ದು, ದಟ್ಟಣೆ ಸಾಮಾನ್ಯವಾಗಿದೆ. ಗಿರಿಧಾಮಕ್ಕೆ ಹೋದ ಕಾರುಗಳು ವಾಪಸ್ ಆದ ನಂತರವೇ ಕೆಳಗಿರುವ ಕಾರುಗಳು ಗಿರಿಧಾಮಕ್ಕೆ ಹೋಗಬೇಕಾದ ಸ್ಥಿತಿ ಇದೆ.

ಪ್ರತಿಭಾ ಪುರಸ್ಕಾರ ಕಾರ್ಯಕ್ರಮ: ಪಿಇಎಸ್ ವಿ.ವಿ. ಕುಲಾಧಿಪತಿ ಎಂ.ಆರ್.ದೊರೆಸ್ವಾಮಿ ಆಶಯ

‘ಸರ್ಕಾರಿ ಶಾಲೆ ಅಭಿವೃದ್ಧಿಗೆ ಚಳವಳಿ ರೂಪ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಡ ವರ್ಗದ ಬಹುತೇಕ ಮಕ್ಕಳು ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಾರೆ. ಹೀಗಾಗಿ, ಸರ್ಕಾರಿ ಶಾಲೆಗಳ ಅಭಿವೃದ್ಧಿ ಚಳವಳಿ ಸ್ವರೂಪ ಪಡೆಯಬೇಕು’ ಎಂದು ಪಿಇಎಸ್ ವಿಶ್ವವಿದ್ಯಾಲಯ ಕುಲಾಧಿಪತಿ ಎಂ.ಆರ್.ದೊರೆಸ್ವಾಮಿ ಆಶಿಸಿದರು.

ಪಿಇಎಸ್ ವಿಶ್ವವಿದ್ಯಾಲಯ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಪ್ರಥಮ ಪಿಯುಸಿ ತರಗತಿಗಳ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಕನ್ನಡ ಭಾಷೆ ಬೆಳೆಯಲು ಕನ್ನಡ ಶಾಲೆಗಳನ್ನು ಬಲವರ್ಧನೆಯಾಗಬೇಕು. ಶಾಸಕರು, ಸಂಸದರ ಜತೆಗೆ ಕಂಪನಿಗಳು, ವಿಶ್ವವಿದ್ಯಾಲಯಗಳು ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಅಭಿವೃದ್ಧಿಗೆ ಒತ್ತು ನೀಡಬೇಕು’ ಎಂದು ಪ್ರತಿಪಾದಿಸಿದರು.

‘ದೇಶಕ್ಕೆ ಸ್ವಾತಂತ್ರ್ಯ ಬಂದ 75 ವರ್ಷಗಳಲ್ಲಿ 12 ಪಂಚವಾರ್ಷಿಕ ಯೋಜನೆಗಳು ಜಾರಿಯಾಗಿವೆ. ಅಮೆರಿಕ, ಜಪಾನ್‌ಗಿಂತಲೂ ದೇಶ ಅಭಿವೃದ್ಧಿ ಹೊಂದಿರಬೇಕಿತ್ತು. ಆದರೆ, ಅಪ್ರಾಮಾಣಿಕತೆ, ಧನದಾಹದಿಂದ ಶೈಕ್ಷಣಿಕ ಸೇರಿ ವಿವಿಧ ಕ್ಷೇತ್ರಗಳಲ್ಲಿ ಹಿಂದೆ ಉಳಿದಿದ್ದೇವೆ’ ಎಂದರು.



ಪಿಇಎಸ್ ಪಿಯು ಕಾಲೇಜು ಆಯೋಜಿಸಿದ್ದ ಪಿಯು ಪ್ರಥಮ ವರ್ಷ ಉದ್ಘಾಟನೆ ಹಾಗೂ ಪ್ರಥಮ ಪಿಯುಸಿಯಲ್ಲಿ ಹೆಚ್ಚು ಅಂಕಪಡೆದ ವಿದ್ಯಾರ್ಥಿವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ ನೀಡಿ ಗೌರವಿಸಲಾಯಿತು. (ಕುಳಿತವರು ಎಡದಿಂದ) ಪಿಇಎಸ್ ಸೆಂಟ್ರಲ್ ಕ್ಯಾಂಪಸ್ ನಿರ್ದೇಶಕ ಪ್ರೊ. ಸತ್ಯನಾರಾಯಣ, ಪಿಇಎಸ್ ವಿಶ್ವವಿದ್ಯಾಲಯ ಕುಲಪತಿ ಜೆ. ಸೂರ್ಯಪ್ರಸಾದ್, ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಆರ್. ದೊರೆಸ್ವಾಮಿ, ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಮತ್ತು ಪಿಇಎಸ್ ಪಿಯು ಕಾಲೇಜು ಪ್ರಾಂಶುಪಾಲ ಡಾ. ಸಿ. ನಾರಾಯಣ ರೆಡ್ಡಿ ಇದ್ದರು

‘ಮೌಲ್ಯಯುತ ಹಾಗೂ ಗುಣಮಟ್ಟದ ಶಿಕ್ಷಣಕ್ಕೆ ನಮ್ಮ ಸಂಸ್ಥೆ ಆದ್ಯತೆ ನೀಡುತ್ತಿದೆ. ಏಕಾಗ್ರತೆಯಿಂದ ಜ್ಞಾನ ಸಂಪಾದನೆ ಮಾಡಲು ಸಾಧ್ಯ. ಕಲಿಕೆಯಲ್ಲಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಸಂಸ್ಥೆಯು ವಾರ್ಷಿಕ ₹ 5 ಕೋಟಿಯಷ್ಟು ವಿದ್ಯಾರ್ಥಿವೇತನ ನೀಡುತ್ತಿದೆ’ ಎಂದು ತಿಳಿಸಿದರು.

ವಿಶ್ವವಿದ್ಯಾಲಯದ ಕುಲಪತಿ ಜೆ.ಸೂರ್ಯಪ್ರಸಾದ್, ‘ಜೀವನದಲ್ಲಿ ಸವಾಲುಗಳನ್ನು ಎದುರಿಸಿ, ಮುಂದೆ ಸಾಗಬೇಕು. ಉತ್ತಮ ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು’ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು, ಪ್ರಥಮ ಪಿ.ಯು.ಸಿಯಲ್ಲಿ ಅಧಿಕ ಅಂಕ ಪಡೆದ 37 ವಿದ್ಯಾರ್ಥಿಗಳಿಗೆ ತಲಾ ₹ 70 ಸಾವಿರ ನಗದು ಸಹಿತ ಪ್ರತಿಭಾ ಪುರಸ್ಕಾರವನ್ನು ಪ್ರದಾನ ಮಾಡಿದರು.

‘ಹೆಚ್ಚುವರಿ ಮೀಸಲಾತಿ: ವರದಿ ಸಲ್ಲಿಕೆಗೆ ಸಮಯ ಕೇಳಿದ ಸಮಿತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು : ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಹೆಚ್ಚುವರಿಯಾಗಿ ಮೀಸಲಾತಿ ಕಲ್ಪಿಸುವ ಸಂಬಂಧ ರಚನೆಯಾಗಿದ್ದ ನ್ಯಾಯಮೂರ್ತಿ ಸುಭಾಷ್ ಅಡಿ ನೇತೃತ್ವದ ಸಮಿತಿ ತನ್ನ ವರದಿಯನ್ನು ಅಂತಿಮಗೊಳಿಸಿದ್ದು, ವರದಿ ಸಲ್ಲಿಸಲು ಮುಖ್ಯಮಂತ್ರಿ ಅವರಿಗೆ ಸಮಯ ಕೇಳಿದೆ.

‘ಎಸ್‌ಸಿ., ಎಸ್‌ಟಿ ಸಮುದಾಯಗಳಿಗೆ ಹೆಚ್ಚುವರಿ ಮೀಸಲಾತಿ ಕಲ್ಪಿಸುವ ಸಂಬಂಧ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಹಿಂದೆ ಈ ಸಮಿತಿಯನ್ನು ರಚಿಸಿತ್ತು. ಸಮಗ್ರವಾಗಿ ಅಧ್ಯಯನ ನಡೆಸಿ ಸಮಿತಿ ಅಂತಿಮ ವರದಿಯನ್ನು ಸಿದ್ಧಪಡಿಸಿದೆ ಎಂದು ಮೂಲಗಳು ತಿಳಿಸಿವೆ.

ಅಂತಿಮಗೊಂಡಿರುವ ಆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸಿದ್ಧತೆ ಸಮಿತಿ ಮಾಡಿಕೊಂಡಿದೆ. ಮುಖ್ಯಮಂತ್ರಿ ಸಮಯ ನೀಡಿದಂತೆ ಸಲ್ಲಿಸಲಿದೆ ಎಂದು ಖಚಿತಪಡಿಸಿವೆ.

ಪಾನ್ ಕಾರ್ಡ್ ನವೀಕರಣ: ₹ 1.32 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾನ್ ಕಾರ್ಡ್ ನವೀಕರಣ ಸೋಗಿನಲ್ಲಿ ನಗರದ ನಿವಾಸಿಯೊಬ್ಬರ ಬ್ಯಾಂಕ್ ಖಾತೆಯಿಂದ ₹ 1.32 ಲಕ್ಷ ವರ್ಗಾಯಿಸಿಕೊಂಡು ವಂಚಿಸಲಾಗಿದ್ದು, ಈ ಬಗ್ಗೆ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಜೆ.ಪಿ.ನಗರದ ನಿವಾಸಿ ಉಮಾಪತಿ ಈ ಬಗ್ಗೆ ದೂರು ನೀಡಿದ್ದಾರೆ. ‘ದೂರುದಾರರು ಎಚ್‌ಡಿಎಫ್‌ಸಿ ಬ್ಯಾಂಕ್ ಶಾಖೆಯಲ್ಲಿ ಖಾತೆ ಹೊಂದಿದ್ದಾರೆ. ಇವರಿಗೆ ಕರೆ ಮಾಡಿದ್ದ ಅಪರಿಚಿತ, ‘ಪಾನ್ ಕಾರ್ಡ್ ನವೀಕರಣ ಮಾಡಿಸಿ. ಇಲ್ಲದಿದ್ದರೆ, ಖಾತೆ ಬಂದ್ ಆಗುತ್ತದೆ’ ಎಂದಿದ್ದ. ಜೊತೆಗೆ, ಲಿಂಕ್ ಕಳುಹಿಸಿ ಭರ್ತಿ ಮಾಡುವಂತೆ ಸೂಚಿಸಿದ್ದ’ ಎಂದು ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅಪರಿಚಿತನ ಮಾತು ನಂಬಿದ್ದ ದೂರುದಾರ ಅದರಂತೆ ಮಾಹಿತಿ ಭರ್ತಿ ಮಾಡಿ ಮೊಬೈಲ್‌ಗೆ ಬಂದ ಒಟಿಪಿಯನ್ನು ಆರೋಪಿಗೆ ನೀಡಿದ್ದರು. ಆ ಬಳಿಕ ಖಾತೆಯಿಂದ ₹ 1.32 ಲಕ್ಷ ಕಡಿತವಾಗಿದೆ.ಬಳಿಕ ಆರೋಪಿ ಮೊಬೈಲ್ ಸಹ ಸ್ವಿಚ್ಡ್ ಆಫ್ ಆಗಿತ್ತು’ ಎಂದೂ ಪೊಲೀಸರಿಗೆ ತಿಳಿಸಿದ್ದಾರೆ.

‘ಯೊನೊ’ ಆ್ಯಪ್ ಪ್ರತಿನಿಧಿ ಸೋಗಿನಲ್ಲಿ ವಂಚನೆ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್‌ಬಿಐ) ‘ಯೊನೊ’ ಆ್ಯಪ್ ಪ್ರತಿನಿಧಿ ಸೋಗಿನಲ್ಲಿ ಗ್ರಾಹಕರೊಬ್ಬರ ಖಾತೆಯಿಂದ ₹ 1.31 ಲಕ್ಷ ವರ್ಗಾಯಿಸಿಕೊಂಡು ವಂಚಿಸಲಾಗಿದೆ. 72 ವರ್ಷದ ವೃದ್ಧೆ ಈ ಬಗ್ಗೆ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ.

ಮಚ್ಚಿನಿಂದ ಹಲ್ಲೆ; ಇಬ್ಬರ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಪೆಟ್ರೋಲ್‌ಗೆ ಹಣ ಕೇಳಿದ್ದಕ್ಕಾಗಿ ಬಂಕ್ ಸಿಬ್ಬಂದಿ ಮೇಲೆಯೇ ಮಚ್ಚಿನಿಂದ ಹಲ್ಲೆ ಮಾಡಿದ್ದ ಆರೋಪದಡಿ ಉದಯ್, ಕಿರಣ್ ಎಂಬವರನ್ನು ಬ್ಯಾಟರಾಯನಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ‘ಇನ್ನೊಬ್ಬ ತಲೆ ಮರೆಸಿಕೊಂಡಿದ್ದಾನೆ. ಠಾಣೆ ವ್ಯಾಪ್ತಿಯ ಬಂಕೊಂದಕ್ಕೆ ಜೂನ್ 2ರ ರಾತ್ರಿ 9.30ರ ಸುಮಾರಿಗೆ ಹೋಗಿದ್ದ ಆರೋಪಿಗಳು ಕೃತ್ಯ ಎಸಗಿದ್ದಾರೆ. ಸಿಸಿಟಿವಿ ಕ್ಯಾಮೆರಾದ ದೃಶ್ಯ ಆಧರಿಸಿ ಸಿಬ್ಬಂದಿಯಿಂದ ದೂರು ಪಡೆದು ಆರೋಪಿಗಳನ್ನು ಬಂಧಿಸಲಾಗಿದೆ’ ಎಂದೂ ತಿಳಿಸಿದರು.

ಪೆಟ್ರೋಲ್ ಕೇಳುವ ನೆಪದಲ್ಲಿ ಸುಲಿಗೆ: ಪೆಟ್ರೋಲ್ ಕೇಳುವ ನೆಪದಲ್ಲಿ ವ್ಯಕ್ತಿಯೊಬ್ಬರಿಗೆ ಚಾಕು ತೋರಿಸಿ ಸುಲಿಗೆ ಮಾಡಿದ್ದ ಆರೋಪದಡಿ ಪ್ರಶಾಂತ್ ಅಲಿಯಾಸ್ ಆರ್.ವಿ. (25) ಎಂಬಾತನನ್ನು ರಾಮಮೂರ್ತಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ‘ಹೊರಮಾವು ಬಳಿಯ ವಿನಾಯಕ ಬಡಾವಣೆಯ ಪ್ರಶಾಂತ್ ಜೂನ್ 10ರಂದು ಕೃತ್ಯ ಎಸಗಿದ್ದ. ಈತನಿಂದ ₹ 50 ಸಾವಿರ ಮೌಲ್ಯದ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಡ್ರಗ್ಸ್: ನೈಜೀರಿಯಾ ಪ್ರಜೆ ಬಂಧನ

ಬೆಂಗಳೂರು: ರಾಮಮೂರ್ತಿನಗರ ಠಾಣೆ ವ್ಯಾಪ್ತಿಯ ಬಂಜಾರ್ ಬಡಾವಣೆಯಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ನೈಜೀರಿಯಾ ಪ್ರಜೆ ಜಾನ್ ಓಕಾಫಾರ್ (35) ಅವರನ್ನು ಪೊಲೀಸರು ಬಂಧಿಸಿದ್ದಾರೆ. ‘ಈತ ಜೂನ್ 7ರಂದು ಶಂಕಾಸ್ಪದವಾಗಿ ಓಡಾಡುತ್ತಿದ್ದ. ಆತನಿಂದ 32 ಗ್ರಾಂ ಎಂಡಿಎಂಎ ಮಾತ್ರೆ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಮಹಿಳೆಯರ ಹಿಂಬಾಲಿಸಿ ಸರಗಳವು- ಇಬ್ಬರ ಬಂಧನ: ಒಂಟಿ ಪಾದಚಾರಿ ಮಹಿಳೆಯರನ್ನು ಹಿಂಬಾಲಿಸಿ ಚಿನ್ನದ ಸರ ಕಿತ್ತೊಯ್ಯುತ್ತಿದ್ದ ಆರೋಪದಡಿ ಇಬ್ಬರನ್ನು ಹೆಬ್ಬಾಳ ಪೊಲೀಸರು ಬಂಧಿಸಿದ್ದಾರೆ. ‘ಆಸಿಫ್, ಹಾಗೂ ಅತೀಕ್ ಬಂಧಿತರು.

ಕುಂದು ಕೊರತೆ

ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.


ಮಲ್ಲೇಶ್ವರಂನಿಂದ ಮೆಜೆಸ್ಟಿಕ್ ರೈಲ್ವೆ ಪ್ಲಾಟ್‌ಫಾರ್ಮ್‌ಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ನೀರು ನಿಂತಿರುವುದು

ಮಳೆ ಬಂದರೆ ಕಾಲುವೆಯಾಗುವ ರಸ್ತೆ

ಮಲ್ಲೇಶ್ವರಂನಿಂದ ಮೆಜೆಸ್ಟಿಕ್‌ಗೆ ಸಂಪರ್ಕ ಕಲ್ಪಿಸುವ ರೈಲ್ವೆ ಪ್ಲಾಟ್‌ಫಾರ್ಮ್ ರಸ್ತೆಯು ಮಳೆ ಬಂದಾಗ ಕಾಲುವೆಯಾಗುತ್ತದೆ. ದ್ವಿಚಕ್ರ ವಾಹನ ಸವಾರರು ಪರದಾಡುವ ಸ್ಥಿತಿ ನಿರ್ಮಾಣವಾಗುತ್ತದೆ. 50 ಮೀಟರ್ ಅಂತರದಲ್ಲಿ ಇರುವ ರಾಜಕಾಲುವೆಗೆ ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಬೇಕು. 10–12 ವರ್ಷಗಳಿಂದ ಚರಂಡಿಯಲ್ಲಿರುವ ಹೂಳು ತೆಗೆದಿಲ್ಲ.

ರಸ್ತೆ ಮತ್ತೊಂದು ಭಾಗದಲ್ಲಿ ಚರಂಡಿ ವ್ಯವಸ್ಥೆ ಇಲ್ಲ. ಬಹುಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಅಂಡರ್ ಪೈಪ್ ಯೋಜನೆ ಅಪ್ರಯೋಜಕವಾಗಿದೆ. ನೆಹರೂ ವೃತ್ತದಿಂದ ಸ್ವಸ್ತಿಕ್ ವೃತ್ತದವರೆಗೆ ಮಳೆ ನೀರಿನ ಜೊತೆಗೆ ಚರಂಡಿ ನೀರು ರಸ್ತೆಯಲ್ಲಿ ಹರಿಯಲಿದೆ. ಸಂಬಂಧಿತ ಅಧಿಕಾರಿಗಳು ಸ್ವಚ್ಛತೆಯನ್ನು ಕಾಪಾಡುವುದರ ಮೂಲಕ ನಗರದ ಸೌಂದರ್ಯವನ್ನು ಹೆಚ್ಚಿಸಬೇಕು ಎಂಬುದು ಸಾರ್ವಜನಿಕರ ಆಗ್ರಹವಾಗಿದೆ.


ಸುಬ್ರಹ್ಮಣ್ಯ, ಶೇಷಾದ್ರಿಪುರಂ ನಿವಾಸಿ

‘ತ್ಯಾಜ್ಯ ತೆರವುಗೊಳಿಸಿ’

ಅಬ್ದುಲ್ ಬಾರೀಸ್ ಆಂಗ್ಲ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಮುಂಭಾಗದ ಹ್ಯಾನಿಸ್ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ ಹಾಕಲಾಗಿದೆ. ಇಡೀ ಪ್ರದೇಶವೇ ದುರ್ನಾತ ಬಿರುತ್ತಿದ್ದು, ಮೂಗು ಮುಚ್ಚಿ ಓಡಾಡುವ ಸ್ಥಿತಿ ನಿರ್ಮಾಣವಾಗಿದೆ. ಈ ಕುರಿತು ಹಲವು ಮನವಿ ಸಲ್ಲಿಸದರೂ ಪ್ರಯೋಜನವಾಗಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಆದಷ್ಟು ಬೇಗ ಇಲ್ಲಿರುವ ತ್ಯಾಜ್ಯವನ್ನು ತೆರವುಗೊಳಿಸಿ ಸ್ವಚ್ಛತೆ ಕಾಯ್ದುಕೊಳ್ಳಲು ಕ್ರಮವಹಿಸೇಕು ಎಂದು ಸಾರ್ವಜನಿಕರ ಆಗ್ರಹ.

ಫೈಸಲ್ ಅಹ್ಮದ್ ಮತ್ತು ಅನ್ವರ್, ಸ್ಥಳೀಯ ನಿವಾಸಿಗಳು


ಅಬ್ದುಲ್ ಬಾರೀಸ್ ಆಂಗ್ಲ ಪ್ರಾಥಮಿಕ ಮತ್ತು ಪ್ರೌಢಶಾಲೆ ಮಂಭಾಗದ ಹ್ಯಾನಿಸ್ ರಸ್ತೆಯ ಪಕ್ಕದಲ್ಲಿ ಬಿದ್ದಿರುವ ಕಸ ರಾಶಿ


ಕೃಷ್ಣರಾಜಪುರದ ಪೂರ್ವ ತಾಲ್ಲೂಕು ಕಚೇರಿಯಲ್ಲಿರುವ ಸಾರ್ವಜನಿಕ ಶೌಚಾಲಯ

ಶೌಚಾಲಯ ಸ್ವಚ್ಛಗೊಳಿಸಲು ಆಗ್ರಹ

ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಕೃಷ್ಣರಾಜಪುರದ ಪೂರ್ವ ತಾಲ್ಲೂಕು ಕಚೇರಿಯ ಆವರಣದಲ್ಲಿರುವ ಸಾರ್ವಜನಿಕ ಶೌಚಾಲಯ ನಿರ್ವಹಣೆಯಿಲ್ಲದೆ ದುರ್ನಾತ ಬೀರುತ್ತಿದೆ. ಕಚೇರಿಗೆ ಭೇಟಿ ನೀಡುವ ಹಿರಿಯ ನಾಗರಿಕರಿಗೆ, ಮಹಿಳೆಯರಿಗೆ ಮತ್ತು ಸಾರ್ವಜನಿಕರಿಗೆ ಶೌಚಾಲಯ ಬಳಸಲು ಕಿರಿಕಿರಿ ಆಗುವ ಸ್ಥಿತಿ ನಿರ್ಮಾಣವಾಗಿದೆ.

ರಾಜ್ಯ ರಾಜಧಾನಿಯ ಸರ್ಕಾರಿ ಕಚೇರಿಗಳಲ್ಲಿರುವ ಶೌಚಾಲಯಗಳ ದುಃಸ್ಥಿತಿಗೆ ಅಧಿಕಾರಿಗಳ ಬೇಜವಾಬ್ದಾರಿತನವೇ ಸಾಕ್ಷಿ. ಸಂಬಂಧಪಟ್ಟ ಸಿಬ್ಬಂದಿ ಶೌಚಾಲಯವನ್ನು ಸ್ವಚ್ಛಗೊಳಿಸಿ ಸಾರ್ವಜನಿಕರ ಬಳಕೆಗೆ ಅನುಕೂಲ ಮಾಡಿಕೊಡಬೇಕು ಎಂದು ಆಗ್ರಹಪಡಿಸುತ್ತೇವೆ.

ಕಿರಣ್ ಕುಮಾರ್.ಜೆ, ಮೇಡಹಳ್ಳಿ (ಕೆ ಆರ್ ಪುರ)

ಮಲ್ಲೇಶಪಾಳ್ಯ ಪಾದಚಾರಿ ಮಾರ್ಗದ ದುಃಸ್ಥಿತಿ

ಮಲ್ಲೇಶಪಾಳ್ಯ ಪಾದಚಾರಿ ಮಾರ್ಗದ ಚರಂಡಿ ಮೇಲ್ಭಾಗವು ಸಂಪೂರ್ಣ ಒಡೆದುಹೋಗಿ ತಿಂಗಳಾದರೂ ಸರಿಪಡಿಸಿಲ್ಲ. ಈ ಕುರಿತು ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಜನರ ಓಡಾಟಕ್ಕೆ ತೊಂದರೆಯಾಗುತ್ತಿದೆ. ಪಾದಚಾರಿ ಮಾರ್ಗ ಸಂಪೂರ್ಣ ಹಾಳಾಗಿದೆ. ಮಕ್ಕಳು, ವೃದ್ಧರು ನಡೆದಾಡುವುದೇ ಕಷ್ಟವಾಗಿದೆ. ಪಾದಚಾರಿ ಮಾರ್ಗವನ್ನು ದುರಸ್ತಿಗೊಳಿಸಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು ಎಂಬುದು ಸಾರ್ವಜನಿಕರ ಒತ್ತಾಯ.

ವೀರೇಶ, ಸ್ಥಳೀಯ ನಿವಾಸಿ



ಮಲ್ಲೇಶಪಾಳ್ಯ ಮುಖ್ಯರಸ್ತೆಯ ಪಕ್ಕದಲ್ಲಿರುವ ಪಾದಚಾರಿ ಮಾರ್ಗ ಸಂಪೂರ್ಣ ಹಾಳಾಗಿರುವುದು

ನಗರ ಅಭಿವೃದ್ಧಿಗೆ 'ವಿಷನ್ ಡಾಕ್ಯುಮೆಂಟ್'

ಆರ್‌.ಆರ್‌.ನಗರ ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ರಾಜಧಾನಿಯಲ್ಲಿ ಮತ್ತಷ್ಟು ವ್ಯವಸ್ಥಿತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ ಪೂರಕವಾಗಿ 'ವಿಷನ್ ಡಾಕ್ಯುಮೆಂಟ್' ಸಿದ್ಧಪಡಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಪ್ರಕಟಿಸಿದರು.

ನಾಗರಬಾವಿ ಬಿಡಿಎ ಸಂಕೀರ್ಣದ ಬಳಿ ನಡೆದ ಸಮಾರಂಭದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಉಲ್ಲಾಳ ಮತ್ತು ಅನ್ನಪೂರ್ಣೇಶ್ವರಿನಗರ ಮುಖ್ಯರಸ್ತೆಗೆ ಅಡ್ಡಲಾಗಿ 'ಗ್ರೇಡ್ ಸೆಪರೇಟರ್' ನಿರ್ಮಾಣ, ರಾಷ್ಟ್ರೀಯ ಹೆದ್ದಾರಿ-ತುಮಕೂರು ರಸ್ತೆ ಜಂಕ್ಷನ್‌ನಿಂದ ನಾಯಂಡಹಳ್ಳಿ ಜಂಕ್ಷನ್‌ವರೆಗೆ ಹಾಗೂ ಸುಮನಹಳ್ಳಿ ಜಂಕ್ಷನ್‌ನಿಂದ ಅಂಬೇಡ್ಕರ್ ಕಾಲೇಜಿನವರೆಗೆ ಕಾಂಕ್ರೀಟ್ ತಡೆಗೋಡೆಗಳ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು.

ಕೆಂಪೇಗೌಡರು ಕಟ್ಟಿದ ಬೆಂಗಳೂರು ನಗರ ಈಗ ಬೃಹತ್ತಾಗಿ ಬೆಳೆಯುತ್ತಿದೆ. ಈಗ ನಗರವನ್ನು ಯೋಜನಾಬದ್ಧವಾಗಿ ಅಭಿವೃದ್ಧಿಪಡಿಸುವ ಹೊಣೆ ಸರ್ಕಾರದ ಮೇಲಿದೆ. ಅದಕ್ಕೆ ಪೂರಕವಾಗಿ 'ವಿಷನ್ ಡಾಕ್ಯುಮೆಂಟ್' ಸಿದ್ಧಪಡಿಸಲಾಗುವುದು ಎಂದು ವಿವರಿಸಿದರು.

₹3,000 ಕೋಟಿ ವೆಚ್ಚದಲ್ಲಿ ರಾಜಕಾಲುವೆಗಳ ದುರಸ್ತಿ, ಪುನರುಜ್ಜೀವನ ಕಾಮಗಾರಿ ನಡೆಯುತ್ತಿದೆ. ಸಂಚಾರ ದಟ್ಟಣೆ ತಗ್ಗಿಸಲು 'ಸಿಗ್ನಲ್ ರಹಿತ ಕಾರಿಡಾರ್'ಗಳ ನಿರ್ಮಾಣ ಪ್ರಗತಿಯಲ್ಲಿದೆ. ಅಭಿವೃದ್ಧಿ ವಿಚಾರದಲ್ಲಿ ರಾಜಕಾರಣ ಮಾಡಲು ಬಯಸುವುದಿಲ್ಲ ಎಂದು ಹೇಳಿದರು.

'ನಮ್ಮ ಮೆಟ್ರೊ' ಎರಡನೇ ಹಂತದ ಕಾಮಗಾರಿಗಳನ್ನು 2024ರ ಅಂತ್ಯದೊಳಗೆ ಮುಗಿಸಲು ಗಡುವು ನೀಡಲಾಗಿದೆ. ₹ 15,000 ಕೋಟಿ ವೆಚ್ಚದ ಉಪನಗರ ರೈಲು ಯೋಜನೆಗೆ ಇದೇ 21ರಂದು ಪ್ರಧಾನಿ ಚಾಲನೆ ನೀಡುವರು' ಎಂದರು.

₹250 ಕೋಟಿ ವೆಚ್ಚದ **ಕಾಮಗಾರಿಗಳಿಗೆ ಚಾಲನೆ:** ಲಗ್ಗೆರೆ, ಅನ್ನಪೂರ್ಣೇಶ್ವರಿನಗರ, ಉಲ್ಲಾಳ, ಹೊಸಕೆರೆಹಳ್ಳಿ, ಕೆಂಚೇನಹಳ್ಳಿ ವ್ಯಾಪ್ತಿಯಲ್ಲಿ ಒಟ್ಟು ₹ 250 ಕೋಟಿ ವೆಚ್ಚದ ಕಾಮಗಾರಿಗಳಿಗೆ ಮುಖ್ಯಮಂತ್ರಿ ಚಾಲನೆ ನೀಡಿದರು.

ರಾಜರಾಜೇಶ್ವರಿ ನಗರ ಕ್ಷೇತ್ರದ ಶಾಸಕ, ಸಚಿವರಾದ ಮುನಿರತ್ನ, ಆರ್. ಅಶೋಕ, ವಿ.ಸೋಮಣ್ಣ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಸಂಸದ ಡಿ.ಕೆ. ಸುರೇಶ್, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಉಪಸ್ಥಿತರಿದ್ದರು.



ಸಮಾರಂಭದಲ್ಲಿ ಮನೆಗಳ ಹಕ್ಕುಪತ್ರ ಪಡೆದ ಫಲಾನುಭವಿಗಳ ಜತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಸದ ಡಿ.ಕೆ. ಸುರೇಶ್, ಸಚಿವರಾದ ಮುನಿರತ್ನ, ವಿ.ಸೋಮಣ್ಣ ಇದ್ದಾರೆ – ಪ್ರಜಾವಾಣಿ ಚಿತ್ರ

ಸಂಸದರು – ಸಚಿವರ ವಾಕ್ಸಮರ

ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸಂಸದ ಡಿ.ಕೆ.ಸುರೇಶ್ ಹಾಗೂ ಸಚಿವ ಮುನಿರತ್ನ ನಡುವೆ ವೇದಿಕೆಯಲ್ಲೇ ವಾಕ್ಸಮರ ನಡೆಯಿತು.

'ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದಲ್ಲಿ ಕಾಮಗಾರಿಗಳೇ ನಡೆಯುವುದಿಲ್ಲ. ಕ್ಷೇತ್ರದ ಹೊರಗಿನವರಿಗೆ ವಸತಿ ಯೋಜನೆಗಳ ಅಡಿಯಲ್ಲಿ ಮನೆಗಳನ್ನು ಹಂಚಿಕೆ ಮಾಡಲಾಗುತ್ತಿದೆ' ಎಂದು ಸುರೇಶ್ ಆರೋಪಿಸಿದರು.

'ಇಲ್ಲಿ ಅಭಿವೃದ್ಧಿ ವಿಚಾರದಲ್ಲಿ ನಾನು ರಾಜಕೀಯ ಮಾಡುವುದಿಲ್ಲ. ಯಾರೇ ಹೊರಗಿನವರು ಮನೆ ಪಡೆದಿರುವುದನ್ನು ತೋರಿಸಿದರೆ ಅವರನ್ನು ಹೊರಗಟ್ಟುತ್ತೇನೆ' ಎಂದು ಮುನಿರತ್ನ ಸವಾಲು ಹಾಕಿದರು.

'ಬಡವರ ವಸತಿಗೆ 5,000 ಎಕರೆ'

ಬೆಂಗಳೂರು: ನಗರದಲ್ಲಿ ಬಡ ಕುಟುಂಬಗಳಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲು ಬೆಂಗಳೂರು ನಗರ ಹೊರವಲಯದಲ್ಲಿ 5,000 ಎಕರೆ ಜಮೀನು ಮೀಸಲಿಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ರಾಜರಾಜೇಶ್ವರಿ ನಗರ ಕ್ಷೇತ್ರದ ವ್ಯಾಪ್ತಿಯ ಕೊಳೆಗೇರಿ ನಿವಾಸಿಗಳಿಗೆ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ 1,588 ಮನೆಗಳ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಅವರು, 'ಐದು ವರ್ಷಗಳಲ್ಲಿ ಎಲ್ಲರಿಗೂ ಸೂರು ಒದಗಿಸುವ ಗುರಿ ಸರ್ಕಾರದ್ದಾಗಿದೆ. ಇದಕ್ಕಾಗಿ ಸರ್ಕಾರಿ ಜಮೀನು ಗುರುತಿಸಿ, ಮೀಸಲಿಡಲಾಗುವುದು. ನಗರ ಪ್ರದೇಶದಲ್ಲಿ ಒಂದು ಲಕ್ಷ ಮನೆಗಳ ನಿರ್ಮಾಣ ಗುರಿ ಇದೆ. ಇದಕ್ಕಾಗಿ ಫಲಾನುಭವಿಗಳ ಪಾಲಿನ ವಂತಿಕೆ ಭರಿಸಲು ಸರ್ಕಾರದ ಖಾತರಿಯಲ್ಲಿ ₹ 500 ಕೋಟಿ ಸಾಲ ಪಡೆಯಲಾಗುವುದು' ಎಂದು ಹೇಳಿದರು.

'ಜನ್ಮಜಾತ ಹೃದಯ ಕಾಯಿಲೆ ಮಕ್ಕಳಲ್ಲಿ ಹೆಚ್ಚಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನ್ಮಜಾತ ಹೃದಯ ಕಾಯಿಲೆ ಮಕ್ಕಳಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ಚಿಕಿತ್ಸೆ ಲಭ್ಯವಿದ್ದರೂ, ಕುಟುಂಬದ ಆರ್ಥಿಕ ಸ್ಥಿತಿಯಿಂದಾಗಿ ಶೇ 20ರಷ್ಟು ಮಕ್ಕಳು ಮೊದಲ ಜನ್ಮದಿನಕ್ಕೇ ಮೊದಲೇ ಸಾಯುತ್ತಾರೆ' ಎಂದು ನಾರಾಯಣ ಹೆಲ್ತ್‌ನ ಸ್ಥಾಪಕ ಅಧ್ಯಕ್ಷ ಡಾ.ದೇವಿಪ್ರಸಾದ್ ಶೆಟ್ಟಿ ಕಳವಳ ವ್ಯಕ್ತಪಡಿಸಿದರು.

ಮಕ್ಕಳಿಗೆ ಶಸ್ತ್ರಚಿಕಿತ್ಸೆ ಒದಗಿಸಲು ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಆಸ್ಪತ್ರೆಗೆ ₹ 50 ಲಕ್ಷ ದೇಣಿಗೆ ನೀಡಿದೆ. 125 ಮಕ್ಕಳಿಗೆ ಉಚಿತವಾಗಿ ಶಸ್ತ್ರಚಿಕಿತ್ಸೆ ನೆರವೇರಿಸಿದೆ. 'ದೇಶದಲ್ಲಿ 2.4 ಲಕ್ಷಕ್ಕೂ ಹೆಚ್ಚು ಮಕ್ಕಳು ಹೃದಯ ರಂಧ್ರದೊಂದಿಗೆ ಜನಿಸುತ್ತಾರೆ. ಇದು, ಸಾವಿನ ಪ್ರಮಾಣ ಏರಿಕೆಗೆ ಕಾರಣವಾಗಿದೆ. ಚಿಕಿತ್ಸಾ ವೆಚ್ಚದು ಬಾರಿಯಾದ ಕಾರಣ ನೆರವು ನೀಡಲು ದಾನಿಗಳು ಮುಂದೆ ಬರಬೇಕು' ಎಂದು ಅಭಿಪ್ರಾಯಪಟ್ಟರು.


ಡಾ.ದೇವಿ ಶೆಟ್ಟಿ

ಸೆಂಟಮ್ ಎಲೆಕ್ಟ್ರಾನಿಕ್ಸ್ ಅಧ್ಯಕ್ಷ ಅಪ್ಪಾರಾವ್ ಮಲ್ಲವರಪು ಅವರು, 'ಮಕ್ಕಳ ಆರೋಗ್ಯ, ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ದೊರೆಯಬೇಕು. ಕಾರ್ಪೊರೇಟ್ ಕಂಪನಿಗಳ ಸಿಎಸ್‌ಆರ್ ನಿಧಿಯಡಿ ಸಾಮಾಜಿಕ ಕಾರ್ಯಗಳಿಗೆ ಕೈಜೋಡಿಸಲಾಗುತ್ತಿದೆ' ಎಂದರು.

ಕೋವಿಡ್: ವಾರದಲ್ಲಿ 2,623 ಪ್ರಕರಣ

ಬೆಂಗಳೂರು: ನಗರದಲ್ಲಿ ಒಂದು ವಾರದಲ್ಲಿ 2,623 ಮಂದಿಗೆ ಕೊರೊನಾ ಸೋಂಕು ತಗುಲಿರುವುದು ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 3,496ಕ್ಕೆ ಏರಿಕೆಯಾಗಿದೆ.

ದೈನಂದಿನ ಸೋಂಕಿತರ ಸಂಖ್ಯೆ ಏಪ್ರಿಲ್, ಮೇ ತಿಂಗಳಲ್ಲಿ 50ರ ಆಸುಪಾಸಿನಲ್ಲಿತ್ತು. ಈ ತಿಂಗಳು ಹೊಸ ಪ್ರಕರಣಗಳ ಸಂಖ್ಯೆ ಮತ್ತೆ ಏರುಗತಿ ಪಡೆದಿದೆ. ವಾರದಲ್ಲಿ 1,455 ಮಂದಿ ಚೇತರಿಸಿಕೊಂಡಿದ್ದಾರೆ. ಮರಣ ಪ್ರಕರಣ ಹೊಸದಾಗಿ ವರದಿಯಾಗಿಲ್ಲ. ಸೋಂಕು ದೃಢಪ್ರಮಾಣ ಶೇ 2.15ರಷ್ಟಿದೆ. ಕೋವಿಡ್ ಪೀಡಿತರ ಸಂಖ್ಯೆ 17.91 ಲಕ್ಷ ದಾಟಿದೆ. ಅವರಲ್ಲಿ 17.71 ಲಕ್ಷಕ್ಕೂ ಅಧಿಕ ಮಂದಿ ಚೇತರಿಸಿಕೊಂಡಿದ್ದಾರೆ.

11 ಜಿಲ್ಲೆಗಳಲ್ಲಿ ಪ್ರಕರಣ: ಭಾನುವಾರ 11 ಜಿಲ್ಲೆಗಳಲ್ಲಿ ಪ್ರಕರಣಗಳು ಪತ್ತೆಯಾಗಿದ್ದು, 463 ಮಂದಿ ಸೋಂಕಿತರಾಗಿದ್ದಾರೆ. ಬೆಂಗಳೂರಿನಲ್ಲಿ 429 ಪ್ರಕರಣಗಳು ವರದಿಯಾಗಿವೆ.

'ವಿದ್ಯಾರ್ಥಿಗಳು ಬಹುಮುಖಿ ಆಸಕ್ತಿ ಬೆಳೆಸಿಕೊಳ್ಳಲಿ'

ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಹೆಚ್ಚಿನ ಅವಕಾಶ: ಸಚಿವ ಅಶ್ವತ್ಥ ನಾರಾಯಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಯ ಶಿಕ್ಷಣ ನೀತಿಯು ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶಗಳನ್ನು ಸೃಷ್ಟಿಸಲಿದೆ. ವಿದ್ಯಾರ್ಥಿಗಳು ಬಹುಮುಖಿ ಆಸಕ್ತಿ ಬೆಳೆಸಿಕೊಂಡು ಇದರ ಸದ್ಬಳಕೆ ಮಾಡಿಕೊಳ್ಳಬೇಕು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ರಾಜಮಹಲ್ ಗುಟ್ಟಹಳ್ಳಿಯ ವಿದ್ಯಾಜ್ಯೋತಿ ಚಾರಿಟಬಲ್ ಟ್ರಸ್ಟ್ ಭಾನುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಿ ಮಾತನಾಡಿದರು.


ರಾಜಮಹಲ್ ಗುಟ್ಟಹಳ್ಳಿಯ ವಿದ್ಯಾಜ್ಯೋತಿ ಚಾರಿಟಬಲ್ ಟ್ರಸ್ಟ್ ಭಾನುವಾರ ಏರ್ಪಡಿಸಿದ್ದ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಣಾ ಕಾರ್ಯಕ್ರಮದಲ್ಲಿ ಮಲ್ಲೇಶ್ವರ ಶಾಸಕರೂ ಆಗಿರುವ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಭಾಗವಹಿಸಿದ್ದರು

'ರಾಷ್ಟ್ರೀಯ ಶಿಕ್ಷಣ ನೀತಿಯು ಕುಗ್ರಾಮದಲ್ಲೂ ಗುಣಮಟ್ಟದ ಶಿಕ್ಷಣ ಸಿಗುವಂತೆ ಮಾಡಲಿದೆ. ವಿದ್ಯಾರ್ಥಿಗಳು ಏನನ್ನು ಕಲಿಯುತ್ತಾರೋ ಅದನ್ನು ಸಂತೋಷದಿಂದ ಕಲಿಯಬೇಕು. ಉತ್ತಮ ಅಂಕಪಟ್ಟಿಗೆ ಗುರಿಯಾಗಬಾರದು. ಬದುಕನ್ನು ಅರ್ಥಪೂರ್ಣವಾಗಿಸಿಕೊಳ್ಳಬೇಕು' ಎಂದು ನುಡಿದರು.

'ಗುರುಕ್ಕೆ ಮತ್ಸರ ಇರಬಾರದು. ನಾವೆಲ್ಲರೂ ಒಳ್ಳೆಯತನ ಬೆಳೆಸಿಕೊಳ್ಳಬೇಕು. ಇಂತಹ ಕಾರ್ಯಕ್ರಮಗಳು ಹೆಚ್ಚಾಗಬೇಕು. ಒಳ್ಳೆಯ ಸಮಾಜ ಕಟ್ಟಬೇಕು ಎಂಬುದೇ ಇಂತಹ ಕಾರ್ಯಕ್ರಮಗಳ ಸಂದೇಶವಾಗಿರುತ್ತದೆ' ಎಂದು ಅಶ್ವತ್ಥನಾರಾಯಣ ಅವರು ಹೇಳಿದರು.

ಟ್ರಸ್ಟ್‌ನ ರಾಜೇಶ್, ನಾಗೇಂದ್ರ, ರಘುನಂದನ್, ನಾಗೇಶ್ ಬಾಬು ಇದ್ದರು.

ರಷ್ಯಾ: ಸರಕು ಸಾಗಣೆಗೆ ಹೊಸ ಮಾರ್ಗ

ಬ್ಲೂಮ್‌ಬರ್ಗ್: 'ಭಾರತಕ್ಕೆ ರಷ್ಯಾದ ಸರಕುಗಳ ಸಾಗಣೆಗೆ ಇರಾನ್ ಹೊಸ ವ್ಯಾಪಾರಿ ಮಾರ್ಗ ಆರಂಭಿಸಿದೆ' ಎಂದು ಇರಾನ್‌ನ ಸರ್ಕಾರಿ ಸ್ವಾಮ್ಯದ ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಶಿಪ್ಪಿಂಗ್ ಲೈನ್ಸ್ ಗ್ರೂಪ್ ತಿಳಿಸಿದೆ' ಎಂದು ಬಂದರು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

41 ಟನ್ ತೂಕದ ಕಂಟೇನರ್‌ಗಳನ್ನು ಒಳಗೊಂಡ ರಷ್ಯಾದ ಸರಕನ್ನು ಹೊತ್ತ ಹಡಗು ಸೆಂಟ್ ಪೀಟರ್ಸ್‌ಬರ್ಗ್‌ನಿಂದ ಬಂದರು ನಗರ ಅಸ್ತ್ರಾಖಾನ್ ಕಡೆಗೆ ಪ್ರಯಾಣ ಬೆಳೆಸಿದೆ ಎಂದು ಇರಾನ್‌ನ ಸರ್ಕಾರಿ ಸ್ವಾಮ್ಯದ 'ಇಸ್ಲಾಮಿಕ್ ರಿಪಬ್ಲಿಕ್ ನ್ಯೂಸ್ ಏಜೆನ್ಸಿ' ವರದಿ ಮಾಡಿದೆ.

ಹೊಸ ವ್ಯಾಪಾರಿ ಮಾರ್ಗವನ್ನು ಪ್ರಾಯೋಗಿಕವಾಗಿ ಪರೀಕ್ಷಿಸುವ ಸಲುವಾಗಿ ಹೊರಟಿರುವ ಈ ಸರಕು ಹಡಗಿನ ಕುರಿತು ಹೆಚ್ಚಿನ ಮಾಹಿತಿಗಳು ಲಭ್ಯವಾಗಿಲ್ಲ ಎಂದು ಈ ಕುರಿತು ಏಜೆನ್ಸಿ ವರದಿ ತಿಳಿಸಿದೆ.

ನಾಗ್ಪುರದ ವಿಜ್ಞಾನ ಸಂಸ್ಥೆ ವೆಬ್‌ಸೈಟ್ ಹ್ಯಾಕ್

ನಾಗ್ಪುರ (ಪಿಟಿಐ): ಪ್ರವಾದಿ ಮಹಮ್ಮದ್ ಕುರಿತ ಅವಹೇಳನಕಾರಿ ಹೇಳಿಕೆ ಪ್ರಕರಣದ ಹಿನ್ನೆಲೆಯಲ್ಲಿ 'ಡ್ರ್ಯಾಗನ್ ಫೋರ್ಸ್ ಮಲೇಷ್ಯಾ' ಎನ್ನುವ ಹ್ಯಾಕರ್ ಗುಂಪು ಭಾನುವಾರ ಇಲ್ಲಿನ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ವೆಬ್‌ಸೈಟ್ ಅನ್ನು ಹ್ಯಾಕ್ ಮಾಡಿದೆ ಎಂದು ಪೊಲೀಸರು ತಿಳಿಸಿದ್ದಾರೆ. ವೆಬ್‌ಸೈಟ್‌ನ ಮುಖಪುಟದಲ್ಲಿ 'ಜನರು ಒಂದಾಗಿ ಭಾರತದ ವಿರುದ್ಧ ಅಭಿಯಾನ ನಡೆಸಬೇಕು' ಎಂದು ಒತ್ತಾಯಿಸುವ ಸಂದೇಶ ಇದೆ ಎಂದು ಹೇಳಿದರು.


ಕೃಷಿಕ್ ಸರ್ವೋದಯ ಫೌಂಡೇಷನ್‌ನಿಂದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಪಡೆದು ಅಖಿಲ ಭಾರತ ಬ್ಯಾಂಕಿಂಗ್ ಸಿಬ್ಬಂದಿ ಮಂಡಳಿ ಪರೀಕ್ಷೆಯಲ್ಲಿ ಆಯ್ಕೆಯಾಗಿರುವ ಈರನಗೌಡ ಹಾಲಿಕಟ್ಟಿ, ಅನಿಕೇತ ಸೂರ್ಯವಂಶಿ, ರಾಕೇಶ್ ಮದಿಬಾವಿ, ನವೀನ್ ಚಂದನ್ ಅವರಿಗೆ ಶನಿವಾರ ಅಭಿನಂದಿಸಲಾಯಿತು. ಕೆನರಾಬ್ಯಾಂಕ್‌ನ ನಿವೃತ್ತ ಪ್ರಧಾನ ವ್ಯವಸ್ಥಾಪಕ ಡಾ.ಎಸ್‌.ಟಿ.ರಾಮಚಂದ್ರ, ಫೌಂಡೇಷನ್ ಕಾರ್ಯದರ್ಶಿ ಸಿ.ಕೆ.ಶಿವಣ್ಣ, ಅಧ್ಯಕ್ಷ ಡಾ.ವೈ.ಕೆ.ಪುಟ್ಟಸೋಮೇಗೌಡ, ಟ್ರಸ್ಟಿ ಟಿ.ತಿಮ್ಮೇಗೌಡ ಮತ್ತು ಖಜಾಂಚಿ ಡಾ.ಬಿ.ಎಲ್‌.ಭಾಗ್ಯಲಕ್ಷ್ಮಿ ಇದ್ದರು

'ಕೆ.ಸಿ. ವ್ಯಾಲಿ ಮಾದರಿ ದೇಶದಾದ್ಯಂತ ಜಾರಿಗೆ ಕ್ರಮ'

ನವದೆಹಲಿ: ತ್ಯಾಜ್ಯ ನೀರನ್ನು ಮರುಬಳಕೆ ಮಾಡುವ ಯೋಜನೆಗಳನ್ನು ವೇಗಗೊಳಿಸಲು ಉದ್ದೇಶಿಸಿರುವ ಕೇಂದ್ರ ಸರ್ಕಾರವು ಕರ್ನಾಟಕದ ಕೆ.ಸಿ. (ಕೋರಮಂಗಲ–ಚಲ್ಲಘಟ್ಟ) ವ್ಯಾಲಿ ಏತ ನೀರಾವರಿ ಯೋಜನೆಯ ಮಾದರಿಯನ್ನು ದೇಶದಾದ್ಯಂತ ಜಾರಿಗೆ ತರಲು ಮುಂದಾಗಿದೆ.

'ಕೇಂದ್ರ ಜಲಶಕ್ತಿ ಸಚಿವಾಲಯವು ಕೆರೆಗಳನ್ನು ತುಂಬಿಸಲು ಮರುಬಳಕೆಯ ನೀರನ್ನು ಪೂರೈಸುವ ಕರ್ನಾಟಕ ಸರ್ಕಾರದ ಕೆ.ಸಿ. ವ್ಯಾಲಿ ಯೋಜನೆಯನ್ನು ಅಧ್ಯಯನ ಮಾಡಿದೆ. ಕರ್ನಾಟಕದಲ್ಲಿ ಸಂಸ್ಕರಿಸಿದ ನೀರಿನಿಂದ ಕೆರೆಗಳನ್ನು ತುಂಬಿಸಿದ್ದರಿಂದ ಅಂತರ್ಜಲ ಮರುಪೂರಣ ಯೋಜನೆಯು ಉತ್ತಮ ಫಲಿತಾಂಶ ವನ್ನು ನೀಡಿದೆ. ಹಾಗಾಗಿ, ಈ ಯೋಜನೆಯನ್ನು ಇತರ ರಾಜ್ಯಗಳಲ್ಲಿಯೂ ಅನುಷ್ಠಾನಕ್ಕೆ ತರಲು ಮುಂದಾಗಿದೆ' ಎಂದು ಸಚಿವಾಲ ಯದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ವಿವಿಧ ಹಂತಗಳಲ್ಲಿ ತ್ಯಾಜ್ಯ ನೀರನ್ನು ಸಂಸ್ಕರಿಸಿ, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿನ 191 ಕೆರೆಗಳನ್ನು ತುಂಬಲು ಸರಬರಾಜು ಮಾಡಲಾಗುತ್ತಿದೆ. ಇದೀಗ ಈ ಯೋಜನೆಯನ್ನು ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ಮತ್ತು ರಾಮನಗರ ಜಿಲ್ಲೆಯ ಕನಕಪುರದ ಕೆಲ ಭಾಗಗಳಿಗೆ ವಿಸ್ತರಿಸಲಾಗುತ್ತಿದೆ.

'ಅಟಲ್ ಭೂಜಲ ಯೋಜನೆಯಡಿ ಕೆ.ಸಿ. ವ್ಯಾಲಿ ಯೋಜನೆಗೆ ಹಣವನ್ನು ನೀಡುವಂತೆ ಕರ್ನಾಟಕ ಸರ್ಕಾರವು ಮಾಡಿರುವ ಮನವಿಗೆ ಜಲಶಕ್ತಿ ಸಚಿವಾಲಯ ಒಪ್ಪಿಗೆ ನೀಡಿದೆ ಎಂದು ತಿಳಿಸಿದ್ದಾರೆ.

'ಶ್ರೀಗುರೂಜಿ' ಕೃತಿ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಜಯನಗರ ಯುವಪಥದಲ್ಲಿ ರಾಷ್ಟ್ರೋತ್ಥಾನ ಸಾಹಿತ್ಯ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಶ್ರೀಗುರೂಜಿ' (ಮೂಲಹಿಂದಿ: ರಂಗಾ ಹರಿ, ಕನ್ನಡಾನುವಾದ: ಚಂದ್ರಶೇಖರ ಭಂಡಾರಿ) ಕೃತಿಯನ್ನು ಬಾಗಲಕೋಟೆ – ಚಿತ್ರದುರ್ಗ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಬಿಡುಗಡೆ ಮಾಡಿದರು

ಈ ಸಂದರ್ಭದಲ್ಲಿಅವರು, 'ವಿಶೇಷ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ ಗುರೂಜಿ ಮೇಲೂ ಆರೋಪಗಳಿದ್ದವು. ಸುಳ್ಳು ಆರೋಪದಿಂದ ಗುರೂಜಿ ಬೇಸರಗೊಂಡಿದ್ದರು. ಬಳಿಕ ಆ ಹೇಳಿಕೆಯನ್ನು ನೀಡಿಲ್ಲ ಎಂಬುದನ್ನು ದಾಖಲೆ ಸಹಿತ ಸಾಬೀತು ಪಡಿಸಿದ್ದರು' ಎಂದರು.

'ವಿಶ್ವವಾಣಿ' ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು, 'ಕಾಲಕ್ಕೆ ತಕ್ಕಂತೆ ಬದಲಾವಣೆಗೆ ಒಡ್ಡಿಕೊಳ್ಳಬೇಕಿದೆ. ಶಾಸಕರು, ಸಂಸದರಾದ ಮೇಲೆ ಆರ್‌ಎಸ್‌ಎಸ್‌ಗೆ ಬರುತ್ತಾರೆ. ಇದು ಉತ್ತಮ ಬೆಳವಣಿಗೆ ಅಲ್ಲ' ಎಂದು ಹೇಳಿದರು.


ನಗರದಲ್ಲಿ ಶನಿವಾರ 'ರಾಷ್ಟ್ರೋತ್ಥಾನ ಸಾಹಿತ್ಯ' ಆಯೋಜಿಸಿದ್ದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಚಿತ್ರದುರ್ಗದ ಭೋವಿ ಗುರುಪೀಠದ ಸಿದ್ದರಾಮೇಶ್ವರ ಸಂಸ್ಥಾನ ಮಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ (ಎಡದಿಂದ ಮೂರನೆಯವರು) ಕನ್ನಡ ಅನುವಾದಕ ಚಂದ್ರಶೇಖರ ಭಂಡಾರಿ (ಎಡಗಡೆಯವರು) ಅವರ 'ಶ್ರೀಗುರೂಜಿ' ಪುಸ್ತಕ ಬಿಡುಗಡೆ ಮಾಡಿದರು. ಆರ್‌ಎಸ್‌ಎಸ್‌ನ ಜ್ಯೇಷ್ಠ ಪ್ರಚಾರಕ ಸು. ರಾಮಣ್ಣ, ಪತ್ರಕರ್ತ ವಿಶ್ವೇಶ್ವರ ಭಟ್ ಮತ್ತು ರಾಷ್ಟ್ರೋತ್ಥಾನ ಪರಿಷತ್ತಿನ ಅಧ್ಯಕ್ಷ ಎಂ.ಪಿ.ಕುಮಾರ್ ಇದ್ದರು – ಪ್ರಜಾವಾಣಿ ಚಿತ್ರ

ಆರ್‌ಎಸ್‌ಎಸ್‌ನ ಜ್ಯೇಷ್ಠ ಪ್ರಚಾರಕ ಸು.ರಾಮಣ್ಣ ಅವರು ಗುರೂಜಿ ಅವರ ಜೊತೆಗಿನ ಒಡನಾಟ ಸ್ಮರಿಸಿದರು. ಕೃತಿ ಅನುವಾದಕ ಚಂದ್ರಶೇಖರ ಭಂಡಾರಿ, ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಪಿ.ಕುಮಾರ್ ಹಾಜರಿದ್ದರು.

ಸಂಕ್ಷಿಪ್ತ ಸುದ್ದಿ

'ಎಸ್ಟಿ ಮೀಸಲಾತಿ ಹೋರಾಟ ನಿಲ್ಲದು'

ಸಿಂಧನೂರು (ರಾಯಚೂರು ಜಿಲ್ಲೆ): 'ಪರಿಶಿಷ್ಟ ಪಂಗಡದ ಮೀಸಲಾತಿ ಹೆಚ್ಚಿಸಬೇಕು ಎಂದು ನಡೆಯುತ್ತಿರುವ ಹೋರಾಟದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ' ಎಂದು ಸಾರಿಗೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಬಿ.ಶ್ರೀರಾಮುಲು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಕುರಿತು ಮುಖ್ಯಮಂತ್ರಿ ಅವರೊಂದಿಗೆ ಅನೇಕ ಬಾರಿ ಚರ್ಚಿಸಿದ್ದೇನೆ. ಕಾನೂನು ತೊಡಕು ಇರುವುದರಿಂದ ಅದನ್ನು ಸರಿಪಡಿಸುವ ಕೆಲಸ ಮಾಡುತ್ತಿದ್ದೇವೆ. ಈಗಿನ ಬಿಜೆಪಿ ಸರ್ಕಾರದ ಅವಧಿಯಲ್ಲಿಯೇ ನಾಗಮೋಹನ ದಾಸ್ ವರದಿಯಂತೆ ಪರಿಶಿಷ್ಟ ಪಂಗಡಕ್ಕೆ ಶೇ 7.5 ಮೀಸಲಾತಿ ಜಾರಿಗೆ ತರುತ್ತೇವೆ. ಇದರಲ್ಲಿ ಅನುಮಾನ ಪಡುವ ಅಗತ್ಯವಿಲ್ಲ' ಎಂದರು.

ಅಗತ್ಯ ಔಷಧ: ಸಗಟು ಖರೀದಿಯಲ್ಲಿ ವ್ಯತ್ಯಯ

ಬೆಂಗಳೂರು: ಔಷಧ ತಯಾರಕರು ಮತ್ತು ಪೂರೈಕೆದಾರರ ಅಸಹಕಾರದಿಂದ ರಾಜ್ಯದಲ್ಲಿ ಅಗತ್ಯ ಔಷಧಗಳ ಸಗಟು ಖರೀದಿಯಲ್ಲಿ ವ್ಯತ್ಯಯವಾಗಿದೆ. ಇದರಿಂದಾಗಿ ಆಸ್ಪತ್ರೆಗಳು ಅಗತ್ಯತೆಗೆ ಅನುಗುಣವಾಗಿ ಸ್ಥಳೀಯ ಮಟ್ಟದಲ್ಲಿ ಔಷಧಗಳನ್ನು ಖರೀದಿಸಲು ಆರಂಭಿಸಿವೆ.

'ಸ್ಥಳೀಯ ಮಟ್ಟದಲ್ಲಿ ಔಷಧ ಖರೀದಿಸಲು ಆರೋಗ್ಯ ಇಲಾಖೆ ಅವಕಾಶ ನೀಡಿ, ಹಣ ಬಿಡುಗಡೆ ಮಾಡಿದೆ. ಆದ್ದರಿಂದ ಸದ್ಯಕ್ಕೆ ಆಸ್ಪತ್ರೆಗಳು ಔಷಧಗಳ ಸಮಸ್ಯೆ ಎದುರಿಸುತ್ತಿಲ್ಲ. 450 ಅಗತ್ಯ ಔಷಧಗಳ ಪೈಕಿ 50 ಔಷಧಗಳು ಗುತ್ತಿಗೆದಾರ ಸಂಸ್ಥೆಯ ಬಳಿ ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನು ಇದೆ. ಔಷಧಗಳ ಪೂರೈಕೆಗೆ ಸಂಬಂಧಿಸಿದ ಟೆಂಡರ್‌ಗೆ ಹೆಚ್ಚಿನ ಸಂಖ್ಯೆಯಲ್ಲಿ ಕಂಪನಿಗಳು ಸ್ಪಂದಿಸದಿರುವುದರಿಂದ ಔಷಧದ ಕೊರತೆ ಎದುರಿಸುತ್ತಿದ್ದೇವೆ' ಎಂದು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದ (ಕೆಎಸ್‌ಎಂಎಸ್‌ಸಿಎಲ್) ವ್ಯವಸ್ಥಾಪಕ ನಿರ್ದೇಶಕ ಎನ್‌.ಎಂ. ನಾಗರಾಜ್ ತಿಳಿಸಿದರು.

ಬೆಂಕಿ ಹಚ್ಚಿ ಕೊಲೆ ಯತ್ನ

ನಾಗಮಂಗಲ (ಮಂಡ್ಯ): ಪಟ್ಟಣದ ಹೊರವಲಯದಲ್ಲಿ ಮಾರಕಾಸ್ತ್ರಗಳಿಂದ ಮಹಿಳೆ ಮೇಲೆ ಹಲ್ಲೆ ನಡೆಸಿ ಪೆಟ್ರೋಲ್ ಸುರಿದು ಕೊಲೆಗೆ ಯತ್ನಿಸಿದ ಘಟನೆ ಪಟ್ಟಣದ ಸೂಳೆಕೆರೆ ಬಳಿ ನಡೆದಿದೆ.

ಮಂಡ್ಯ ತಾಲ್ಲೂಕಿನ ಉಮ್ಮಡಹಳ್ಳಿ ಗೇಟ್‌ನ ಪ್ರಭಾ ಪ್ರಾಣಾಪಾಯದಿಂದ ಪಾರಾದವರು. ಬೆಂಗಳೂರಿನ ಗೊಲ್ಲರ ಹಟ್ಟಿಯ ಬಸವರಾಜು ಪ್ರಭಾ ಅವರನ್ನು ಕರೆತಂದು ಬಂದು ಕೃತ್ಯ ಎಸಗಿದ್ದಾನೆ ಎಂದು ಹೇಳಲಾಗಿದೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಫಿನಾಡಿನ ಯೋಧನ ಶವ ಬಿಹಾರದಲ್ಲಿ ಪತ್ತೆ

ಚಿಕ್ಕಮಗಳೂರು: ತಾಲ್ಲೂಕಿನ ಮಸಿಗದ್ದೆಯ ಯೋಧ ಎಂ.ಎನ್. ಗಣೇಶ್ (36) ಅವರ ಮೃತದೇಹ ಬಿಹಾರದ ಕಿಶನ್‌ಗಂಜ್ ಪ್ರದೇಶದಲ್ಲಿ ಶನಿವಾರ ಪತ್ತೆಯಾಗಿದೆ. ಗಣೇಶ್ ಅವರು ಏ.24ರಂದು ಊರಿಗೆ ಬಂದಿದ್ದರು. ಜೂ. 9ರಂದು ವಾಪಸ್ ಹೋಗಿದ್ದರು.

'ಗಣೇಶ್ ಅವರು ಜೂ.12ರಂದು ಕರ್ತವ್ಯಕ್ಕೆ ಹಾಜರಾಗಬೇಕಿತ್ತು. ಶನಿವಾರ ತಡರಾತ್ರಿ ಆಂಬುಲೆನ್ಸ್ ಸಿಬ್ಬಂದಿಯೊಬ್ಬರು ಫೋನ್ ಮಾಡಿ, ಕಿಶನ್‌ಗಂಜ್ ಬಳಿಯ ರಸ್ತೆ ಬದಿ ಗಣೇಶ್ ಅವರ ಶವ ಪತ್ತೆಯಾಗಿದೆ ಎಂದು ತಿಳಿಸಿದರು' ಎಂದು ಗಣೇಶ್ ಅವರ ಪತ್ನಿ ಶ್ವೇತಾ 'ಪ್ರಜಾವಾಣಿ'ಗೆ ತಿಳಿಸಿದರು.

ಗಣೇಶ್ ಅವರು ಮಸಿಗದ್ದೆಯ ಕೂಲಿಕಾರ ನಾಗಯ್ಯ ಮತ್ತು ಗಂಗಮ್ಮ ದಂಪತಿ ಪುತ್ರ. ಪ್ರಸ್ತುತ ಗುವಾಹಟಿಯಲ್ಲಿ ಸೇವೆಯಲ್ಲಿದ್ದರು. ಅವರಿಗೆ ವಿವಾಹವಾಗಿ ಆರು ವರ್ಷವಾಗಿತ್ತು. ಪುತ್ರಿ ಆದ್ಯಾ ಇದ್ದಾರೆ.

ಕಾಂಗ್ರೆಸ್, ಬಿಜೆಪಿ ವಿರುದ್ಧ ಜೆಡಿಎಸ್ ಪ್ರತಿಭಟನೆ

ಬೆಂಗಳೂರು: ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಕೈಜೋಡಿಸಿ, ತಮ್ಮ ಪಕ್ಷದ ಇಬ್ಬರು ಶಾಸಕರಿಂದ ಅಡ್ಡ ಮತದಾನ ಮಾಡಿಸಿ ಜೆಡಿಎಸ್ ಅಭ್ಯರ್ಥಿಯನ್ನು ಸೋಲಿಸಿವೆ ಎಂದು ಆರೋಪಿಸಿ ಜೆಡಿಎಸ್ ಮುಖಂಡರು, ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು.

ಜೆಡಿಎಸ್ ಶಾಸಕರಾದ ಕೆ. ಶ್ರೀನಿವಾಸ ಗೌಡ ಮತ್ತು ಎಸ್‌.ಆರ್. ಶ್ರೀನಿವಾಸ್ ವಿರುದ್ಧ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ಹಾಗೂ ಕಾಂಗ್ರೆಸ್ ವಿರುದ್ಧವೂ ಘೋಷಣೆಗಳನ್ನು ಕೂಗಿದರು.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ, ಜೆಡಿಎಸ್ ಅಭ್ಯರ್ಥಿಯಾಗಿದ್ದ ಡಿ.ಕುಪೇಂದ್ರ ರೆಡ್ಡಿ, ಮೇಲ್ಮನೆ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿ, ಟಿ.ಎ.ಶರವಣ ಅವರು ಇದ್ದರು.


ಪ್ರೆಸ್‌ಕ್ಲಬ್ ಅಧ್ಯಕ್ಷರಾಗಿ ಶ್ರೀಧರ್ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಪ್ರೆಸ್ ಕ್ಲಬ್‌ನ ಕಾರ್ಯಕಾರಿ ಸಮಿತಿಗೆ 2022–23ನೇ ಸಾಲಿಗೆ ಭಾನುವಾರ ನಡೆದ ಚುನಾವಣೆಯಲ್ಲಿ ಆರ್. ಶ್ರೀಧರ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಪದಾಧಿಕಾರಿಗಳು ಮತ್ತು ಪಡೆದ ಮತಗಳ ವಿವರ: ಆರ್‌.ಶ್ರೀಧರ್ (ಅಧ್ಯಕ್ಷ, 302 ಮತಗಳು), ಆನಂದ್ ಪಿ.ಬೈದನಮನೆ (ಉಪಾಧ್ಯಕ್ಷ , 327), ಬಿ.ಪಿ.ಮಲ್ಲಪ್ಪ (ಪ್ರಧಾನ ಕಾರ್ಯದರ್ಶಿ, 340), ದೊಡ್ಡಬೊಮ್ಮಯ್ಯ (ಕಾರ್ಯದರ್ಶಿ, 176), ಮಹಾಂತೇಶ್ ಎಸ್‌.ಹಿರೇಮಠ (ಜಂಟಿ ಕಾರ್ಯದರ್ಶಿ, 275), ಮೋಹನ್ ಕುಮಾರ್ ಬಿ.ಎನ್ (ಖಜಾಂಚಿ, 412).

ಕಾರ್ಯಕಾರಿ ಸಮಿತಿ ಸದಸ್ಯರು: ರೋಹಿಣಿ ವಿ.ಅಡಿಗ (307) ಜಿ.ಗಣೇಶ್ (286), ಮುನಿರಾಮೇಗೌಡ (ರವಿ) (261)) ಡಿ. ಆಲ್‌ಫ್ರೆಡ್ ಟೆನ್ನಿಸನ್ (255), ಕೆ.ಎಸ್. ಸೋಮಶೇಖರ್ (245), ಯಾಸಿರ್ ಮುಷ್ತಾಕ್ (242), ಮಿನಿ ತೇಜಸ್ವಿ (291 ಮತಗಳು).


ಆರ್‌. ಶ್ರೀಧರ್


ಆನಂದ ಬೈದನಮನೆ


ಬಿ.ಪಿ. ಮಲ್ಲಪ್ಪ

'ಎಚ್‌ಡಿಕೆ ಅವಕಾಶವಾದಿ ರಾಜಕಾರಣಿ'

ಬೆಂಗಳೂರು: ಅಧಿಕಾರಕ್ಕಾಗಿ ದಿನ, ಗಂಟೆಗಳ ಲೆಕ್ಕದಲ್ಲಿ ಬದಲಾಗುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಒಬ್ಬ ಅವಕಾಶವಾದಿ ರಾಜಕಾರಣಿ. ಈಗ ಅವರು ಜೆಡಿಎಸ್ ಕಾರ್ಯಕರ್ತರ ವಿಶ್ವಾಸವನ್ನೂ ಕಳೆದುಕೊಳ್ಳುವ ಹಂತ ತಲುಪಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಡಾ.ಎಚ್‌.ಸಿ. ಮಹದೇವಪ್ಪ ಟೀಕಿಸಿದ್ದಾರೆ.

'ರಾಜ್ಯಸಭೆ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯನ್ನು ಕಾಂಗ್ರೆಸ್ ಬೆಂಬಲಿಸಬೇಕಿತ್ತು ಎಂದು ಕುಮಾರಸ್ವಾಮಿ ಹೇಳುತ್ತಿರು ವುದು ಹಾಸ್ಯಾಸ್ಪದ' ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಶಿಕ್ಷಣದ ಜೊತೆಗೆ ಮೌಲ್ಯಾಧಾರಿತ ಬದುಕು ಮುಖ್ಯ'

ಪೀಣ್ಯ ದಾಸರಹಳ್ಳಿ: 'ವಿದ್ಯಾರ್ಥಿಗಳು ಉತ್ತಮ ಶಿಕ್ಷಣದ ಜೊತೆಗೆ ಮೌಲ್ಯಾಧಾರಿತ ಬದುಕು ಕಟ್ಟಿಕೊಂಡಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ' ಎಂದು ಬೆಂಗಳೂರು ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಅಶ್ವಥ್ ನಾರಾಯಣ್ ಅಭಿಪ್ರಾಯಪಟ್ಟರು.

ಚಿಕ್ಕಬಾಣವರ ಗುಟ್ಟೆ ಬಸವೇಶ್ವರ ಸರ್ಕಾರಿ ಪ್ರೌಢಶಾಲೆಯ 178 ವಿದ್ಯಾರ್ಥಿಗಳಲ್ಲಿ 168 ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಇದಕ್ಕೆ ಕಾರಣರಾದ ಶಿಕ್ಷಕರಿಗೆ ರಾಕ್ ಥಂಡರ್ಸ್ ಪಬ್ಲಿಕ್ ವೆಲ್‌ಫೇರ್ ಟ್ರಸ್ಟ್‌ನ ಅಂಗಸಂಸ್ಥೆಯಾದ ಹ್ಯೂಮನ್ ರೈಟ್ಸ್ ಪ್ರೊಟೆಕ್ಷನ್ ಕಮಿಟಿ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

'ಸರ್ಕಾರಿ ಶಾಲೆಗಳಲ್ಲಿ ಸೌಲಭ್ಯಗಳ ಹಾಗೂ ಅವಕಾಶಗಳ ಕೊರತೆ ಸ್ವಲ್ಪ ಮಟ್ಟಿಗೆ ಇರುತ್ತದೆ. ಜ್ಞಾನದ ಹಸಿವು ಇದ್ದಾಗ ಕೊರತೆ ಇದ್ದರೂ ಗಣನೆಗೆ ಬರುವುದಿಲ್ಲ' ಎಂದು ಸೋಲದೇವನಹಳ್ಳಿ ಪೊಲೀಸ್ ಇನ್‌ಸ್ಪೆಕ್ಟರ್ ಗೌತಮ್ ಅಭಿಪ್ರಾಯಪಟ್ಟರು.

ಮುಖ್ಯ ಶಿಕ್ಷಕಿ ಮಂಜುಳಾ ಕುಮಾರಿ ಸೇರಿ 12 ಶಿಕ್ಷಕರಿಗೆ ಸನ್ಮಾನಿಸಲಾಯಿತು. ಹ್ಯೂಮನ್ ರೈಟ್ಸ್ ಪ್ರೊಟೆಕ್ಷನ್ ಕಮಿಟಿ ಅಧ್ಯಕ್ಷ ಬಿ.ಎಂ.ಚಿಕ್ಕಣ್ಣ, ಬೆಸ್ಕಾಂ ಎಇಇ ಜಿತೇಂದ್ರಕುಮಾರ್, ಬಿಇಒ ಅಶ್ವಥ್ ನಾರಾಯಣ, ಪುರಸಭೆ ಮುಖ್ಯಾಧಿಕಾರಿ ಕುಮಾರ್, ಚಲನಚಿತ್ರ ನಿರ್ದೇಶಕ ವಿಜಯ್ ಕುಮಾರ್, ಕಿರುತೆರೆ ನಟಿ ಸಂಧ್ಯಾ ಇದ್ದರು.

'ಸಬ್ಸಿಡಿಗಳಿಗೆ ಕತ್ತರಿ ಪ್ರಧಾನಿಯ ಎಂಟು ವರ್ಷಗಳ ಸಾಧನೆ'

ಬೆಂಗಳೂರು: 'ಸಬ್ಸಿಡಿಗಳಿಗೆ ಕತ್ತರಿ ಪ್ರಯೋಗಿಸಿ, ಕಾರ್ಪೊರೇಟ್ ಬಂಡವಾಳಿಗರ ಜೊತೆ ದೋಸ್ತಿ ಮಾಡಿರುವುದೇ ಪ್ರಧಾನಿ ನರೇಂದ್ರ ಮೋದಿ ಅವರ ಎಂಟು ವರ್ಷಗಳ ಸಾಧನೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.

'ಸಬ್ಸಿಡಿಗಳನ್ನು ನೀಡುವುದರಿಂದ ಆರ್ಥಿಕತೆಯು ವೇಗ ಪಡೆಯುತ್ತದೆ ಎಂಬುದು ಅರ್ಥಶಾಸ್ತ್ರ ಗೊತ್ತಿರುವ ಪ್ರತಿಯೊಬ್ಬರಿಗೂ ಅರ್ಥವಾಗುತ್ತದೆ. ಆದರೆ, ಮೋದಿ ಸರ್ಕಾರ ಮತ್ತು ಆ ಸರ್ಕಾರದ ಹಿಂದೆ ಇರುವ ಆರ್‌ಎಸ್‌ಎಸ್ ಪ್ರಣೀತ ಜನರಿಗೆ ಇದು ಅರ್ಥವಾಗುತ್ತಿಲ್ಲ. ಅವರು ಉದ್ದೇಶಪೂರ್ವಕವಾಗಿ ಜನರ ಕೈಯಲ್ಲಿ ಹಣ ಇರಬಾರದು ಎಂದು ತೀರ್ಮಾನಿಸಿಯೇ ಯೋಜನೆಗಳನ್ನು ರೂಪಿಸುತ್ತಾರೆ' ಎಂದಿದ್ದಾರೆ.

ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆ ಎದುರಿಸಲು ವಿಶೇಷ ತರಬೇತಿ

'ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಪೊಲೀಸರ ನೆರವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುತ್ತಿರುವ ಬಂಡೇಪಾಳ್ಯ ಠಾಣೆಯ ಪೊಲೀಸರು, ಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಅಗತ್ಯ ತರಬೇತಿ ಕೊಡಿಸುತ್ತಿದ್ದಾರೆ.

ಠಾಣೆ ವ್ಯಾಪ್ತಿಯ ಸರ್ಕಾರಿ ಶಾಲೆಗಳಲ್ಲಿ ಓದುತ್ತಿದ್ದ 100ಕ್ಕೂ ಹೆಚ್ಚು ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಇಂಥ ವಿದ್ಯಾರ್ಥಿಗಳಿಗೆ ಸೂಕ್ತ ತರಬೇತಿ ನೀಡಿ, ಪೂರಕ ಪರೀಕ್ಷೆಗೆ ಸಜ್ಜುಗೊಳಿಸಲು ಪೊಲೀಸರು ಪಣ ತೊಟ್ಟಿದ್ದಾರೆ.

'ದರ್ಪಣ' ಹಾಗೂ 'ರಾಜ ಲಾಂಛನ' ಸರ್ಕಾರೇತರ ಸಂಸ್ಥೆಗಳ ಸಹಯೋಗದಲ್ಲಿ ವಿನೂತನ ಯೋಜನೆ ರೂಪಿಸಿ ಪರಿಣತ ಶಿಕ್ಷಕರಿಂದ ತರಬೇತಿ ಕೊಡಿಸಲು 20 ದಿನಗಳ ವಿಶೇಷ ಶಿಬಿರ ಆಯೋಜಿಸಿದ್ದಾರೆ.

ಜೂನ್ 5ರಂದು ಆರಂಭಗೊಂಡ ಶಿಬಿರಕ್ಕೆ ಬೊಮ್ಮನಹಳ್ಳಿ ಕ್ಷೇತ್ರದ ಶಾಸಕ ಸತೀಶ್ ರೆಡ್ಡಿ, ಆಗ್ನೇಯ ವಿಭಾಗದ ಡಿಸಿಪಿ ಶ್ರೀನಾಥ್ ಜೋಷಿ ಚಾಲನೆ ನೀಡಿದ್ದಾರೆ. ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಪೊಲೀಸರು, ರೂಪಿಸಿರುವ ಯೋಜನೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.


ಶಿಬಿರದಲ್ಲಿ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳ ಜೊತೆ ಬಂಡೇಪಾಳ್ಯ ಠಾಣೆಯ ಪೊಲೀಸರು

'ಠಾಣೆ ವ್ಯಾಪ್ತಿಯಲ್ಲಿ ಬಡವರು, ಆರ್ಥಿಕವಾಗಿ ಹಿಂದುಳಿದವರು, ಕಾರ್ಮಿಕರು ವಾಸವಿದ್ದಾರೆ. ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿರುವ ಅವರ ಕೆಲ ಮಕ್ಕಳು ಎಸ್ಸೆಸ್ಸೆಲ್ಸಿಯಲ್ಲಿ ಅನುತ್ತೀರ್ಣರಾಗಿದ್ದಾರೆ. ಇಂಥ ಮಕ್ಕಳಿಗಾಗಿ ಕಮಿಷನರ್ ಹಾಗೂ ಡಿಸಿಪಿ ಅವರ ಮಾರ್ಗದರ್ಶನದಲ್ಲಿ ಈ ತರಬೇತಿ ಯೋಜನೆ ರೂಪಿಸಲಾಗಿದೆ' ಎಂದು ಇನ್‌ಸ್ಪೆಕ್ಟರ್ ರಾಜೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಜೂನ್ 27ರಿಂದ ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆಗಳು ಆರಂಭವಾಗಲಿವೆ. 20 ದಿನ ಕಾಲ ಕನ್ನಡ, ಇಂಗ್ಲಿಷ್, ಹಿಂದಿ, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ವಿಷಯಗಳ ಬಗ್ಗೆ ಶಿಕ್ಷಕರು ಪಾಠ ಮಾಡುವರು. ಪ್ರತಿಯೊಬ್ಬ ವಿದ್ಯಾರ್ಥಿ ಬಗ್ಗೆ ವೈಯಕ್ತಿಕ ಕಾಳಜಿ ವಹಿಸಲಿದ್ದಾರೆ' ಎಂದೂ ಹೇಳಿದರು.

ಭೋವಿ ಸಮಾವೇಶ: ಮತ್ತೆ ಅಧಿಕಾರಕ್ಕೆ ಬಂದರೆ ಭರವಸೆ ಈಡೇರಿಸುವೆ ಎಂದ ಸಿದ್ದರಾಮಯ್ಯ

‘ಜಾತಿ ಗಣತಿ ವರದಿ ಸ್ವೀಕರಿಸುವೆ’

ಪ್ರಜಾವಾಣಿ ವಾರ್ತೆ


ಕರ್ನಾಟಕ ಭೋವಿ ಸಂಘರ್ಷ ಸಮಿತಿ ಭಾನುವಾರ ಆನೇಕಲ್ ತಾಲ್ಲೂಕಿನ ಬನ್ನೇರುಘಟ್ಟದಲ್ಲಿ ಆಯೋಜಿಸಿದ್ದ ಭೋವಿ ಸಮಾವೇಶದಲ್ಲಿ ಮಾಜಿ ಸಚಿವ ಶಿವರಾಜ ತಂಗಡಗಿ,ಸಂಸದ ಡಿ.ಕೆ. ಸುರೇಶ್, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಚಿತ್ರದುರ್ಗದ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಅವರಿಗೆ ಬೃಹತ್ ಮಾಲೆ ಹಾಕಿ ಗೌರವಿಸಲಾಯಿತು.

ಬೆಂಗಳೂರು: ‘ರಾಜ್ಯದಲ್ಲಿ ನಾವು (ಕಾಂಗ್ರೆಸ್) ಮತ್ತೆ ಅಧಿಕಾರಕ್ಕೆ ಬಂದರೆ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಮೂಲಕ ನಡೆಸಿದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆ (ಜಾತಿ ಗಣತಿ) ವರದಿಯನ್ನು ಸ್ವೀಕರಿಸುತ್ತೇವೆ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಆನೇಕಲ್ ತಾಲ್ಲೂಕಿನ ಬನ್ನೇರು ಘಟ್ಟದಲ್ಲಿ ಕರ್ನಾಟಕ ಭೋವಿ ಸಂಘರ್ಷ ಸಮಿತಿ ವತಿಯಿಂದ ಭಾನುವಾರ ನಡೆದ ಭೋವಿ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ‘ನಾನು ಮುಖ್ಯಮಂತ್ರಿಯಾಗಿದ್ದಾಗ ₹ 162 ಕೋಟಿ ಹಣ ವೆಚ್ಚ ಮಾಡಿ ಈ ಸಮೀಕ್ಷೆ ನಡೆಸಿದ್ದೆ. ಕಡೇ ಬಾರಿ ಜಾತಿ ಸಮೀಕ್ಷೆ ನಡೆದಿದ್ದು 1931ರಲ್ಲಿ. ಈಗ ಸಮಿತಿಯ ವರದಿ ಸಿದ್ಧವಾಗಿದ್ದರೂ ಸರ್ಕಾರ ಸ್ವೀಕರಿಸಿಲ್ಲ’ ಎಂದರು.

‘ಯಾವ ಸಮುದಾಯದ ಸ್ಥಿತಿಗತಿ ಏನಾಗಿದೆ ಎಂದು ತಿಳಿಯಬೇಕು. ಅದರ ಆಧಾರದ ಮೇಲೆ ಯೋಜನೆ ರೂಪಿಸಬಹುದು. ಹಿಂದುಳಿದ ಜಾತಿಗಳಿಗೆ ಸಂಬಂಧಿಸಿದಂತೆ ಯಾವುದೇ ಅಧಿಕೃತ ಮಾಹಿತಿ ಇಲ್ಲ ಎಂದು ಸುಪ್ರೀಂ ಕೋರ್ಟ್ ಪದೇ ಪದೇ ಹೇಳಿದೆ. ಹೀಗಾಗಿ ನಾವು ಸಮೀಕ್ಷೆ ನಡೆಸಿದ್ದೆವು. ಈ ವರದಿ ಸ್ವೀಕಾರ ಆಗಬೇಕೋ ಬೇಡವೋ’ ಎಂದೂ ಪ್ರಶ್ನಿಸಿದರು.

‘ಸಂವಿಧಾನದ ಬಗ್ಗೆ ಚರ್ಚೆ ನಡೆದು, ಸಂವಿಧಾನದ ಆಶಯಗಳು ಎಷ್ಟು ಈಡೇರಿವೆ ಎಂಬುದರ ಸಮಾಲೋಚನೆ ನಡೆಯಬೇಕು. ಈ ಕಾರಣಕ್ಕಾಗಿ ಇಂಥ ಸಮಾವೇಶಗಳನ್ನು ಆಯೋಜಿಸಲಾಗುತ್ತದೆ. ಸಾಮಾಜಿಕ ನ್ಯಾಯದ ಈಡೇರಿಕೆ ಆಗಿದೆಯೇ ಎಂಬ ಬಗ್ಗೆ ಮೇಲಿಂದ ಮೇಲೆ ಸಮಾವೇಶಗಳು ನಡೆದು ಚರ್ಚೆ ಆಗಬೇಕು. ಇದೊಂದೇ ಸಮಾವೇಶಕ್ಕೆ ಕೊನೆ ಆಗಬಾರದು ಎಂಬುದು ನನ್ನ ಆಶಯ’ ಎಂದರು.

‘ಮಕ್ಕಳಿಗೆ ಪುಸ್ತಕದ ಮೂಲಕ ವಿಷ’

‘ಪಠ್ಯ ಪರಿಷ್ಕರಣೆ ಹೆಸರಲ್ಲಿ ಇತಿಹಾಸ ತಿರುಚುವ ವ್ಯವಸ್ಥಿತ ಷಡ್ಯಂತ್ರ ನಡೆಯುತ್ತಿದೆ. ಇದು ಒಳ್ಳೆಯ ಬೆಳವಣಿಗೆಯಲ್ಲ. ಇತಿಹಾಸ ತಿರುಚುವವರ ವಿರುದ್ಧ ಧ್ವನಿ ಎತ್ತಬೇಕು’ ಎಂದು ಸಿದ್ದರಾಮಯ್ಯ ಹೇಳಿದರು.

‘ಟಿ.ಟಿ.ಕೃಷ್ಣಮಾಚಾರಿ ಅವರು ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ‘ಸಂವಿಧಾನ ಶಿಲ್ಪಿ’ ಎಂಬ ಬಿರುದು ನೀಡಿದ್ದರು. ಆದರೆ, ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಪಠ್ಯ ಪರಿಷ್ಕರಣೆಯ ಸಮಿತಿಯು ಆ ಪದವನ್ನೇ ಕಿತ್ತುಹಾಕಿದೆ. ಅಂಬೇಡ್ಕರ್ ಅವರ ಸಾಧನೆ, ತಂದೆ, ತಾಯಿ ಮಾಹಿತಿ ತೆಗೆದು ಹಾಕಿದೆ. ಇತಿಹಾಸ ತಿಳಿಯಬೇಕಾದ ಮಕ್ಕಳಿಗೆ ವಿಷ ಉಣ್ಣುಸುತ್ತಿದ್ದಾರೆ. ಇದೊಂದು ನೀಚ ಕೃತ್ಯ’ ಎಂದರು.

ವಿವಿಧೆಡೆ ಮಳೆ

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ, ಉತ್ತರ ಕನ್ನಡ, ವಿಜಯನಗರ ಜಿಲ್ಲೆಗಳಲ್ಲಿ ಭಾನುವಾರ ಅಲ್ಲಲ್ಲಿ ಮಳೆಯಾಗಿದೆ.

ಹುಬ್ಬಳ್ಳಿಯಲ್ಲಿ ಮಧ್ಯಾಹ್ನ ಅರ್ಧ ತಾಸು ರಭಸದ ಮಳೆಯಾಗಿದ್ದು ಧಾರವಾಡ ನಗರದಲ್ಲಿ ಗಂಟೆಗೂ ಹೆಚ್ಚು ಕಾಲ ಸುರಿಯಿತು. ಬೆಳಿಗ್ಗೆಯಿಂದ ಮೋಡ ಕವಿದ ವಾತಾವರಣವಿತ್ತು.

ಕಾರವಾರದಲ್ಲಿ ಜೋರಾಗಿ ಮಳೆಯಾಗಿದೆ. ಮಲೆನಾಡು ತಾಲ್ಲೂಕುಗಳಲ್ಲಿ ಸಾಧಾರಣ ಮಳೆಯಾಯಿತು. ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ಅರಸೀಕೆರೆ ಸುತ್ತಮುತ್ತ ಉತ್ತಮ ಮಳೆಯಾಗಿದೆ. ಮಡಿಕೇರಿ, ಹಾಸನ ಜಿಲ್ಲೆಯ ಸಕಲೇಶಪುರ, ಅರಸೀಕೆರೆ, ಕೊಣನೂರು ಹಾಗೂ ಸುತ್ತಮುತ್ತ ಮಳೆಯಾಗಿದೆ.

ಬಂಜಗೆರೆಗೆ ಬೆದರಿಕೆ

ಬೆಂಗಳೂರು: ಪಠ್ಯಪುಸ್ತಕ ಪರಿಷ್ಕರಣೆ ವಿಚಾರವಾಗಿ ರಾಜ್ಯದಲ್ಲಿ ಪರ–ವಿರೋಧ ಚರ್ಚೆ ನಡೆಯುತ್ತಿರುವ ಬೆನ್ನಲ್ಲೇ, ಸಾಹಿತಿ ಬಂಜಗೆರೆ ಜಯಪ್ರಕಾಶ್ ಅವರಿಗೆ ಕೊಲೆ ಬೆದರಿಕೆಯೊಡ್ಡಿ ಅಪರಿಚಿತನೊಬ್ಬ ಪತ್ರ ಬರೆದಿದ್ದಾನೆ.

ಹಾರೋಹಳ್ಳಿಯಲ್ಲಿ ವಾಸವಿರುವ ಬಂಜಗೆರೆ ಜಯಪ್ರಕಾಶ್ ಅವರ ಮನೆ ವಿಳಾಸಕ್ಕೆ ಮೂರು ದಿನಗಳ ಹಿಂದೆಯಷ್ಟೇ ಪತ್ರ ಬಂದಿದೆ. ಈ ಪತ್ರದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿರುವ ಜಯಪ್ರಕಾಶ್, ತಪ್ಪಿತಸ್ಥರನ್ನು ಪತ್ತೆ ಮಾಡಿ ಕಾನೂನು ಕ್ರಮ ಜರುಗಿಸುವಂತೆ ಕೋರಿದ್ದಾರೆ.

ತಾಯಿಗೆ ಶುಭಾಶಯ ಕೋರಲು ಮೊಬೈಲ್ ಕೊಡದ್ದಕ್ಕೆ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ


ಪೂರ್ವಜ್

ಉಳ್ಳಾಲ: ತಾಯಿಗೆ ಜನ್ಮದಿನದ ಶುಭಾಶಯ ಕೋರಲು ಮೊಬೈಲ್ ನೀಡಿಲ್ಲವೆಂದು ವಿದ್ಯಾರ್ಥಿಯೊಬ್ಬ ಆತ್ಮಹತ್ಯೆ ಮಾಡಿಕೊಂಡ ಘಟನೆ ತಲಪಾಡಿಯ ದೇವಿನಗರದ ಶಾರದಾ ವಿದ್ಯಾನಿಕೇತನ ಶಾಲೆಯ ಹಾಸ್ಟೆಲ್‌ನಲ್ಲಿ ನಡೆದಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ರಮೇಶ್ ಮತ್ತು ಮಂಜುಳಾ ದಂಪತಿಯ ಪುತ್ರ ಪೂರ್ವಜ್ (14) ಮೃತ ಬಾಲಕ. ಈತ 9ನೇ ತರಗತಿಯಲ್ಲಿ ಓದುತ್ತಿದ್ದ. ಶನಿವಾರ ಆತನ ತಾಯಿಯ ಜನ್ಮದಿನವಿತ್ತು. ಶಾಲಾ ಆಡಳಿತ ಮಂಡಳಿಯ ನಿಯಮದಂತೆ ಹಾಸ್ಟೆಲ್ ವಾರ್ಡನ್, ಬಾಲಕನಿಗೆ ಮೊಬೈಲ್ ನೀಡಿರಲಿಲ್ಲ. ರಾತ್ರಿ 12 ಗಂಟೆಯವರೆಗೂ ಮಂಕಾಗಿ ಕುಳಿತಿದ್ದ ಬಾಲಕ ಡೆತ್‌ನೋಟ್ ಬರೆದಿಟ್ಟು ಹಾಸ್ಟೆಲ್ ಕೋಣೆಯಲ್ಲಿ ನೇಣು ಹಾಕಿಕೊಂಡಿದ್ದಾನೆ. ಭಾನುವಾರ ಬೆಳಿಗ್ಗೆ ವಿದ್ಯಾರ್ಥಿಯೊಬ್ಬ ಪೂರ್ವಜ್ ಶವ ನೋಡಿ, ವಾರ್ಡನ್ ಗಮನಕ್ಕೆ ತಂದಿದ್ದಾನೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ವಿದ್ಯಾಸಂಸ್ಥೆ, ಶಾಲಾ ಪ್ರಾಂಶುಪಾಲರು ಹಾಗೂ ಹಾಸ್ಟೆಲ್ ವಾರ್ಡನ್ ವಿರುದ್ಧ ಮಂಜುಳಾ ಸಹೋದರ ಅರುಣ್ ಅವರು ಉಳ್ಳಾಲ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

‘ಶಾಲಾ ಆಡಳಿತ ಮಂಡಳಿಯ ಕಿರುಕುಳದಿಂದ ಪೂರ್ವಜ್ ಆತ್ಮಹತ್ಯೆ ಮಾಡಿದ್ದಾನೆ. ಶಾಲಾ ಸೇರ್ಪಡೆ ವೇಳೆ ವಿದ್ಯಾರ್ಥಿಯ ಚಲನವಲನವನ್ನು ಪೋಷಕರಿಗೆ ತಿಳಿಸುತ್ತೇನೆ ಅಂದಿದ್ದರೂ ಈವರೆಗೆ ಪೂರ್ವಜ್ ಕುರಿತು ಯಾವುದೇ ಮಾಹಿತಿಯನ್ನು ನೀಡಿಲ್ಲ. ಹೆತ್ತವರು ಕರೆ ಮಾಡಿದರೂ ಸಂಭಾಷಣೆಗೆ ಶಾಲಾಡಳಿತ ಮಂಡಳಿ ಅವಕಾಶ ನೀಡುತ್ತಿರಲಿಲ್ಲ’ ಎಂದು ಆರೋಪಿಸಿದ್ದಾರೆ.

ಡೆತ್ ನೋಟ್‌ನಲ್ಲಿ ಏನಿದೆ?: ‘ತಾಯಿಗೆ ಜನ್ಮದಿನದ ಶುಭಾಶಯಗಳು. ಎಲ್ಲರೂ ಖುಷಿಯಾಗಿರಿ, ಶಾಲೆಗೆ ತನಗಾಗಿ ಕಟ್ಟಿರುವ ಶುಲ್ಕವನ್ನು ವಾಪಸ್ ಪಡೆದುಕೊಳ್ಳಿ. ನಿಮ್ಮಿಂದ ನಾನು ದೂರವಾಗುತ್ತಿದ್ದೇನೆ. ನೀವು ನನ್ನನ್ನು ದುಃಖಕ್ಕೆ ತಳ್ಳಿದಿರಿ. ಯಾರೂ ಅಳಬೇಡಿ’ ಎಂದು ಇಂಗ್ಲಿಷ್‌ನಲ್ಲಿ ಬರೆದ ಡೆತ್‌ನೋಟ್ ಪತ್ತೆಯಾಗಿದೆ.

ನೇಮಕಾತಿ ಅಕ್ರಮ: ಕಾನ್‌ಸ್ಟೆಬಲ್ ಬಂಧನ

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳು ಧಾರವಾಡದ ಪೊಲೀಸ್ ತರಬೇತಿ ಶಾಲೆಯ ಕಾನ್‌ಸ್ಟೆಬಲ್ ಇಸ್ಮಾಯಿಲ್ ಜಮಾದಾರ ಎಂಬುವವರನ್ನು ಭಾನುವಾರ ಬಂಧಿಸಿದ್ದಾರೆ.

ಪೊಲೀಸ್ ತರಬೇತಿ ಶಾಲೆಯಲ್ಲಿ ಸಹಾಯಕ ಡ್ರಿಲ್ ಮಾಸ್ಟರ್ ಆಗಿರುವ ಇಸ್ಮಾಯಿಲ್, ಪಿಎಸ್‌ಐ ಪರೀಕ್ಷೆಗೆ ಹಾಜರಾಗಿದ್ದ. ಕಲಬುರಗಿಯ ನೊಬೆಲ್ ಶಾಲೆಯ ಪಿಎಸ್‌ಐ ಪರೀಕ್ಷಾ ಕೇಂದ್ರದಲ್ಲಿ ಬ್ಲೂಟೂತ್ ಬಳಸಿ ಪರೀಕ್ಷೆಯಲ್ಲಿ ಅಕ್ರಮ ಎಸಗಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರಾಥಮಿಕ ವಿಚಾರಣೆ ನಡೆಸಿರುವ ಅಧಿಕಾರಿಗಳು ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಿದ್ದಾರೆ.

ವಿಧಾನ ಪರಿಷತ್ ಚುನಾವಣೆ 4 ಕ್ಷೇತ್ರಗಳಲ್ಲಿ ಮತದಾನ ಇಂದು

ಒಂದನೇ ಪುಟದಿಂದ

ಈ ಕ್ಷೇತ್ರದಲ್ಲಿ 150 ಮತಗಟ್ಟೆಗಳನ್ನು ತೆರೆದಿದ್ದು, 1.41 ಲಕ್ಷ ಮತದಾರರಿದ್ದಾರೆ.

ಧಾರವಾಡ, ಗದಗ, ಹಾವೇರಿ, ಉತ್ತರ ಕನ್ನಡ ಜಿಲ್ಲೆಗಳ ವ್ಯಾಪ್ತಿ ಹೊಂದಿರುವ ಪಶ್ಚಿಮ ಶಿಕ್ಷಕರ ಕ್ಷೇತ್ರದಲ್ಲಿ ಬಿಜೆಪಿಯ ಬಸವರಾಜ ಹೊರಟ್ಟಿ, ಕಾಂಗ್ರೆಸ್‌ನ ಬಸವರಾಜ ಗುರಿಕಾರ, ಜೆಡಿಎಸ್‌ನ ಶ್ರೀಶೈಲ ಗಡದಿನ್ನಿ ಸೇರಿದಂತೆ ಏಳು ಅಭ್ಯರ್ಥಿಗಳು ಕಣದಲ್ಲಿದ್ದಾರೆ. 17,973 ಶಿಕ್ಷಕರು ಈ ಕ್ಷೇತ್ರದ ಮತದಾರರಿದ್ದಾರೆ.


ಬಾಗಲಕೋಟೆ, ವಿಜಯಪುರ, ಬೆಳಗಾವಿ ಜಿಲ್ಲೆಗಳ ವ್ಯಾಪ್ತಿ ಹೊಂದಿರುವ ವಾಯವ್ಯ ಪದವೀಧರ ಕ್ಷೇತ್ರದಲ್ಲಿ ಬಿಜೆಪಿಯ ಹಣಮಂತ ನಿರಾಣಿ, ಕಾಂಗ್ರೆಸ್‌ನ ಸುನೀಲ ಸಂಕ ಸೇರಿದಂತೆ 11 ಅಭ್ಯರ್ಥಿಗಳು ಸ್ಪರ್ಧೆಯಲ್ಲಿದ್ದಾರೆ. 99,597 ಮತದಾರರಿದ್ದಾರೆ. ಇದೇ ಜಿಲ್ಲೆಗಳ ವ್ಯಾಪ್ತಿಯ ವಾಯವ್ಯ ಶಿಕ್ಷಕರ ಕ್ಷೇತ್ರದಲ್ಲಿ ಬಿಜೆಪಿಯ ಅರುಣ ಶಹಾಪುರ, ಕಾಂಗ್ರೆಸ್‌ನ ಪ್ರಕಾಶ ಹುಕ್ಕೇರಿ, ಜೆಡಿಎಸ್‌ನ ಚಂದ್ರಶೇಖರ ಲೋಣಿ, ಪಕ್ಷೇತರರಾದ ಎನ್.ಬಿ. ಬನ್ನೂರ ಸೇರಿದಂತೆ 12 ಅಭ್ಯರ್ಥಿಗಳು ಕಣದಲ್ಲಿದ್ದಾರೆ. 25,388 ಮತದಾರರು ಈ ಕ್ಷೇತ್ರದಲ್ಲಿದ್ದಾರೆ.


ಮತಗಟ್ಟೆ ಸಿಬ್ಬಂದಿ ಭಾನುವಾರ ಸಂಜೆಯೇ ನಿಗದಿತ ಸ್ಥಳ ತಲುಪಿದ್ದಾರೆ. ಕೋವಿಡ್ ಸೋಂಕಿತರಿಗೂ ಮತದಾನಕ್ಕೆ ಅವಕಾಶ ಕಲ್ಪಿಸುವುದಕ್ಕಾಗಿ ಪ್ರತಿ ಮತಗಟ್ಟೆಗೂ ಪಿಪಿಇ ಕಿಟ್ ಒದಗಿಸಲಾಗಿದೆ.


ಜಾಲತಾಣದಲ್ಲಿ ‘ತಿಥಿ ಕಾರ್ಡ್’ ಸಮರ

ಜೆಡಿಎಸ್ ಬಂಡಾಯ ಶಾಸಕರು, ಎಚ್‌ಡಿಕೆ ಬೆಂಬಲಿಗರ ಮಧ್ಯೆ ಕಿತ್ತಾಟ ತಾರಕಕ್ಕೆ

ಪ್ರಜಾವಾಣಿ ವಾರ್ತೆ







ತುಮಕೂರು: ರಾಜ್ಯಸಭಾ ಚುನಾವಣೆ ಮತದಾನದ ನಂತರ ಜೆಡಿಎಸ್ ಬಂಡಾಯ ಶಾಸಕರ ಬೆಂಬಲಿಗರು ಮತ್ತು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರ ಬೆಂಬಲಿಗರ ನಡುವೆ ಸಾಮಾಜಿಕ ಜಾಲತಾಣಗಳಲ್ಲಿ ‘ತಿಥಿ ಕಾರ್ಡ್’ ಸಮರ ಜೋರಾಗಿದೆ.

ಜೆಡಿಎಸ್ ಕಾರ್ಯಕರ್ತರು ಶನಿವಾರ ಕೋಲಾರ ಶಾಸಕ ಕೆ. ಶ್ರೀನಿವಾಸಗೌಡ ಅವರ ತಿಥಿ ಕಾರ್ಡ್ ಸಿದ್ಧಪಡಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟ ಬೆನ್ನಲ್ಲೇ, ಗುಬ್ಬಿ ಜೆಡಿಎಸ್ ಶಾಸಕ ಎಸ್. ಆರ್.ಶ್ರೀನಿವಾಸ್ ಅವರ ತಿಥಿ ಕಾರ್ಡ್ ಕೂಡ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಇದಕ್ಕೆ ಪ್ರತಿಯಾಗಿ ಶ್ರೀನಿವಾಸ್ ಅಭಿಮಾನಿಗಳು, ‘ಎಚ್.ಡಿ.ಕುಮಾರಸ್ವಾಮಿ ಅವರ ಸಮಾರಾಧನೆ ಕಾರ್ಡ್’ ಮತ್ತು ‘ಕಾಣೆಯಾಗಿದ್ದಾರೆ’ ಎಂಬ ಎರಡು ಪ್ರತ್ಯೇಕ ಪೋಸ್ಟರ್ ತಯಾರಿಸಿ ಭಾನುವಾರ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ.

‘ಎಸ್.ಆರ್.ಶ್ರೀನಿವಾಸ್ ಗುಬ್ಬಿ ಎಂಎಲ್‌ಎ ಎಫ್‌ಸಿ’ ಎಂಬ ಫೇಸ್‌ಬುಕ್ ಖಾತೆಯಲ್ಲಿ ‘ಕುಮಾರಸ್ವಾಮಿ ತಿಥಿ ಕಾರ್ಡ್’ ಪೋಸ್ಟ್ ಹಾಕಲಾಗಿದೆ.

ರಾಜ್ಯಸಭೆ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ್ದಾರೆ ಎಂದು ಆರೋಪಿಸಿ ನಗರದ ವಿದ್ಯಾನಗರದಲ್ಲಿರುವ ಶಾಸಕರ ಮನೆ ಮುಂದೆ ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದ್ದರು. ಪ್ರತಿಭಟನೆಯ ನಂತರ ಶಾಸಕ ಎಸ್.ಆರ್.ಶ್ರೀನಿವಾಸ್, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಏಕವಚನದಲ್ಲಿ ಹರಿಹಾಯ್ದಿದ್ದರು.

ಈ ಎಲ್ಲ ಬೆಳವಣಿಗೆಗಳ ನಂತರ ಶಾಸಕರ ಭಾವಚಿತ್ರದ ಸಹಿತ ತಿಥಿ ಕಾರ್ಡ್ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು.

‘ಈಗ ಶ್ರೀನಿವಾಸ್ ಅಭಿಮಾನಿಗಳು ಜೆ.ಪಿ ನಗರದ ನಿವಾಸಿ ಎಚ್. ಡಿ.ಕುಮಾರಸ್ವಾಮಿ ಜೂನ್ 11 ರಂದು ನಿಧನರಾಗಿದ್ದು, ಕೈಲಾಸ ಸಮಾರಾಧನೆಯು ಜೂನ್ 22 ರಂದು ನಡೆಯಲಿದೆ. ದುಃಖ ತೃಪ್ತರು ರಾಧಿಕಾ ಕುಮಾರಸ್ವಾಮಿ’ ಎಂದು ತಿಥಿ ಕಾರ್ಡ್‌ನಲ್ಲಿ ಬರೆಯಲಾಗಿದೆ.

‘ಕೈಲಾಸ ಸಮಾರಾಧನೆ’ ಪತ್ರ!: ಕೋಲಾರ ಜೆಡಿಎಸ್ ಶಾಸಕ ಕೆ.ಶ್ರೀನಿವಾಸಗೌಡರ ಹೆಸರು ಹಾಗೂ ಅವರ ಫೋಟೊ ಹಾಕಿ ‘ಕೈಲಾಸ ಸಮಾರಾಧನೆ’ ಪತ್ರ ತಯಾರಿಸಿ ಶನಿವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡಲಾಗಿತ್ತು.

ಫೇಸ್‌ಬುಕ್‌ನಲ್ಲಿ ‘ಕುಮಾರಸ್ವಾಮಿ ಫಾರ್ ಸಿಎಂ’ ಖಾತೆಯಲ್ಲಿ ಈ ಪತ್ರ ಹಾಕಿದ್ದು, ‘ಜೆಡಿಎಸ್ ಪಕ್ಷಕ್ಕೆ ಹಾಗೂ ಕಾರ್ಯಕರ್ತರಿಗೆ ಮೋಸ ಮಾಡಿ ದುಡ್ಡಿಗಾಗಿ ತಮ್ಮ ಮತ ಮಾರಿಕೊಂಡು, ಮತದಾರರ ಪಾಲಿಗೆ ತೀರಿಕೊಂಡ ಕೋಲಾರದ ಶ್ರೀನಿವಾಸಗೌಡನಿಗೆ ಭಾವಪೂರ್ಣ ಶ್ರದ್ಧಾಂಜಲಿ’ ಎಂದು ಬರೆದಿದ್ದಾರೆ.

800ಕ್ಕೂ ಅಧಿಕ ಮಂದಿ ಹಂಚಿಕೊಂಡಿದ್ದಾರೆ. 5 ಸಾವಿರಕ್ಕೂ ಅಧಿಕ ಮಂದಿ ಲೈಕ್ ಮಾಡಿದ್ದು, ಕಮೆಂಟ್ ಬಾಕ್ಸ್‌ನಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ವಿದ್ಯಾರ್ಥಿಗಳ ಅಭಿಪ್ರಾಯ


ಸಂಕಷ್ಟದಲ್ಲಿ ದೊರೆತ ನೆರವು



‘ಪ್ರಜಾವಾಣಿ’ ನೀಡಿದ ವಿದ್ಯಾರ್ಥಿ ವೇತನದಿಂದ ಕಾಲೇಜು ಪಠ್ಯಪುಸ್ತಕ, ಸಿಇಟಿ ಮಾರ್ಗದರ್ಶಿ ಪುಸ್ತಕ ಖರೀದಿಸಲು ನೆರವಾಯಿತು. ತಂದೆಗೆ ಕೆಲಸ ಇರಲಿಲ್ಲ. ಆಗ ‘ಪ್ರಜಾವಾಣಿ’ಯ ವಿದ್ಯಾರ್ಥಿವೇತನ ಸಿಕ್ಕಿದ್ದು, ತುಂಬಾ ಅನುಕೂಲವಾಯಿತು. ‘ಪ್ರಜಾವಾಣಿ’ ಬಳಗಕ್ಕೆ ಅನಂತ ಧನ್ಯವಾದಗಳು. ಈ ಸಹಾಯ ಎಂದಿಗೂ ಮರೆಯುವುದಿಲ್ಲ.

– **ಪ್ರಜ್ವಲ್ ಪಿ., ಕೆ.ಬಿ.** ಬಡಾವಣೆ, ದಾವಣಗೆರೆ

ಪುಸ್ತಕ ಖರೀದಿಗೆ ಅನುಕೂಲ



‘ಪ್ರಜಾವಾಣಿ’ ಸಹಾಯಧನ ಸಿಕ್ಕಿದ್ದು ಖುಷಿ ನೀಡಿದೆ. ಸಿಇಟಿ, ನೀಟ್ ಪರೀಕ್ಷೆಗೆ ಬೇಕಾದ ಪುಸ್ತಕ ಖರೀದಿಸಿದೆ. ಪ್ರಥಮ ಪಿಯುಸಿಯಲ್ಲೂ ಉತ್ತಮ ಅಂಕ ಗಳಿಸಿದ್ದೇನೆ. ಬಡ ವಿದ್ಯಾರ್ಥಿಗಳಿಗೆ ‘ಪ್ರಜಾವಾಣಿ’ ಸಹಾಯ ಮಾಡುತ್ತಿರುವುದಕ್ಕೆ ಆಭಾರಿಯಾಗಿದ್ದೇನೆ.

ಎಚ್.ಎಂ. ಸ್ಪಂದನಾ, ಹುರುಳಿ ಗಂಗನಹಳ್ಳಿ, ಮಂಡ್ಯ ಜಿಲ್ಲೆ


ಶೈಕ್ಷಣಿಕ ನೆರವು ನಿಧಿಗೆ ದೇಣಿಗೆ ನೀಡಿದವರ ವಿವರ

	ದಾನಿಗಳ ಹೆಸರು	ಮೊತ್ತ (₹ಗಳಲ್ಲಿ)
1	**ಮಂಜುಳಾ**, ನಂ.18, 2ನೇ ಮೇನ್, 1ನೇ ಬ್ಲಾಕ್, ಬನಶಂಕರಿ 3ನೇ ಹಂತ, ಬೆಂಗಳೂರು	40,000
2	**ಎಂ.ಎಸ್.ವೇಣುಗೋಪಾಲ್**, ‘ಗಾಯತ್ರಿ ನಿಲಯ’, ಮಂಜುನಾಥ ರಸ್ತೆ, 2ನೇ ಬ್ಲಾಕ್, ಟಿ.ಆರ್.ನಗರ, ಬೆಂಗಳೂರು	25,000
3	**ಛಾಯಾಕುಮಾರಿ ಎಂ.ವಿ.**, ನಂ. 149, 4ನೇ ಮೇನ್, 4ನೇ ಕ್ರಾಸ್, ಶ್ರೀನಿವಾಸನಗರ, ಬನಶಂಕರಿ 1ನೇ ಹಂತ, ಬೆಂಗಳೂರು	25,000
4	**ಲಲಿತಾ ಎನ್.ಕೆ.ಮೂರ್ತಿ**, ನಂ.92/301, ಸಾಯಿ ರೆಸಿಡೆನ್ಸಿ, 7ನೇ ಮೇನ್, ರಾಮಾಂಜನೇಯ ನಗರ, ಬೆಂಗಳೂರು	25,000
5	**ವಿ.ಬುದ್ಧ ಸಂಗಾತಿ**, ನಂ. 11–3–75 ಡಿ, ಐ.ಬಿ. ಹತ್ತಿರ, ಉಡುಪಿ	10,000
6	**ಲಕ್ಷ್ಮೀನಾರಾಯಣ ಹೆಗಡೆ**, ನಂ. 241, 1ನೇ ತಿರುವು, ಟಿ.ಜಿ.ಎನ್. ಲೇಔಟ್, ಮೀನಾಕ್ಷಿ ಭವನ ಹಿಂಭಾಗ, ಶಿವಮೊಗ್ಗ	10,000
7	**ಡಾ.ರತ್ನಮ್ಮ ಜೆ.**, ಸುಬ್ಬಯ್ಯ ಮೆಡಿಕಲ್ ಕಾಲೇಜು, ಶಿವಮೊಗ್ಗ	10,000
8	**ಭಾಸ್ಕರ್ ಎಂ.ವಿ.**, ನಂ.73, 3ನೇ ಮೇನ್, 8ನೇ ಕ್ರಾಸ್, ಶ್ರೇಯಸ್ ಕಾಲೊನಿ, ಜೆ.ಪಿ.ನಗರ 7ನೇ ಹಂತ, ಬೆಂಗಳೂರು	10,000
9	**ಶ್ರೀನಿವಾಸ ಮೂರ್ತಿ**, ಬೆಂಗಳೂರು	10,000
10	**ವಿನಯ್‌ಕುಮಾರ್ ಸೋಡದ**, ಲೆಮನ್ ಸೋಡಾ ನೇಕಾರ ಕಾಲೊನಿ, ಓಲ್ಡ್ ಟೌನ್, ಹಗರಿಬೊಮ್ಮನಹಳ್ಳಿ, ವಿಜಯನಗರ ಜಿಲ್ಲೆ	5,001
11	**ರಘುನಾಥ**, ಎಚ್.ಐ.ಜಿ.40, 6ನೇ ಮುಖ್ಯರಸ್ತೆ, ಕೆಎಚ್‌ಬಿ ಕಾಲೊನಿ, 2ನೇ ಹಂತ, ಬಸವೇಶ್ವರನಗರ, ಬೆಂಗಳೂರು	5,000
12	**ವಸಂತ ಯಾಜಿ**, ನಂ 220/3, ಶ್ರೀಮಾತಾ ಎದುರು, ವಿಕಾಸ ಆಶ್ರಮ, ಕೋರ್ಟ್ ರಸ್ತೆ, ಶಿರಸಿ	5,000
13	**ವಿಷ್ಣು ಎಂ.**, ನಂ. 26, 6ನೇ ಕ್ರಾಸ್, ಶಾರದಾಂಬಾ ನಗರ, ಜಾಲಹಳ್ಳಿ, ಬೆಂಗಳೂರು	5,000
14	**ಸಿ.ಜಯಕೃಷ್ಣಪ್ಪ**, ನಂ.865, 5ನೇ ಕ್ರಾಸ್, 5ನೇ ಮೇನ್, ಇಂದಿರಾನಗರ ಮೊದಲನೇ ಹಂತ, ಬೆಂಗಳೂರು	5,000
15	**ಪ್ರಾಣೇಶ್ ಡಿ. ಜೋಶಿ**, ನಂ. 106, ವಸಂತ ನಗರ, ಕುಸುಗಲ್ ರಸ್ತೆ, ಕೇಶ್ವಾಪುರ, ಹುಬ್ಬಳ್ಳಿ	4,000
16	**ಜಿ.ಎಸ್.ಭಾರ್ಗವಿ**, ನಂ.766;ಚಾಮುಂಡೇಶ್ವರಿ ನಗರ, 8ನೇ ಕ್ರಾಸ್, ಮಂಡ್ಯ	2,500
17	**ನಿಷೇಕಾ ವಿ.ಎಸ್.**, ನಾಗದೇವನಹಳ್ಳಿ, ಕೆಂಗೇರಿ ಉಪನಗರ, ಬೆಂಗಳೂರು	2,500
18	**ವಿ.ಎಸ್.ಯದುನಂದನ್**, ನಾಗದೇವನಹಳ್ಳಿ, ಕೆಂಗೇರಿ ಉಪನಗರ, ಬೆಂಗಳೂರು	2,500
19	**ಅಶೋಕ ಸುಂಕದ್**, ಜಿ–2, ಪೈನ್ ರಿಜ್ ಅಪಾರ್ಟ್‌ಮೆಂಟ್, 19ನೇ ಕ್ರಾಸ್, ಜಕ್ಕೂರು ಲೇಔಟ್, ಬೆಂಗಳೂರು	2,002
20	**ಮುರಳಿಮೋಹನ್ ಟಿ.ಎಸ್.**, ನಂ.10/2, ಕನಸು, 4ನೇ ಕ್ರಾಸ್, 3ನೇ ಮೇನ್, ಪಾಪಯ್ಯ ಗಾರ್ಡನ್, ಬನಶಂಕರಿ 3ನೇ ಹಂತ, ಬೆಂಗಳೂರು	2,000
21	**ಎಂ.ಎಸ್.ಅಕ್ಷತಾ**, ಶ್ರೀನಿಧಿ ನಿಲಯ, ಮಲ್ಲೇಶ್ವರ ಸಭಾಭವನದ ಹತ್ತಿರ, ಎನ್‌ಟಿಬಿ ಕಚೇರಿ ರಸ್ತೆಯ ಹಿಂದೆ, ಜನ್ನಾಪುರ, ಭದ್ರಾವತಿ	2,000
22	**ಎಂ.ಸಿ.ಸತ್ಯನಾರಾಯಣ**, ಶ್ರೀನಿಧಿ ನಿಲಯ, ಮಲ್ಲೇಶ್ವರ ಸಭಾಭವನದ ಹತ್ತಿರ,ಜನ್ನಾಪುರ, ಭದ್ರಾವತಿ, ಶಿವಮೊಗ್ಗ ಜಿಲ್ಲೆ	2,000
23	**ಲೋಕೇಶ್ ಬಿ.ಸಿ**, ನಂ. 201/1, ಬೆಳಕು, ಮಂಜುನಾಥ ನಗರ, ಬೆಂಗಳೂರು	2,000
24	**ಅಜೇಯ ವಸಂತ**, ಕುಶಾಲನಗರ, ಕೊಡಗು	1,500
25	**ಎಚ್.ಸಿ.ಮುರುಗೇಶ್**, ನಂ. 179, 1ನೇ ಮೇನ್, ಲಕ್ಷ್ಮೀನಗರ, ಕೆನರಾ ಬ್ಯಾಂಕ್ ಹತ್ತಿರ, ಗೋಕುಲ ರಸ್ತೆ, ಹುಬ್ಬಳ್ಳಿ	1,011
26	**ಕೊಡಕ್ಕಲ್ ಶಿವಪ್ರಸಾದ್**, ಮೊದಲನೇ ತಿರುವು, ಗುಂಡಪ್ಪ ಶೆಡ್,ಶಿವಮೊಗ್ಗ	1,001
27	**ಚೇತನಾ ಎಂ.ಎಸ್.**, *D/O* ಡಾ.ಎಂ.ಬಿ. ಶಂಕರ್, ಡಿವಿಎಸ್ ಕಾಲೊನಿ, ಜೆಎನ್‌ಎನ್‌ಎಸ್ ಹಿಂಭಾಗ, ನವುಲೆ, ಶಿವಮೊಗ್ಗ	1,001
28	**ಹರೀಶ್ ಕುಮಾರ್ ವಿ**, ಬೆಂಗಳೂರು	1,000
	ಸಂಗ್ರಹವಾದ ಒಟ್ಟು ಮೊತ್ತ	2,18,017

ವನ್ಯಪ್ರೇಮಿಗಳ ಆಕರ್ಷಣೆಯ ‘ಮಿಸ್ಟರ್ ಕಬಿನಿ’

8 ಅಡಿ ದಂತದ ‘ಭೋಗೇಶ್ವರ’ ಇನ್ನಿಲ್ಲ

ಪ್ರಜಾವಾಣಿ ವಾರ್ತೆ


‘ಮಿಸ್ಟರ್ ಕಬಿನಿ’ ಖ್ಯಾತಿಯ ‘ಭೋಗೇಶ್ವರ’ ಆನೆ (ಸಂಗ್ರಹ ಚಿತ್ರ)

ಎಚ್.ಡಿ. ಕೋಟೆ (ಮೈಸೂರು ಜಿಲ್ಲೆ): ನಾಗರಹೊಳೆ ಮತ್ತು ಬಂಡೀಪುರ ವ್ಯಾಪ್ತಿಯಲ್ಲಿರುವ ಕಬಿನಿ ಹಿನ್ನೀರಿನಲ್ಲಿ ಕಾಣಸಿಗುತಿದ್ದ, ‘ಮಿಸ್ಟರ್ ಕಬಿನಿ’ ಖ್ಯಾತಿಯ ಮತ್ತು ‘ಭೋಗೇಶ್ವರ’ ಎಂಬ ಹೆಸರಿನಿಂದ ಕರೆಯಲಾಗುತ್ತಿದ್ದ ಗಂಡಾನೆ ವಯೋಸಹಜ ಕಾರಣಗಳಿಂದಾಗಿ ಸಾವಿಗೀಡಾಗಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ ಉಪ ವಿಭಾಗದ ಗುಂಡ್ರೆ ವಲಯದ ಹೊಸಹಳ್ಳಿ ಶಾಖೆಯ ನಾಯಿಹಳ್ಳ ಗಸ್ತಿನ ಸುತ್ತನಹಳ್ಳ ಎಂಬ ಕಬಿನಿ ಹಿನ್ನೀರಿನ ಅರಣ್ಯ ಪ್ರದೇಶದಲ್ಲಿ ಗಸ್ತಿನಲ್ಲಿದ್ದ ಸಿಬ್ಬಂದಿ, ಆನೆ ಮೃತಪಟ್ಟಿರುವುದನ್ನು ಗಮನಿಸಿದ್ದಾರೆ. 2–3 ದಿನಗಳ ಹಿಂದೆಯೇ ಮೃತಪಟ್ಟಿರಬಹುದು ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ.

‘ಆ ಆನೆಯ ದೇಹವನ್ನು ಪರಿಶೀಲಿಸಿದಾಗ ಯಾವುದೇ ಗಾಯಗಳ ಗುರುತು, ಕಾದಾಟದಿಂದ ಅಥವಾ ವಿಷಪ್ರಾಶನದಿಂದ ಮೃತಪಟ್ಟಿರುವುದು ಮೇಲ್ನೋಟಕ್ಕೆ ಕಂಡುಬಂದಿಲ್ಲ. ಇಲಾಖೆಯ ಪಶು ವೈದ್ಯಾಧಿಕಾರಿಗಳಾದ ಡಾ.ವಸೀಂ ಮಿರ್ಜಾ (ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ) ಅವರಿಂದ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ’ ಎಂದು ಗುಂಡ್ರೆ ವಲಯ ಅರಣ್ಯ ವ್ಯಾಪ್ತಿಯ ವಲಯಾಧಿಕಾರಿ ಅಮೃತೇಶ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮರಣೋತ್ತರ ಪರೀಕ್ಷಾ ವರದಿಯ ಪ್ರಕಾರ ಆನೆಯು 60 ವರ್ಷ ವಯಸ್ಸಿನದು, ವಯೋಸಹಜ ಕಾರಣದಿಂದ ಮೃತಪಟ್ಟಿದೆ ಎಂಬುದು ತಿಳಿದುಬಂದಿದೆ. ಎರಡೂ ದಂತಗಳು ಸುರಕ್ಷಿತವಾಗಿದ್ದು ಭದ್ರತೆಯಲ್ಲಿ ಇಡಲಾಗಿದೆ. ಹೆಚ್ಚಿನ ತನಿಖೆಗಾಗಿ ದೇಹದ ಮಾದರಿಗಳನ್ನು ಮೈಸೂರಿನ ಪ್ರಾದೇಶಿಕ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ’ ಎಂದು ಮಾಹಿತಿ ನೀಡಿದರು.

ಭೋಗೇಶ್ವರ ಆನೆ ಅತಿ ದೊಡ್ಡ ದಂತಗಳನ್ನು ಹೊಂದಿ, ಆಕರ್ಷಕವಾಗಿ ಕಾಣಿಸುತ್ತಿದ್ದುದ್ದರಿಂದ ಸಾಕಷ್ಟು ಪ್ರಚಾರ ಗಳಿಸಿತ್ತು. ಏಷ್ಯಾ ತಳಿಯ ಆನೆಗಳಲ್ಲೇ 8 ಅಡಿ ಉದ್ದದ ದಂತಗಳನ್ನು ಹೊಂದಿದ್ದಿದ್ದು ವಿಶೇಷವಾಗಿದೆ. ಈ ಆನೆಯು ನಡೆದು ಬರುತ್ತಿದ್ದರೆ ಎರಡೂ ದಂತಗಳು ನೆಲವನ್ನು ತಾಕುತ್ತಿದ್ದವು. ಈ ಕಾರಣದಿಂದ ಅದು ಹುಲ್ಲನ್ನು ಸರಾಗವಾಗಿ ಬಾಯಿಗೆ ಹಾಕಿಕೊಳ್ಳುವುದಕ್ಕೆ ಆಗುತ್ತಿರಲಿಲ್ಲ. ಈ ಎಲ್ಲ ಹಲವು ವಿಶೇಷಗಳ ಕಾರಣದಿಂದಾಗಿ ವನ್ಯಜೀವಿ ಪ್ರಿಯರ ನೆಚ್ಚಿನ ಆನೆಯಾಗಿತ್ತು. ಅಲ್ಲದೇ ಜನರಿಗೆ ಸಫಾರಿಯ ವೇಳೆಯೂ ಆಗಾಗ್ಗೆ ಕಾಣಿಸುವ ಮೂಲಕ ಕ್ಯಾಮೆರಾಗಳಲ್ಲಿ ಸೆರೆಯಾಗಿ ದೇಶವಲ್ಲದೇ ವಿಶ್ವದಾದ್ಯಂತ ಪ್ರಸಿದ್ಧಿಯನ್ನೂ ಗಳಿಸಿತ್ತು. ಸೌಮ್ಯ ಸ್ವಭಾವದ ಅದು ಡಿ.ಬಿ. ಕುಪ್ಪೆ ವಲಯದಲ್ಲಿರುವ ಅರಣ್ಯ ಪ್ರದೇಶದ ಭೋಗೇಶ್ವರ ಗುಡಿ ಸಮೀಪದಲ್ಲಿ ಹೆಚ್ಚಾಗಿ ಇರುತ್ತಿತ್ತು. ಹೀಗಾಗಿ, ಅದಕ್ಕೆ ‘ಭೋಗೇಶ್ವರ’ ಎಂಬ ಹೆಸರನ್ನೂ ಪ್ರವಾಸಿಗರು, ವನ್ಯಪ್ರೇಮಿಗಳು ಇಟ್ಟಿದ್ದರು. ಛಾಯಾಗ್ರಾಹಕರಿಗೆ ಅಚ್ಚುಮೆಚ್ಚಾಗಿತ್ತು.

ಸಫಾರಿ ವೇಳೆ ಅದನ್ನು ನೋಡಿದ್, ಅದರ ಬಗ್ಗೆ ತಿಳಿದಿದ್ದ ಬಹಳಷ್ಟು ಮಂದಿ ಸಾಮಾಜಿಕ ಜಾಲತಾಣದಲ್ಲಿ ಫೋಟೊಗಳನ್ನು ಹಂಚಿಕೊಂಡಿದ್ದಾರೆ. ಶೇರ್ ಮಾಡಿದ್ದಾರೆ. ಕಂಬನಿ ಮಿಡಿದಿದ್ದಾರೆ.

ಬೆಳಗಾವಿ: ಮೂವರ ಬಂಧನ

ಬೆಳಗಾವಿ: ಬಿಜೆಪಿ ಮಾಜಿ ವಕ್ತಾರೆ ನೂಪುರ್ ಶರ್ಮಾ ಅವರ ಪ್ರತಿಕೃತಿಯನ್ನು ನಡುರಸ್ತೆಯಲ್ಲಿ ನೇತುಹಾಕಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ನಗರದ ನಿವಾಸಿಗಳಾದ ಮೊಹಮ್ಮದ್ ಶೋಯೆಬ್, ಅಮನ್ ಮೊಕಾಶಿ ಹಾಗೂ ಅಬ್ರಾಜ್ ಮೊಕಾಶಿ ಬಂಧಿತರು.

‘ಸಮಾಜದಲ್ಲಿ ಶಾಂತಿ ಕದಡುವ ಯತ್ನ ಮಾಡಿದ ಆರೋಪದಡಿ ಮೂವರನ್ನು ಬಂಧಿಸಲಾಗಿದೆ’ ಎಂದು ಡಿಸಿಪಿ ರವೀಂದ್ರ ಗದಾಡಿ ತಿಳಿಸಿದ್ದಾರೆ.

ಪ್ರವಾದಿ ಮಹಮ್ಮದ್ ಅವರ ಕುರಿತು ನೂಪುರ್ ಶರ್ಮಾ ನೀಡಿದ ವಿವಾದಾತ್ಮಕ ಹೇಳಿಕೆ ಖಂಡಿಸಿ, ನಗರದ ಫೋರ್ಟ್ ರಸ್ತೆಯಲ್ಲಿ ಅವರ ಪ್ರತಿಕೃತಿಯನ್ನು ಗಲ್ಲಿಗೇರಿಸಿದ ರೀತಿಯಲ್ಲಿ ಗುರುವಾರ ರಾತ್ರಿ ನೇತುಹಾಕಲಾಗಿತ್ತು. ಇದನ್ನು ಖಂಡಿಸಿ ವಿವಿಧ ಸಂಘಟನೆಗಳ ಮುಖಂಡರು ಹಾಗೂ ಪಾಲಿಕೆಯ ಕೆಲ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದ್ದರು.

ಮೆರವಣಿಗೆಗೆ ಪೊಲೀಸರಿಂದ ಅನುಮತಿ ನಕಾರ • ಕಾರ್ಯಕ್ರಮದಿಂದ ದೂರ ಉಳಿದ ಸ್ಥಳೀಯರು

‘ಅನುಭವ ಮಂಟಪದ ಕಡೆ’ ಅಭಿಯಾನ ಶಾಂತಿಯುತ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಒಂದೂವರೆ ಸಾವಿರ ಜನರಷ್ಟೇ ಭಾಗಿ
- ಅಕ್ಟೋಬರ್‌ನಲ್ಲಿ ಮತ್ತೊಂದು ಸುತ್ತಿನ ಅಭಿಯಾನಕ್ಕೆ ಚಿಂತನೆ
- ಸರ್ವೆ ನಡೆಸುವ ನಿರ್ಧಾರ ಕೈಗೊಂಡಿಲ್ಲ: ಜಿಲ್ಲಾಧಿಕಾರಿ


ಬಸವಕಲ್ಯಾಣದಲ್ಲಿ ಭಾನುವಾರ ತಡೋಳಾದ ರಾಜೇಶ್ವರ ಶಿವಾಚಾರ್ಯರ ನೇತೃತ್ವದಲ್ಲಿ ಮಠಾಧೀಶರು ಜಿಲ್ಲಾಧಿಕಾರಿ ಗೋವಿಂದ ರಡ್ಡಿ ಅವರಿಗೆ ಮನವಿಪತ್ರ ಸಲ್ಲಿಸಿದರು

ಬೀದರ್: ‘ಮಠಾಧೀಶರ ನಡೆ ಅನುಭವ ಮಂಟಪದ ಕಡೆ’ ಅಭಿಯಾನ ಯಾವುದೇ ಗದ್ದಲವಿಲ್ಲದೆ ಭಾನುವಾರ ಇಲ್ಲಿ ಶಾಂತಿಯುತವಾಗಿ ನಡೆಯಿತು. ಜಿಲ್ಲಾಡಳಿತ ಬಿಗಿ ಕ್ರಮ ಕೈಗೊಂಡಿತ್ತು.

ಪೊಲೀಸರು ಮೆರವಣಿಗೆಗೆ ಅನುಮತಿ ನೀಡದ ಕಾರಣ ಮಠಾಧೀಶರು ಮಾತೆ ಮಹಾದೇವಿ ಆಶ್ರಮದಿಂದ ಬಸವೇಶ್ವರ ವೃತ್ತದವರೆಗೆ ವಾಹನದಲ್ಲಿ ಬಂದು ಅಲ್ಲಿಂದ 100 ಮೀಟರ್ ಅಂತರದಲ್ಲಿರುವ ತೇರು ಮೈದಾನದ ಸಭಾಭವನಕ್ಕೆ ಮೆರವಣಿಗೆಯಲ್ಲಿ ಆಗಮಿಸಿದರು.

ಐದು ಸಾವಿರ ಆಸನಗಳ ಸಭಾಭವನದಲ್ಲಿ ಭಾಗಿಯಾಗಿದ್ದವರ ಸಂಖ್ಯೆ ಒಂದೂವರೆ ಸಾವಿರ ಮೀರಿರಲಿಲ್ಲ. ಕಲಬುರಗಿ, ಚಾಮರಾಜನಗರ, ಶಿವಮೊಗ್ಗ ಹಾಗೂ ಬೀದರ್ ಜಿಲ್ಲೆಗಳಿಂದ ಬಂದಿದ್ದ 39 ಮಠಾಧೀಶರು ಅವರ ಶಿಷ್ಯಂದಿರು ಅಭಿಯಾನದಲ್ಲಿ ಭಾಗವಹಿಸಿದ್ದರು. ಶಾಸಕ ಶರಣು ಸಲಗರ ಅವರ ಬೆಂಬಲಿಗರು ಬಿಟ್ಟರೆ ಸ್ಥಳೀಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿಲ್ಲ.

‘ಮಠಾಧೀಶರ ನಡೆ ಮೂಲ ಅನುಭವ ಮಂಟಪ ಕಡೆ’ ಹೋರಾಟದ ನೇತೃತ್ವ ವಹಿಸಿದ್ದ ತಡೋಳಾದ ರಾಜೇಶ್ವರ ಶಿವಾಚಾರ್ಯರು ಹಾಗೂ ಮೂಲ ಅನುಭವ ಮಂಟಪ ಹೋರಾಟ ಸಮಿತಿ ಸಂಯೋಜಕ ಕಿರಣ ಖಂಡ್ರೆ ಅವರು ಮನವಿ ಮಾಡಿಕೊಂಡಿದ್ದರಿಂದ ಶ್ರೀರಾಮ ಸೇನೆಯ ಪ್ರಮೋದ ಮುತಾಲಿಕ್ ಹಾಗೂ ರಾಜ್ಯ ಘಟಕದ ಅಧ್ಯಕ್ಷ ಸಿದ್ದಲಿಂಗ ಸ್ವಾಮೀಜಿ ಕಾರ್ಯಕ್ರಮಕ್ಕೆ ಬಂದಿರಲಿಲ್ಲ.

‘ಪೀರ್‌ಪಾಷಾ ದರ್ಗಾ ಇರುವ ಪ್ರದೇಶದಲ್ಲಿ 15 ದಿನಗಳಲ್ಲಿ ಸಮೀಕ್ಷೆ ನಡೆಸಲಾಗುವುದು’ ಎಂದು ಬಸವಕಲ್ಯಾಣ ಶಾಸಕ ಶರಣು ಸಲಗರ ಮಾಧ್ಯಮಗಳಿಗೆ ಹೇಳಿಕೆ ಕೊಟ್ಟರು. ಆದರೆ, ಜಿಲ್ಲಾಧಿಕಾರಿ ಗೋವಿಂದ ರಡ್ಡಿ, ‘ಪೀರ್‌ಪಾಷಾ ದರ್ಗಾ, ಅಥವಾ ಅದರ ಸುತ್ತಮುತ್ತಲಿನ ಪ್ರದೇಶದಲ್ಲಿ ಯಾವುದೇ ರೀತಿಯ ಸಮೀಕ್ಷೆ ಅಥವಾ ಸಂಶೋಧನೆ ನಡೆಸಲು ನಿರ್ಧಾರ ತೆಗೆದುಕೊಂಡಿಲ್ಲ’ ಎಂದು ಸ್ಪಷ್ಟಪಡಿಸಿದರು. ಕಾರ್ಯಕ್ರಮ ಮುಗಿದ ನಂತರ ಮಠಾಧೀಶರು ಜಿಲ್ಲಾಧಿಕಾರಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.



ಇಂಗ್ಲಿಷ್ ಆನ್‌ಲೈನ್ ಪದಕೋಶಗಳು

dictionary.com
merriam – webster.com
dictionary. cambridge.org
ಆನ್‌ಲೈನ್ ಕನ್ನಡ ಪದಕೋಶಗಳು
bharatavani.in / dictionary – page
baraha.com/v10/kannada/index.php
kanaja.in/?page_id = 11120

ಆನ್‌ಲೈನ್ ಜ್ಞಾನಕೋಶಗಳು

britannica.com
wikipedia.org
kn.wikipedia.org
kannada.bharatavani.in
kanaja.in


ಎಸ್ಸೆಸ್ಸೆಲ್ಸಿವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದೆ. ನಂತರ ಪಿಯುಸಿಯಲ್ಲಿ ವಿಜ್ಞಾನ ವಿಭಾಗದ 'ಪಿಸಿಎಂಸಿ' ಸಂಯೋಜನೆಗೆ ಸೇರಿಕೊಂಡೆ. ಪ್ರಾರಂಭದಲ್ಲಿ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಪದಗಳನ್ನು ಅರ್ಥೈಸಿಕೊಳ್ಳಲು ತುಂಬಾ ಕಷ್ಟಪಟ್ಟೆ. ಆದರೆ, ಉಪನ್ಯಾಸಕರು, ಸಹಪಾಠಿಗಳ ನೆರವಿನಿಂದ ಪದಗಳನ್ನು ತಿಳಿಯುತ್ತಾ, ಕಲಿಕೆಯನ್ನು ಸುಲಭ ಮಾಡಿಕೊಂಡೆ. ನಾನೀಗ ಪಿಯುಸಿ ಮುಗಿಸಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಓದುತ್ತಿದ್ದೇನೆ. ಈಗ ಯಾವುದೇ ಸಮಸ್ಯೆ ಇಲ್ಲ.

ನವೀನ್ ವೈ.ಎಂ, ಏಕಾಶಿಪುರ, ದೊಡ್ಡಬಳ್ಳಾಪುರ

ಕನ್ನಡ ಮಾಧ್ಯಮದಲ್ಲಿ ಎಸ್ಸೆಸ್ಸೆಲ್ಸಿ ಓದಿದ್ದ ನಾನು, ಪಿಯುಸಿಯಲ್ಲಿ ಆರ್ಟ್ಸ್ ಓದಬೇಕೆಂದುಕೊಂಡಿದ್ದೆ. ಆದರೆ, ಹೆಚ್ಚು ಅಂಕ ಬಂದಿದ್ದರಿಂದ, ನಮ್ಮ ಟೀಚರ್, ಪಿಯುಸಿಯಲ್ಲಿ ವಿಜ್ಞಾನ ವಿಭಾಗಕ್ಕೆ ಸೇರಿಸಿದರು. ಆರಂಭದಲ್ಲಿ ಪಾಠ ಅರ್ಥವಾಗುತ್ತಿರಲಿಲ್ಲ. ನಮ್ಮ ಹೈಸ್ಕೂಲ್‌ನ ಪದ್ಮಾ ಮೇಡಂ ಶಬ್ದಗಳ ಅರ್ಥ ತಿಳಿಯಲು 'ಭಾರದ್ವಾಜ ಡಿಕ್ಷನರಿ' ಓದು ಎಂದರು. ಆ ಸಲಹೆ ನನಗೆ ತುಂಬಾ ಸಹಾಯಕ್ಕೆ ಬಂತು. ನಾನೀಗ ಪಿಯುಸಿ ಮುಗಿಸಿ, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿಭಾಗದಲ್ಲಿ ಎಂಜಿನಿಯರಿಂಗ್ ಓದುತ್ತಿದ್ದೇನೆ.

ಕಾವ್ಯ, ಅರಳುಮಲ್ಲಿಗೆ, ದೊಡ್ಡಬಳ್ಳಾಪುರ

'ವೃತ್ತಿಗೆ ತಕ್ಕ ಕೋರ್ಸ್ ಆಯ್ಕೆ ಮಾಡಿಕೊಳ್ಳಿ'



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್ ಕುಮಾರ್

1. ನಾನು ದ್ವಿತೀಯ ಪಿಯುಸಿ ಪರೀಕ್ಷೆ ಬರೆದಿದ್ದೇನೆ. ಬಿಸಿಎ ಮಾಡಿ ನಂತರ ಎಂಬಿಎ (ಇವೆಂಟ್ ಮ್ಯಾನೇಜ್‌ಮೆಂಟ್) ಮಾಡಬೇಕೆಂಬ ಅಭಿಲಾಷೆ ಇದೆ. ಆದರೆ, ನನ್ನ ಪೋಷಕರು ಬಿಎಸ್‌ಸಿ (ಕೃಷಿ) ಮಾಡು ಎಂದು ಒತ್ತಾಯಿಸುತ್ತಿದ್ದಾರೆ. ನನಗೆ ಮಾನಸಿಕವಾಗಿ ತುಂಬಾ ಹಿಂಸೆಯಾಗುತ್ತಿದೆ. ನಾನು ಓದಬೇಕೆಂದಿರುವ ಈ ಕೋರ್ಸುಗಳು, ನನ್ನ ಗುರಿ ಸಮಂಜಸವಾಗಿದೆಯೇ, ದಯವಿಟ್ಟು ತಿಳಿಸಿ.

ಸುಜನ್, ಹೊನ್ನಾಳಿ

ಬಿಸಿಎ, ಎಂಬಿಎ ಕೋರ್ಸ್‌ಗಳ ನಂತರದ ವೃತ್ತಿ ಮತ್ತು ವೈಯಕ್ತಿಕ ಬದುಕಿನ ಕನಸುಗಳ ಬಗ್ಗೆ ನಿಮಗೆ ಸ್ಪಷ್ಟತೆಯಿರಬೇಕು. ನೀವು ವೃತ್ತಿಯಲ್ಲೂ, ವೈಯಕ್ತಿಕ ಜೀವನದಲ್ಲೂ ಬೆಳೆದು ಸಂತೃಪ್ತಿ ಪಡೆಯಬೇಕಾದರೆ, ನಿಮಗೆ ಆಸಕ್ತಿಯಿರುವ, ಇಷ್ಟವಿರುವ ವೃತ್ತಿಯನ್ನೇ ಅರಸಬೇಕು. ಹಾಗಾಗಿ, ನಿಮ್ಮ ಆಸಕ್ತಿ, ಅಭಿರುಚಿ, ವೃತ್ತಿಯ ಆಯ್ಕೆಗೆ ಪೂರಕವಾಗುವ ಸಾಮರ್ಥ್ಯ ಮತ್ತು ಸನ್ನದ್ಧತೆಯನ್ನು ನಿಮ್ಮ ಪೋಷಕರಿಗೆ ಮನವರಿಕೆ ಮಾಡಿಕೊಡಿ. ಅವರ ಆತಂಕವನ್ನು ಹೋಗಲಾಡಿಸಿ. ಏಕೆಂದರೆ, ಮಕ್ಕಳ ಭವಿಷ್ಯದ ಬಗ್ಗೆ ಪೋಷಕರ ಆಸಕ್ತಿ, ಚಿಂತನೆ, ಆತಂಕ ಇವೆಲ್ಲವೂ ಸಾಮಾನ್ಯ. ನಿಮ್ಮ ಆಸಕ್ತಿ, ಒಲವು, ಪ್ರತಿಭೆ, ಕೌಶಲಗಳನ್ನೂ, ಕುಟುಂಬದ ಅಗತ್ಯ ಮತ್ತು ಸವಾಲುಗಳನ್ನೂ ಪರಿಗಣಿಸಿ, ಒಂದು ಮುಕ್ತ ವಾತಾವರಣದಲ್ಲಿ ಪರಸ್ಪರ ಚರ್ಚಿಸಿ, ವೃತ್ತಿಯ ಆಯ್ಕೆ ಮತ್ತು ಯೋಜನೆಯನ್ನು ಮಾಡಿ. ಅದರಂತೆ ಕೋರ್ಸ್ ಆಯ್ಕೆಯನ್ನು ಮಾಡಿ. ನಿಮ್ಮ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳಿ. ವೃತ್ತಿ ಯೋಜನೆಯನ್ನು ಮಾಡುವುದರ ಕುರಿತ ಮಾಹಿತಿಗಾಗಿ ಈ ವಿಡಿಯೊ ವೀಕ್ಷಿಸಿ:
https://www.youtube.com/c/EducationalExpertManagementCareerConsultant
ಅಗತ್ಯವೆನಿಸಿದರೆ, ಈ ಅಂಕಣದ ಮೂಲಕ ನಮ್ಮನ್ನು ಸಂಪರ್ಕಿಸಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಪಿಯುಸಿ: ವಿಜ್ಞಾನ–ಇಂಗ್ಲಿಷ್ ಕಗ್ಗಂಟು

ಜೊತೆಗಿರಲಿ ನಿಘಂಟು

ಎಸ್ಸೆಸ್ಸೆಲ್ಸಿವರೆಗೆ ಕನ್ನಡ ಮಾಧ್ಯಮದಲ್ಲಿ ಕಲಿತವರಿಗೆ ಇಂಗ್ಲಿಷ್ ಮಾಧ್ಯಮದಲ್ಲಿ ಪಿಯುಸಿ ಓದುವುದು ಆಗಿಬರುವುದೇ ಇಲ್ಲ ಎಂಬುದು ಸುಳ್ಳು ಮತ್ತು ತಪ್ಪು. ಕನ್ನಡ ಭಾಷೆಯನ್ನು ಸರಿಯಾಗಿ ಕಲಿತವರು ಇನ್ನಾವುದೇ ಭಾಷೆಯನ್ನು ಚೆನ್ನಾಗಿ ಕಲಿಯುತ್ತಾರೆ ಎಂಬುದು ಸಾರ್ವಕಾಲಿಕ ಸತ್ಯ.

ಗುರುರಾಜ್ ಎಸ್. ದಾವಣಗೆರೆ

ಉತ್ತಮ ಅಂಕಗಳಿಸಿ ಎಸ್‌ಎಸ್‌ಎಲ್‌ಸಿ ಪಾಸಾದ ಬಹುತೇಕ ವಿದ್ಯಾರ್ಥಿಗಳ ಪ್ರಥಮ ಆಯ್ಕೆ ಪಿಯುಸಿಯಲ್ಲಿ ವಿಜ್ಞಾನ ವಿಷಯವೇ ಆಗಿರುತ್ತದೆ. ಕಡಿಮೆ ಅಂಕಗಳಿಸಿದ ಅನೇಕರು ಕಾಮರ್ಸ್ ಅಥವಾ ಕಲಾ ವಿಭಾಗ ಆಯ್ಕೆ ಮಾಡಿಕೊಳ್ಳುತ್ತಾರೆ.

ಎಂಜಿನಿಯರಿಂಗ್ ಮತ್ತು ವೈದ್ಯಕೀಯ – ಅರೆವೈದ್ಯಕೀಯ ಕೋರ್ಸ್ ಓದಬಯಸುವವರು ಅನಿವಾರ್ಯವಾಗಿ ವಿಜ್ಞಾನವನ್ನೇ ಆಯ್ಕೆ ಮಾಡಿಕೊಳ್ಳಬೇಕು. ನಗರ ಹಾಗೂ ಪಟ್ಟಣ ಪ್ರದೇಶಗಳ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಕಲಿತವರು ಪಿಯುಸಿಯಲ್ಲಿ ವಿಜ್ಞಾನ ವಿಷಯ ಆರಿಸಿಕೊಂಡು ಸುಲಭವಾಗಿ ಓದು ಮುಂದುವರೆಸುತ್ತಾರೆ. ಆದರೆ, 10ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಓದಿ, ಜೀವನದಲ್ಲಿ ಏನಾದರೂ ದೊಡ್ಡದಾಗಿ ಸಾಧಿಸಬೇಕೆಂಬ ಗುರಿಯೊಂದಿಗೆ ಪಿಯುಸಿಯಲ್ಲಿ ವಿಜ್ಞಾನ ವಿಷಯ (ಇಂಗ್ಲಿಷ್ ಮಾಧ್ಯಮದಲ್ಲಿ) ತೆಗೆದುಕೊಳ್ಳುವ ಗ್ರಾಮೀಣ ಮತ್ತು ಅರೆ ನಗರ ಪ್ರದೇಶದ ಮಕ್ಕಳಿಗೆ ಓದು ಕಠಿಣವಾಗುತ್ತದೆ. ಉಪನ್ಯಾಸಕರು ಬಳಸುವ ಇಂಗ್ಲಿಷ್‌ನಿಂದಾಗಿ ಕಂಗಾಲಾಗಿಬಿಡುತ್ತಾರೆ!

ಆಂಗ್ಲ ಮಾಧ್ಯಮದ ಏರು ಹಾದಿ

ಮಾಧ್ಯಮ ಬದಲಾದಾಗ, ಹೊಸದಕ್ಕೆ ಹೊಂದಿಕೊಳ್ಳುವುದು ತುಂಬಾ ಕಷ್ಟ. ವಿಜ್ಞಾನ ವಿಭಾಗದ ಫಿಸಿಕ್ಸ್, ಕೆಮಿಸ್ಟ್ರಿ, ಬಯಾಲಜಿ ವಿಷಯಗಳಲ್ಲಿ ಬರುವ ಪಾರಿಭಾಷಿಕ ಪದಗಳ ಅರ್ಥ ತಿಳಿಯು ವುದು, ಪದಗಳ ಉಚ್ಚಾರಣೆ, ಸ್ಪೆಲಿಂಗ್ ಬರೆಯುವುದು, ನೆನಪಿಟ್ಟು ಕೊಳ್ಳುವುದು, ಪರೀಕ್ಷೆಗಳಲ್ಲಿ ಯಥಾವತ್ತಾಗಿ ಉತ್ತರಿಸುವುದು ಇವೆಲ್ಲ ಅಷ್ಟು ಸುಲಭವಲ್ಲ.

ಕನ್ನಡ ಮಾಧ್ಯಮದಲ್ಲಿ ಕಲಿತ 'ವೇಗೋತ್ಕರ್ಷ', 'ದಿಶಾಯುಕ್ತ', 'ಪತ್ರ ಹರಿತ್ತು', 'ದ್ಯುತಿ ಸಂಶ್ಲೇಷಣೆ', 'ಶ್ರೇಢಿ', 'ವಿದ್ಯುದ್ವಿಭಜನೆ', 'ಬಾಷ್ಪೀಕರಣ', 'ಆವೇಗ', 'ಜಡತ್ವ', 'ರೋಹಿತ', 'ವಿಲೋಮ'.. ಇಂಥ ಪದಗಳಿಗೆ ಸಮನಾದ ಇಂಗ್ಲಿಷ್ ಪದಗಳು ಪಠ್ಯದಲ್ಲಿರುತ್ತವೆ. ಆದರೆ ಇದಕ್ಕೆ ಇದೇ ಸಮನಾದ ಪದ ಎಂಬುದು ವಿದ್ಯಾರ್ಥಿಗಳಿಗೆ ಅಷ್ಟು ಬೇಗ ತಿಳಿಯುವುದಿಲ್ಲ. ಅದನ್ನು ಆಂಗ್ಲಮಾಧ್ಯಮದಲ್ಲಿ ಪಾಠ ಮಾಡುವವರು ಹೇಳಿ ಕೊಡುವುದು ವಿರಳ.

'ಎಕ್ಸ್' ಬೆಲೆಯನ್ನು ಕಂಡು ಹಿಡಿಯಿರಿ ಎಂಬುದಕ್ಕೆ 'ಸಾಲ್ವ್ ಫಾರ್ ಎಕ್ಸ್' (Solve for x), ಮೂಲಗಳನ್ನು ಕಂಡು ಹಿಡಿಯಿರಿ ಎಂಬುದಕ್ಕೆ 'ಫ್ಯಾಕ್ಟರೈಸ್(Factories)', ಸ್ಪರ್ಶಕಗಳನ್ನು ಎಳೆಯಿರಿ ಎಂಬುದಕ್ಕೆ 'ಡ್ರಾ ದ ಟ್ಯಾಂಜೆಂಟ್(Draw the Tangent)' – ಇಂತಹ ವಾಕ್ಯಗಳು ತುಂಬಾ ಗೊಂದಲ ಸೃಷ್ಟಿಸುತ್ತವೆ.

ಬಯಾಲಜಿಯ ಪದಗಳನ್ನು ಬರೆಯುವುದು, ಉಚ್ಚರಿಸುವುದು ಬೇರೆ ಬೇರೆ ಎಂದು ಗೊತ್ತಾದಾಗ ಜಂಘಾಬಲವೇ ಉಡುಗಿಹೋಗುತ್ತದೆ. ಉದಾಹರಣೆಗೆ ಟೆರಿಡೋಫೈಟಾ ಎಂಬ ಪದವನ್ನು PTeridophyta ಎಂದು 'P' ಅಕ್ಷರದಿಂದ ಪ್ರಾರಂಭಿಸಿ ಬರೆಯುತ್ತೇವೆ. ಅದೇ ರೀತಿ ಸೈಕಾಲಜಿ (Psychology) ಪದ ಕೂಡ. ಇದು ಅನೇಕ ವಿದ್ಯಾರ್ಥಿಗಳಲ್ಲಿ ಗೊಂದಲ ಸೃಷ್ಟಿಸುತ್ತದೆ. ಇಂಥ ಸಮಸ್ಯೆಗಳಿಂದಾಗಿ ಕೆಲವರು ಅರ್ಧಕ್ಕೆ ಕಾಲೇಜು ಬಿಡುತ್ತಾರೆ. ಇನ್ನೂ ಕೆಲವರು ಆರ್ಟ್ಸ್,ಕಾಮರ್ಸ್‌ಗೆ ಬದಲಾಯಿಸಿಕೊಂಡು ಓದು ಮುಂದುವರೆಸುತ್ತಾರೆ.

ಈಸಬೇಕು – ಇದ್ದು ಓದಬೇಕು

- ವಿಜ್ಞಾನ ವಿಷಯ ಆಯ್ಕೆ ಮಾಡಿಕೊಂಡ ಮೇಲೆ ಆಂಗ್ಲಮಾಧ್ಯಮದ ತೊಡಕುಗಳ ನಿವಾರಣೆಗೆ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. ವಿಜ್ಞಾನ – ಪಾರಿಭಾಷಿಕ ಪದವಿವರಣ ಕೋಶಗಳನ್ನು ಮತ್ತು ಇಂಗ್ಲಿಷ್ – ಕನ್ನಡ ನಿಘಂಟನ್ನು ತಪ್ಪದೇ ಓದಬೇಕು.
- ಇಂಗ್ಲಿಷ್ ಕನ್ನಡ ಎರಡನ್ನೂ ಬಲ್ಲ ನುರಿತ ಅಧ್ಯಾಪಕರನ್ನು ಸಂಪರ್ಕಿಸಿ ಯಾವುದಕ್ಕೆ ಏನು ಅರ್ಥ, ಹೇಗೆ ಉಚ್ಚರಿಸಬೇಕು,ಹೇಗೆ ನೆನಪಿಟ್ಟು ಕೊಳ್ಳಬೇಕು ಎಂಬುದನ್ನು ಕೇಳಿ ತಿಳಿದುಕೊಳ್ಳಬೇಕು.
- ಆಯಾ ವಿಷಯಕ್ಕೆ ಸಂಬಂಧಿಸಿದ ಪಾರಿಭಾಷಿಕ ಪದಗಳಿರುತ್ತವೆ. ಅವುಗಳ ಅರ್ಥವನ್ನು ಮೊದಲು ಗ್ರಹಿಸಬೇಕು. ಯಾರು ಏನನ್ನೇ ಓದಿದರೂ ಅದನ್ನು ತಮಗೆ ಅರ್ಥವಾಗುವ ಭಾಷೆಗೆ ಭಾಷಾಂತರ ಮಾಡಿಕೊಂಡೇ ಅರ್ಥಮಾಡಿಕೊಳ್ಳುತ್ತಾರೆ. ಆದ್ದರಿಂದ ನಾವು ಮೂಲದಲ್ಲಿ ಓದಿದ ಮಾಧ್ಯಮದಿಂದ ಇಂಗ್ಲಿಷ್ ಮಾಧ್ಯಮದ ವಿಜ್ಞಾನ ಕೋರ್ಸ್ ಸೇರಿಕೊಂಡಾಗ ಅದೇ ಕ್ರಮ ಅನುಸರಿಸಬೇಕು.
- ಯಾವುದೇ ಪದವನ್ನು ಅನುವಾದ ಮಾಡಿಕೊಳ್ಳುವಾಗ ಪದಾನುವಾದ ಮಾಡಬಾರದು. ಮೂಲ ಇಂಗ್ಲಿಷ್ ಪದದ ಅರ್ಥವನ್ನು ಅನುವಾದಿಸಿಕೊಳ್ಳಬೇಕು.
- ರೇಡಿಯೊ, ಟಿವಿ, ಶೈಕ್ಷಣಿಕ ಸಾಕ್ಷ್ಯಚಿತ್ರಗಳಲ್ಲಿ ತಜ್ಞರು ಬಳಸುವ ಪದಗಳನ್ನು ಗಮನವಿಟ್ಟು ಕೇಳಿಸಿಕೊಂಡು ಅವರು ನೀಡುವ ಅರ್ಥ ವಿವರಣೆ, ಪ್ರಯೋಗ ವಿಶ್ಲೇಷಣೆಗಳನ್ನು ಗಹನವಾಗಿ ಗ್ರಹಿಸಬೇಕು.
- ಒಂದೇ ಪದ ಬೇರೆ, ಬೇರೆ ವಿಷಯಗಳಿಗನುಗುಣವಾಗಿ ಬೇರೆ ಅರ್ಥ ಪಡೆಯುತ್ತವೆ. ಉದಾಹರಣೆಗೆ 'ನ್ಯೂಕ್ಲಿಯಸ್'ಗೆ ಬಯಾಲಜಿಯಲ್ಲಿ 'ಕೋಶಬೀಜ' ಎನ್ನುತ್ತೇವೆ. ಅದನ್ನೇ ರಸಾಯನ ವಿಜ್ಞಾನದಲ್ಲಿ 'ಪರಮಾಣು ಬೀಜ' ಎನ್ನುತ್ತೇವೆ. ವಿಷಯ ಸನ್ನಿವೇಶಕ್ಕೆ ತಕ್ಕಂತೆ ಪದಗಳನ್ನು ಅರ್ಥ ಮಾಡಿಕೊಂಡು ಬಳಸಬೇಕು.
- ಇಂಗ್ಲಿಷ್ ದಿನ ಪತ್ರಿಕೆಗಳನ್ನು ಓದಿ ಅರ್ಥ ಮಾಡಿಕೊಳ್ಳುವುದನ್ನು ರೂಢಿ ಮಾಡಿಕೊಳ್ಳಬೇಕು.

ನಿಮ್ಮ ಗಮನದಲ್ಲಿರಲಿ; ಎಸ್ಸೆಸ್ಸೆಲ್ಸಿವರೆಗೂ ಕನ್ನಡ ಮಾಧ್ಯಮದಲ್ಲಿ ಕಲಿತವರು, ಮುಂದೆ ವಿಜ್ಞಾನ ಓದಿ ಐಎಎಸ್, ಐಪಿಎಸ್ ಪರೀಕ್ಷೆ ಪಾಸು ಮಾಡಿ, ವೈದ್ಯರು, ಎಂಜಿನಿಯರ್, ವಿಜ್ಞಾನಿ ಗಳೂ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಉನ್ನತ ಸ್ಥಾನಗಳಿಸಿ ಯಶಸ್ವಿಯಾದ ಹಲವರು ಇದ್ದಾರೆ. ಹಾಗಾಗಿ ಕನ್ನಡ ಮಾಧ್ಯಮದಲ್ಲಿ ಕಲಿತವರಿಗೆ ಇಂಗ್ಲಿಷ್ ಮಾಧ್ಯಮದ ಓದು ಆಗಿಬರುವುದೇ ಇಲ್ಲ ಎಂಬುದೆಲ್ಲ ಸುಳ್ಳು ಮತ್ತು ತಪ್ಪು. ಕನ್ನಡ ಭಾಷೆಯನ್ನು ಸರಿಯಾಗಿ ಕಲಿತವರು ಇನ್ನಾವುದೇ ಭಾಷೆಯನ್ನು ಚೆನ್ನಾಗಿ ಕಲಿಯುತ್ತಾರೆ ಎಂಬುದು ಸಾರ್ವಕಾಲಿಕ ಸತ್ಯ. ಸೂಕ್ತ ಪರಿಕರಗಳೊಂದಿಗೆ ಆತ್ಮವಿಶ್ವಾಸದಿಂದ ಮುನ್ನಡೆದರೆ ಯಶಸ್ಸು ತನ್ನಿಂತಾನೆ ದೊರಕುತ್ತದೆ.

ಲೇಖಕರು: ಪ್ರಾಚಾರ್ಯರು, ವಿಡಿಯ ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜು, ಬೆಂಗಳೂರು

ಕನ್ನಡದಲ್ಲೇ ಸೈನ್ಸ್..!

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಕನ್ನಡ ಭಾಷೆಯಲ್ಲಿ ಎಂಜಿನಿಯರಿಂಗ್ ಕಲಿಸುವ ಕೆಲಸಕ್ಕೆ ಮುಂದಾಗಿದೆ. ಅದು ಯಶಸ್ವಿಯಾದಲ್ಲಿ ವೈದ್ಯಕೀಯ ವಿಜ್ಞಾನವನ್ನು ಕನ್ನಡದಲ್ಲಿ ಹೇಳಿಕೊಡುವ ದಿನಗಳು ಬಂದೇ ಬರುತ್ತವೆ. ಇದು ಸಂಶೋಧನೆ ಮತ್ತು ಅಭಿವೃದ್ಧಿ ವಿಷಯಗಳಿಗೂ ಅನ್ವಯಗೊಂಡು ಇಂಗ್ಲಿಷ್ ಮಾಧ್ಯಮದ ಓದು ಸಾಧ್ಯವೇ ಇಲ್ಲ ಎನ್ನುವವರಿಗೆ ದೊಡ್ಡ ಅನುಕೂಲ ಕಲ್ಪಿಸುತ್ತದೆ.

ವಿದ್ಯಾರ್ಥಿ ವೇತನ ಕೈಪಿಡಿ

ಬಾರ್ನ್ ಟು ಶೈನ್ ಸ್ಕಾಲರ್‌ಶಿಪ್ 2022

ವಿವರ: ಝೀ ಎಂಟರ್‌ಟೇನ್‌ಮೆಂಟ್ ಎಂಟರ್‌ಪ್ರೈಸಸ್ ಲಿಮಿಟೆಡ್ ಈ ವಿದ್ಯಾರ್ಥಿ ವೇತನವನ್ನು ನೀಡುತ್ತಿದೆ. ಕಲೆಗಳಲ್ಲಿ ಯುವತಿಯರಿಗೆ ಅಗತ್ಯವಿರುವ ವೇದಿಕೆ, ತರಬೇತಿಯನ್ನು ಒದಗಿಸಲಿದೆ.

ಅರ್ಹತೆ: ಭಾರತದ ಹದಿನೈದು ವರ್ಷದೊಳಗಿನ ಯುವತಿಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿದಾರರು ನಿರ್ದಿಷ್ಟ ಭಾರತೀಯ ಕಲಾ ಪ್ರಕಾರದಲ್ಲಿ ಪಾಂಡಿತ್ಯವನ್ನು ಸಾಧಿಸಿರಬೇಕು.

ಆರ್ಥಿಕ ಸಹಾಯ: ₹4 ಲಕ್ಷ (ಮೂರು ವರ್ಷ)


ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25, ಜೂನ್ 2022

ಅರ್ಜಿ ಸಲ್ಲಿಕೆ ವಿಧಾನ: ಇ–ಮೇಲ್ ಮೂಲಕ

ಹೆಚ್ಚಿನ ಮಾಹಿತಿಗೆ: www.b4s.in/praja/BTS7

ಕೃಪೆ: buddy4study.com

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಸಂಯಮ ಎಂಬುದು ಕಹಿಯಾದ ಕಾಯಿ ಇದ್ದಂತೆ. ಆದರೆ ಅದು ಹಣ್ಣಾದಾಗ ತಿನ್ನಲು ಸಿಹಿಯಾಗಿ ಇರುತ್ತದೆ.

–ರೂಸೊ

ಹಣದುಬ್ಬರ ತಗ್ಗಿಸಲು ರೆಪೊ ಏರಿಕೆ ಫಲ ನೀಡೀತೇ ಆರ್‌ಬಿಐ ಕ್ರಮ?

ಬ್ಯಾಂಕ್‌ಗಳಿಗೆ ನೀಡುವ ಸಾಲದ ಮೇಲಿನ ಬಡ್ಡಿ (ರೆಪೊ) ದರವನ್ನು ಶೇಕಡ 0.50ರಷ್ಟು ಹೆಚ್ಚಿಸಲು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ಒಕ್ಕೊರಲಿನಿಂದ ತೀರ್ಮಾನಿಸಿದೆ. ಇದು ಅನಿರೀಕ್ಷಿತವಾದುದೇನೂ ಅಲ್ಲ. ದರ ಹೆಚ್ಚಳದ ಸೂಚನೆಯನ್ನು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಮೊದಲೇ ನೀಡಿದ್ದರು. ರೆಪೊ ದರ ಏರಿಕೆಯು ಶೇ 0.50ಕ್ಕಿಂತಲೂ ಹೆಚ್ಚಾಗಬಹುದು ಎಂಬ ನಿರೀಕ್ಷೆಯೂ ಒಂದು ವರ್ಗದಲ್ಲಿ ಇತ್ತು. ನಿಯಂತ್ರಣ ಮೀರಿ ಹೋಗಿರುವ ಚಿಲ್ಲರೆ ಹಣದುಬ್ಬರ ದರವನ್ನು ಶೇ 6ರ ಮಟ್ಟಕ್ಕಿಂತ ಕಡಿಮೆ ಮಾಡುವ ಉದ್ದೇಶದಿಂದ ಆರ್‌ಬಿಐ ರೆಪೊ ದರ ಹೆಚ್ಚಿಸುತ್ತಿದೆ. ಆಗಸ್ಟ್‌ನಲ್ಲಿಯೂ ರೆಪೊ ದರ ಇನ್ನಷ್ಟು ಜಾಸ್ತಿ ಆಗುವ ಸಾಧ್ಯತೆ ಇದೆ. ಚಿಲ್ಲರೆ ಹಣದುಬ್ಬರ ದರವು ಈ ವರ್ಷದ ಜನವರಿಯಿಂದ ಶೇ 6ಕ್ಕಿಂತ ಜಾಸ್ತಿ ಇದೆ. ಹಣದುಬ್ಬರವು ಈ ಮಟ್ಟವನ್ನು ಮೀರಲೇಬಾರದಿತ್ತು. 2021ರ ಸೆಪ್ಟೆಂಬರ್‌ನಿಂದ ಹಣದುಬ್ಬರ ಹೆಚ್ಚುತ್ತಲೇ ಸಾಗಿದೆ. ಆಗ ಇದನ್ನು ಆರ್‌ಬಿಐ ಬಹುಶಃ ಗಂಭೀರವಾಗಿ ಪರಿಗಣಿಸಲಿಲ್ಲ. ಕೋವಿಡ್‌ನಿಂದ ಬಸವಳಿದಿದ್ದ ಅರ್ಥ ವ್ಯವಸ್ಥೆಯಲ್ಲಿ ಚೇತರಿಕೆ ಮೂಡಬೇಕು ಎಂದಾದರೆ, 'ಹೊಂದಾಣಿಕೆ'ಯ ಹಣಕಾಸಿನ ನಿಲುವು ಬೇಕು ಎಂಬಂತೆ ಇತ್ತು ಅದರ ಧೋರಣೆ. ಆದರೆ, ಜನವರಿ ತಿಂಗಳ ನಂತರದಲ್ಲಿ ಪರಿಸ್ಥಿತಿ ಬೇರೆಯದೇ ಸ್ವರೂಪ ಪಡೆದಿದೆ. ಹೊಂದಾಣಿಕೆಯ ನಿಲುವನ್ನೇ ಮುಂದುವರಿಸಿ, ಹಣದ ಹರಿವು ತಗ್ಗಿಸದೇ ಇದ್ದಲ್ಲಿ, ಹಣದುಬ್ಬರವು ವಿಪರೀತವಾಗಿ (ಅದು ಈಗಾಗಲೇ ಮಿತಿ ಮೀರಿದೆ) ಆರ್ಥಿಕ ಚೇತರಿಕೆ ಹಳಿತಪ್ಪುವ ಆತಂಕ ಇದೆ. ಕಳೆದ ವಾರದ ಎಂಪಿಸಿ ಸಭೆಯ ನಂತರದಲ್ಲಿ ಆರ್‌ಬಿಐ 'ಹೊಂದಾಣಿಕೆ'ಯ ಹಣಕಾಸಿನ ನೀತಿ ಮುಂದುವರಿಸುವುದಿಲ್ಲ ಎಂಬ ಸ್ಪಷ್ಟ ಸೂಚನೆ ನೀಡಿದೆ. ಆದರೆ, ಈಗಿನ ದರ ಏರಿಕೆಯ ಪರಿಣಾಮವಾಗಿ ಹಣದುಬ್ಬರದ ಮಟ್ಟವು ಎಷ್ಟರಮಟ್ಟಿಗೆ ತಗ್ಗಲಿದೆ ಎಂಬುದು ಇನ್ನಷ್ಟೇ ಗೊತ್ತಾಗಬೇಕು.



ಹಣದುಬ್ಬರ ನಿಯಂತ್ರಿಸುವ ಹೊಣೆ ಇರುವುದು ಆರ್‌ಬಿಐ ಮೇಲೆ. ಆದರೆ, ಈಗಿನ ಸ್ಥಿತಿಯಲ್ಲಿ ಆರ್‌ಬಿಐ ಕೈಗೊಳ್ಳುವ ಕ್ರಮಗಳಿಗೆ ಮಿತಿ ಇದೆ ಎಂಬುದೂ ಸತ್ಯ

ಆರ್‌ಬಿಐನ ಕ್ರಮದಿಂದಾಗಿ ಚಿಲ್ಲರೆ ಹಣದುಬ್ಬರ ದರವು ಕಡಿಮೆಯಾಗುವ ಸಾಧ್ಯತೆ ಕಡಿಮೆ ಎಂದು ಹಣಕಾಸು ತಜ್ಞರಲ್ಲಿ ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಚಿಲ್ಲರೆ ಹಣದುಬ್ಬರ ಪ್ರಮಾಣದ ಏರಿಳಿತವನ್ನು ತೀರ್ಮಾನಿಸುವ ಹಲವು ವಹಿವಾಟುಗಳು, ಸಾಲ ಹಾಗೂ ಬಡ್ಡಿ ದರದ ಜೊತೆ ನೇರ ಸಂಬಂಧ ಹೊಂದಿಲ್ಲ. ಹೀಗಾಗಿ, ಆರ್‌ಬಿಐ ಕ್ರಮವು ಹೆಚ್ಚು ಪರಿಣಾಮ ಬೀರುವುದಿಲ್ಲ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ರಷ್ಯಾ–ಉಕ್ರೇನ್ ಯುದ್ಧ ಆರಂಭವಾದ ನಂತರದಲ್ಲಿ ಹಣದುಬ್ಬರ ಹೆಚ್ಚಳವಾಗುತ್ತಿರುವುದಕ್ಕೆ ಮುಖ್ಯ ಕಾರಣ ಕಚ್ಚಾ ತೈಲದ ಬೆಲೆಯಲ್ಲಿ ಹೆಚ್ಚಳ, ಅಡುಗೆ ಎಣ್ಣೆಗಳ ಬೆಲೆ ಏರಿಕೆ, ಇತರ ಕೆಲವು ಅಗತ್ಯ ವಸ್ತುಗಳಲ್ಲಿ ಆಗಿರುವ ಬೆಲೆ ಏರಿಕೆ. ಇವುಗಳಿಗೂ 'ಹೊಂದಾಣಿಕೆ'ಯ ಹಣಕಾಸಿನ ನೀತಿಗೂ ನೇರ ಸಂಬಂಧ ಕಾಣುತ್ತಿಲ್ಲ. ಹಣದುಬ್ಬರ ನಿಯಂತ್ರಿಸುವ ಮಹತ್ವದ ಹೊಣೆಗಾರಿಕೆ ಇರುವುದು ಆರ್‌ಬಿಐ ಹೆಗಲ ಮೇಲೆ ಎಂಬುದು ನಿಜವಾದರೂ, ಈಗಿನ ಸ್ಥಿತಿಯಲ್ಲಿ ಆರ್‌ಬಿಐ ಕೈಗೊಳ್ಳುವ ಕ್ರಮಗಳಿಗೆ ಮಿತಿ ಇದೆ ಎಂಬುದೂ ಸತ್ಯ. ಉಕ್ರೇನ್ ಮತ್ತು ರಷ್ಯಾದಿಂದ ಅಡುಗೆ ಎಣ್ಣೆ ಸರಿಯಾಗಿ ಪೂರೈಕೆ ಆಗದೆ, ದೇಶಿ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆಗಳ ಬೆಲೆಯಲ್ಲಿ ಏರಿಕೆ ಆಗಿ, ಅದರಿಂದ ಒಟ್ಟಾರೆ ಚಿಲ್ಲರೆ ಹಣದುಬ್ಬರ ದರ ಹೆಚ್ಚಳವಾಗುವ ಪರಿಸ್ಥಿತಿಯನ್ನು ಆರ್‌ಬಿಐ ನೀತಿಗಳ ಮೂಲಕವೇ ನಿಭಾಯಿಸುವುದು ಕಷ್ಟಸಾಧ್ಯ. ಹೀಗಾಗಿ, ಈಗಿನ ಪರಿಸ್ಥಿತಿಯಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ತಡೆಯಲು ಆರ್‌ಬಿಐ ಜೊತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೂ ಕೈಜೋಡಿಸಬೇಕು.

ಈಗಿನ ರೆಪೊ ದರವು ಕೋವಿಡ್ ಪೂರ್ವದ ಮಟ್ಟಕ್ಕಿಂತ ಶೇ 0.25ರಷ್ಟು ಕಡಿಮೆ ಇದೆ. ಅಂದರೆ, ರೆಪೊ ದರವನ್ನು ಇನ್ನೂ ಹೆಚ್ಚಿಸಲು ಅವಕಾಶ ಇದ್ದೇ ಇದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 6.7ರಷ್ಟು ಇರಲಿದೆ ಎಂದು ಆರ್‌ಬಿಐ ಅಂದಾಜಿಸಿದೆ. ಆ ಮೂಲಕ, ಇಡೀ ವರ್ಷದಲ್ಲಿ ಹಣದುಬ್ಬರ ತಾನೇ ನಿಗದಿ ಮಾಡಿರುವ ಲಕ್ಷ್ಮಣ ರೇಖೆಯ ಮಿತಿಯೊಳಕ್ಕೆ ಬರುವುದಿಲ್ಲ ಎಂಬುದನ್ನೂ ಒಪ್ಪಿಕೊಂಡಿದೆ. ಹಣದುಬ್ಬರವು ಆರ್‌ಬಿಐ ಅಂದಾಜಿಗಿಂತ ಇನ್ನಷ್ಟು ಜಾಸ್ತಿ ಆಗುವ ಸಾಧ್ಯತೆಯನ್ನೂ ಅಲ್ಲಗಳೆಯಲಾಗದು. ಸಗಟು ಹಣದುಬ್ಬರ ಪ್ರಮಾಣವು ಎರಡಂಕಿ ಮಟ್ಟದಲ್ಲಿಯೇ ಇದೆ. ಇಂಥದ್ದೊಂದು ಸ್ಥಿತಿಯನ್ನು ಜನ ಅನುಭವಿಸಬೇಕಾಗಿ ಬಂದಿರುವುದು ವಿಷಾದಕರ. ರಾಜ್ಯ ಸರ್ಕಾರಗಳು ಪೆಟ್ರೋಲ್, ಡೀಸೆಲ್ ಮೇಲಿನ ಮೌಲ್ಯವರ್ಧಿತ ತೆರಿಗೆಯನ್ನು ಕಡಿಮೆ ಮಾಡಬಹುದು ಎಂಬ ಸಲಹೆಯನ್ನು ದಾಸ್ ನೀಡಿದ್ದಾರೆ. ಹೀಗೆ ಮಾಡುವ ಮೂಲಕ ಹಣದುಬ್ಬರ ತಗ್ಗಿಸಲು ರಾಜ್ಯ ಸರ್ಕಾರಗಳು ನೆರವು ನೀಡಬಹುದು. ಜಾಗತಿಕ ಮಟ್ಟದಲ್ಲಿ ತೀವ್ರ ಹಣದುಬ್ಬರ ಹಾಗೂ ನಿಶ್ಚಲ ಬೆಳವಣಿಗೆಯ ಸ್ಥಿತಿ ಎದುರಾಗುವ ಭೀತಿ ಇದೆ. ಇಂತಹ ಸಂದರ್ಭದಲ್ಲಿ ಅರ್ಥ ವ್ಯವಸ್ಥೆಯಲ್ಲಿ ಚೇತರಿಕೆ ತುಂಬಲು ಸರ್ಕಾರಗಳಿಂದ ಹೆಚ್ಚಿನ ಕ್ರಮಗಳ ಅಗತ್ಯವಿದೆ.

ಶಕ್ತಿಶಾಲಿ ಔದ್ಯೋಗಿಕ ಸಂಸ್ಥೆಗಳು– ಎರ್ಲಡ್ಡುಗಳ ನಡುವಿನ ಸೆಣಸಾಟ ನಿರ್ಣಾಯಕ ಹಂತದಲ್ಲಿದೆ

ಅಭಿವೃದ್ಧಿಯ ಬಲೆಯಲ್ಲಿ ಅಳಿವಿನಂಚಿನ ಜೀವಿ



ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

ಅದಾನಿ ಗ್ರೀನ್, ಟಾಟಾ ಪವರ್, ರಿನ್ಯೂ ಪವರ್, ಹೀರೊ ಫ್ಯೂಚರ್ ಎನರ್ಜೀಸ್, ನ್ಯಾಷನಲ್ ಸೋಲಾರ್ ಎನರ್ಜಿ ಫೆಡರೇಷನ್ ಆಫ್ ಇಂಡಿಯಾ, ಸೋಲಾರ್ ಪವರ್ ಡೆವಲಪರ್ಸ್ ಅಸೋಸಿಯೇಷನ್, ಪವನ ವಿದ್ಯುತ್ ಉತ್ಪಾದಕರ ರಾಷ್ಟ್ರೀಯ ಸಂಘಟನೆ ಮುಂತಾದ ಪ್ರತಿಷ್ಠಿತ, ಶಕ್ತಿಶಾಲಿ ಔದ್ಯೋಗಿಕ ಸಂಸ್ಥೆಗಳೆಲ್ಲ ಒಂದು ಕಡೆ. ಮೂರು ಅಡಿ ಎತ್ತರದ, 15ರಿಂದ 18 ಕಿಲೊಗ್ರಾಂ ತೂಕದ, ಅಳಿವಿನಂಚಿನಲ್ಲಿರುವ ಸುಮಾರು 100 ಎರ್ಲಡ್ಡು ಹಕ್ಕಿಗಳು (ಗ್ರೇಟ್ ಇಂಡಿಯನ್ ಬಸ್ಟರ್ಡ್) ಇನ್ನೊಂದು ಕಡೆ. ಈ ಎರಡರ ನಡುವಿನ ಸೆಣಸಾಟ ಈಗ ನಿರ್ಣಾಯಕ ಹಂತ ತಲುಪಿದೆ.


ಗುಜರಾತ್ ರಾಜ್ಯದಲ್ಲಿ ವಿದ್ಯುತ್ ಉತ್ಪಾದನಾ ಸ್ಥಾವರಗಳ ಒಟ್ಟು ಸ್ಥಾಪಿತ ಸಾಮರ್ಥ್ಯ 44.12 ಗಿಗಾವಾಟ್. ಇದರಲ್ಲಿ ನವೀಕರಿಸಬಹುದಾದ ಮೂಲಗಳಿಂದ 17.1 ಗಿಗಾವಾಟ್ ಬರುತ್ತದೆ. 2030ರ ವೇಳೆಗೆ ಇದು 17.1ರಿಂದ 60 ಗಿಗಾವಾಟ್‌ಗೆ ಏರುವ ನಿರೀಕ್ಷೆಯಿದೆ. ಈ ಹೆಚ್ಚಳದ ಬಹುಭಾಗ ಬರುವುದು ಗುಜರಾತ್‌ನ ಕಚ್ ಪ್ರದೇಶದಲ್ಲಿ ತಲೆಯೆತ್ತಲಿರುವ ಸ್ಥಾವರಗಳಿಂದ. 72,000 ಹೆಕ್ಟೇರ್ ವಿಸ್ತೀರ್ಣದ ಪ್ರದೇಶದಲ್ಲಿ ಬರಲಿರುವ, ಪ್ರಪಂಚದ ಅತಿದೊಡ್ಡ ನವೀಕರಿಸಬಹುದಾದ ಶಕ್ತಿ ಉದ್ಯಾನಕ್ಕೂ ಕಚ್ ನೆಲೆಯಾಗಲಿದೆ. ರಾಜಸ್ಥಾನದ ಜೈಸಲ್ಮೇರ್ ಮತ್ತು ಬಾರ್ಮೇರ್ ಜಿಲ್ಲೆಗಳಲ್ಲೂ ಈ ಯೋಜನೆಗಳ ಕೆಲಸ ಭರದಿಂದ ಸಾಗಿದೆ. ಉತ್ಪಾದನೆಯಾಗುವ ವಿದ್ಯುತ್ತನ್ನು ಸಾಗಿಸಲು ಬೃಹದಾಕಾರದ ಪೈಲಾನ್‌ಗಳು, ಅಧಿಕ ವೋಲ್ಟೇಜ್ ವಿದ್ಯುತ್ ಪ್ರಸರಣ ತಂತಿಗಳು, ಎತ್ತರದ ಗಾಳಿಯಂತ್ರದ ಸ್ತಂಭಗಳಿಗೆ ಅಳವಡಿಸಿರುವ ಉದ್ದನೆಯ ಅಲಗುಗಳು ಮುಂತಾದವುಗಳನ್ನು ವ್ಯಾಪಕವಾಗಿ ಸ್ಥಾಪಿಸಲಾಗುತ್ತಿದೆ. ಈ ನಡುವೆ ವಿದ್ಯುತ್ ತಂತಿಗಳು, ಪೈಲಾನುಗಳು ಮತ್ತು ಗಾಳಿಯಂತ್ರಗಳಿಗೆ ಡಿಕ್ಕಿ ಹೊಡೆದು ಸಾಯುವ ಹಕ್ಕಿಗಳ ಸಂಖ್ಯೆಯೂ ಹೆಚ್ಚುತ್ತಿದೆ. ಗುಜರಾತ್‌ನ ಕಚ್ ಜಿಲ್ಲೆಯ ಅಬ್ಡಾಸಾ ಪ್ರದೇಶದಲ್ಲಿ ಪ್ರತಿವರ್ಷ ಸುಮಾರು 30,000 ಹಕ್ಕಿಗಳು ಈ ಕಾರಣದಿಂದ ಸಾಯುತ್ತಿವೆ ಎಂದು ವನ್ಯಜೀವಿ ಸಂರಕ್ಷಣಾ ಕ್ಷೇತ್ರದ ಸ್ವಯಂಸೇವಾ ಸಂಸ್ಥೆ 'ಕಾರ್ಬೆಟ್ ಪ್ರತಿಷ್ಠಾನ' ವರದಿ ಮಾಡಿದೆ.

ಡೆಹ್ರಾಡೂನ್‌ನ ವೈಲ್ಡ್‌ಲೈಫ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಅಧ್ಯಯನದಂತೆ, ರಾಜಸ್ಥಾನದ ಥಾರ್, ಜೈಸಲ್ಮೇರ್ ಮತ್ತು ಬಾರ್ಮೇರ್ ಪ್ರದೇಶಗಳಲ್ಲಿ ವಾರ್ಷಿಕ ಒಂದು ಲಕ್ಷ ಹಕ್ಕಿಗಳು ಸಾಯುತ್ತಿವೆ. ಇವುಗಳಲ್ಲಿ ಅಳಿವಿನಂಚಿನಲ್ಲಿರುವ ಎರ್ಲಡ್ಡುಗಳೂ ಸೇರಿರುವುದು ತೀವ್ರ ಕಳವಳಕ್ಕೆ ಕಾರಣವಾಗಿದೆ. 2018ರಲ್ಲಿ ಈ ಹಕ್ಕಿಗಳ ಆವಾಸದಲ್ಲಿ ನಡೆದ ಗಣತಿಯಂತೆ, ಜೈಸಲ್ಮೇರ್ ಜಿಲ್ಲೆಯಲ್ಲಿ 122, ಗುಜರಾತ್, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ತಲಾ 10 ಹಕ್ಕಿಗಳಿರಬಹುದೆಂಬ ಅಂದಾಜಿತ್ತು. ಈಗ ಈ ಹಕ್ಕಿಗಳ ಸಂಖ್ಯೆ 100ಕ್ಕಿಂತ ಹೆಚ್ಚಿರಲಾರದು ಎಂಬುದು ವಿಜ್ಞಾನಿಗಳ ಊಹೆ.

ಎರ್ಲಡ್ಡು ಹಕ್ಕಿಗಳು ಸಂಪೂರ್ಣವಾಗಿ ಅಳಿದೇ ಹೋಗುವ ಸಾಧ್ಯತೆ ಕಂಡುಬಂದಿದ್ದರಿಂದ ಸ್ಥಳೀಯ ಬೈಷ್ಣೋಯಿ ಸಮುದಾಯ, ಗುಜರಾತ್ ಮತ್ತು ರಾಜಸ್ಥಾನದ ವನ್ಯಜೀವಿ ಸಂಘಟನೆಗಳು, ನಿವೃತ್ತ ಐಎಎಸ್ ಅಧಿಕಾರಿ ಮತ್ತು ವನ್ಯಜೀವಿ ಸಂರಕ್ಷಣಾಸಕ್ತ ರಂಜಿತ್ ಸಿಂಗ್ ಜ್ಹಾಲಾ ಅವರ ನೇತೃತ್ವದಲ್ಲಿ 2019ರಲ್ಲಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದವು. ವಿವರವಾದ ವಿಚಾರಣೆ ನಡೆಸಿದ ಕೋರ್ಟ್, 2021ರ ಏಪ್ರಿಲ್‌ನಲ್ಲಿ ಎರ್ಲಡ್ಡುಗಳ ಸಂರಕ್ಷಣೆಗೆ ಸ್ಪಷ್ಟ ನಿರ್ದೇಶನ ನೀಡಿತು.

ಸುಪ್ರೀಂ ಕೋರ್ಟ್‌ನ ಆಜ್ಞೆಯಂತೆ 'ಎರ್ಲಡ್ಡುಗಳ ಆವಾಸದಲ್ಲಿ ತಾಂತ್ರಿಕವಾಗಿ ಸಾಧ್ಯವಾಗುವ ಎಲ್ಲ ಜಾಗಗಳಲ್ಲಿ ಹೈ ಟೆನ್ಷನ್ ವಿದ್ಯುತ್ ಕೇಬಲ್‌ಗಳನ್ನು ನೆಲದಡಿಯಲ್ಲಿ ಹಾಕಬೇಕು. ಇದು ಯಾವುದೇ ತಾಂತ್ರಿಕ ಕಾರಣಗಳಿಂದ ಅಸಾಧ್ಯವೆನಿಸಿದರೆ ಅಂಥ ಕಾರಣಗಳನ್ನು ನಮೂದಿಸಿ, ವಿವರವಾದ ದಾಖಲೆಗಳೊಡನೆ, ಸುಪ್ರೀಂ ಕೋರ್ಟ್ ನೇಮಿಸುವ ವಿಶೇಷ ಪರಿಣತರ ಸಮಿತಿಗೆ ಅರ್ಜಿ ಸಲ್ಲಿಸಬೇಕು. ಸಮಿತಿ ಈ ಅರ್ಜಿಗಳನ್ನು ಪರಿಶೀಲಿಸುತ್ತಿರುವ ಸಮಯದಲ್ಲಿ ಎರ್ಲಡ್ಡುಗಳಿಗೆ ಯಾವುದೇ ತೊಂದರೆ ಆಗಕೂಡದು. ಹೀಗಾಗಿ ಎಲ್ಲ ವಿದ್ಯುತ್ ಉತ್ಪಾದನಾ ಕಂಪನಿಗಳೂ ಈ ಹಕ್ಕಿಗಳ ಆವಾಸದಲ್ಲಿ ಹಾದುಹೋಗುವ ಹೈ ಟೆನ್ಷನ್ ತಂತಿಗಳಲ್ಲಿ, ನಿರ್ದಿಷ್ಟ ಅಂತರಗಳಲ್ಲಿ, ಹಕ್ಕಿಗಳನ್ನು ಮುಂಚಿತವಾಗಿಯೇ ಎಚ್ಚರಿಸಿ ಹಾರಾಟದ ಮಾರ್ಗ ಬದಲಿಸುವಂತೆ ಮಾಡುವ 'ಬರ್ಡ್ ಡೈವರ್ಟರ್ಸ್'ಗಳನ್ನು ಕಡ್ಡಾಯವಾಗಿ ಅಳವಡಿಸಬೇಕು. ನೆಲದಡಿ ಕೇಬಲ್‌ಗಳನ್ನು ಅಳವಡಿಸುವ ಹೆಚ್ಚಿನ ವೆಚ್ಚವನ್ನು ಸರ್ಕಾರದ ಅನುಮತಿ ಪಡೆದು ಬಳಕೆದಾರರಿಗೆ ವರ್ಗಾಯಿಸಬಹುದು. ಎರ್ಲಡ್ಡುಗಳು ಮೊಟ್ಟೆಯಿಡುವ ಪ್ರದೇಶದ ಸುತ್ತ ಈ ಕೂಡಲೇ ಬೇಲಿ ಹಾಕಬೇಕು. ಅಗತ್ಯ ಸಂದರ್ಭಗಳಲ್ಲಿ ಮೊಟ್ಟೆಗಳನ್ನು ಸಂತಾನೋತ್ಪಾದನಾ ಕೇಂದ್ರಕ್ಕೆ ಎಚ್ಚರಿಕೆಯಿಂದ ರವಾನಿಸಬಹುದು. ಈ ಎಲ್ಲ ಕೆಲಸಗಳೂ 2022ರ ಏಪ್ರಿಲ್ ಒಳಗೆ ಮುಗಿದಿರಬೇಕು'. ಮೂವರು ಪರಿಣತ ಸದಸ್ಯರನ್ನು ಒಳಗೊಂಡ ಸಮಿತಿಯನ್ನೂ ಕೋರ್ಟ್ ರಚಿಸಿತು.

ಕೋರ್ಟ್ ನಿರ್ದೇಶನದಂತೆ 'ಗುಜರಾತ್ ಎನರ್ಜಿ ಟ್ರಾನ್ಸ್‌ಮಿಷನ್ ಕಾರ್ಪೊರೇಷನ್' ಎರ್ಲಡ್ಡುಗಳನ್ನು ಸಂರಕ್ಷಿಸಲು ಅದರ ಆವಾಸದಲ್ಲಿರುವ ಕುನತಿಯಾ ಹಳ್ಳಿಯ ಬಳಿ 10 ಕಿ.ಮೀ. ಉದ್ದಕ್ಕೆ 66 ಕಿಲೊವೋಲ್ಟ್ ಕೇಬಲ್‌ಗಳನ್ನು ನೆಲದಡಿ ಹಾಕುವ ಕೆಲಸ ಪ್ರಾರಂಭಿಸಿದೆ.



ಈಗಾಗಲೇ ಹಾಕಿರುವ ವಿದ್ಯುತ್ ಪ್ರಸರಣ ತಂತಿಗಳಿಗೆ, ₹ 29.25 ಕೋಟಿ ವೆಚ್ಚದಲ್ಲಿ 18,000 ಬರ್ಡ್ ಡೈವರ್ಟರ್ಸ್‌ಗಳನ್ನು ಅಳವಡಿಸುವ ಕೆಲಸವನ್ನು ಪ್ರಾರಂಭಿಸಿದೆ. ಬೆಳಿಗ್ಗೆ ಸೂರ್ಯನ ಬೆಳಕನ್ನು ಪ್ರತಿಫಲಿಸುವ ಈ ಉಪಕರಣ ರಾತ್ರಿಯಲ್ಲಿ ಮಿಂಚು ಹುಳದಂತೆ ಬೆಳಕು ಬೀರಿ, ಪಕ್ಷಿಗಳನ್ನು ಸುಮಾರು 50 ಮೀಟರ್ ದೂರದಿಂದಲೇ ಎಚ್ಚರಿಸಿ, ಅವು ಹಾರಾಟದ ದಾರಿ ಬದಲಿಸುವಂತೆ ಮಾಡುತ್ತದೆ.

ಸೌರ ಮತ್ತು ವಾಯು ವಿದ್ಯುತ್ ಉತ್ಪಾದನೆಯ ಖಾಸಗಿ ಸಂಸ್ಥೆಗಳಿಗೆ ಕೋರ್ಟ್ ನಿರ್ದೇಶನ ನುಂಗಲಾರದ ತುತ್ತಾಗಿದೆ. 2030ರ ವೇಳೆಗೆ, ನವೀಕರಿಸಬಹುದಾದ ಮೂಲಗಳಿಂದ 450 ಗಿಗಾವಾಟ್‌ಗಳಷ್ಟು ವಿದ್ಯುತ್ತನ್ನು ಉತ್ಪಾದಿಸುವ ಸರ್ಕಾರದ ಯೋಜನೆಗೆ ತೀವ್ರ ಹಿನ್ನಡೆ ಉಂಟಾಗಲಿದೆ ಎನ್ನುವುದು ಉದ್ಯಮಿಗಳ ಅಭಿಪ್ರಾಯ. ನೆಲದಡಿ ಕೇಬಲ್‌ಗಳನ್ನು ಅಳವಡಿಸಲು ಪ್ರತೀ ಕಿ.ಮೀ.ಗೆ ₹ 12 ಕೋಟಿ ಬೇಕಿದ್ದು, ಯೋಜನೆಯ ವೆಚ್ಚ ಅತಿ ದುಬಾರಿಯಾಗಲಿದೆ ಎಂಬುದು ಅವರ ಅಳಲು.

ನ್ಯಾಯಾಲಯದ ತೀರ್ಪು ರಾಜಸ್ಥಾನದ 78,580 ಚದರ ಕಿ.ಮೀ. ಮತ್ತು ಗುಜರಾತ್‌ನ 2,108 ಚದರ ಕಿ.ಮೀ. ಪ್ರದೇಶದಲ್ಲಿ ನೆಲದಡಿಯಲ್ಲಿ ಹೈ ಟೆನ್ಷನ್ ವಿದ್ಯುತ್ ಕೇಬಲ್‌ಗಳನ್ನು ಹಾಕುವಂತೆ ಸೂಚಿಸಿದೆ. ಆದರೆ ಎರ್ಲಡ್ಡುಗಳು ಕಂಡುಬರುವುದು ಈ ವ್ಯಾಪ್ತಿಯ ಶೇ 1 ಭಾಗದಲ್ಲಿ ಮಾತ್ರ. ಹೀಗಾಗಿ ಈ ಭಾಗಕ್ಕೆ ಮಾತ್ರ ನ್ಯಾಯಾಲಯದ ನಿರ್ದೇಶನ ಅನ್ವಯವಾಗಬೇಕೆಂಬುದು ಉತ್ಪಾದಕರ ಕೋರಿಕೆ. ಈ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ತನ್ನ ತೀರ್ಪನ್ನು ಮರುಪರಿಶೀಲಿಸಬೇಕೆಂಬ ಅರ್ಜಿಯನ್ನು ಕೇಂದ್ರ ಸರ್ಕಾರ 2021ರ ಡಿಸೆಂಬರ್‌ನಲ್ಲಿ ಸಲ್ಲಿಸಿದೆ. ಈ ಅರ್ಜಿಯನ್ನು ಪರಿಶೀಲಿಸುವ ಮುನ್ನ ಇದುವರೆವಿಗೂ ತನ್ನ ನಿರ್ದೇಶನಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಆಗಿರುವ ಕೆಲಸಗಳ ಬಗ್ಗೆ ಜುಲೈ 20ರ ಒಳಗಾಗಿ ವರದಿ ನೀಡುವಂತೆ ಗುಜರಾತ್, ರಾಜಸ್ಥಾನ ಸರ್ಕಾರಗಳಿಗೆ ನ್ಯಾಯಾಲಯ ಸೂಚನೆ ನೀಡಿದೆ.

ಈ ಮಧ್ಯೆ, ನಿರ್ದೇಶನಗಳನ್ನು ಉಲ್ಲಂಘಿಸಿ ಹೊಸದಾಗಿ ತಂತಿಗಳನ್ನು ಎಳೆದಿರುವ, ಡೆಗ್ರೈ ಹುಲ್ಲುಗಾವಲು ಬಳಿ ಹೊಸದಾಗಿ ಸೋಲಾರ್ ಪಾರ್ಕ್ ಅಸ್ತಿತ್ವಕ್ಕೆ ಬಂದಿರುವುದರ ಬಗ್ಗೆ ಸುಪ್ರೀಂ ಕೋರ್ಟ್‌ಗೆ ವನ್ಯಜೀವಿ ಸಂಘಟನೆಗಳು ಅರ್ಜಿ ಸಲ್ಲಿಸಿವೆ. ನೆಲದಡಿಯಲ್ಲಿ ಹೈ ಟೆನ್ಷನ್ ಕೇಬಲ್‌ಗಳನ್ನು ಹಾಕುವುದು ಆರ್ಥಿಕವಾಗಿ, ತಾಂತ್ರಿಕವಾಗಿ ಸಾಧ್ಯವೆಂಬುದನ್ನು ಗುಜರಾತ್ ಎನರ್ಜಿ ಟ್ರಾನ್ಸ್‌ಮಿಷನ್ ಕಾರ್ಪೊರೇಷನ್ ಮಾಡಿ ತೋರಿಸಿದೆ. ಅದು ಖಾಸಗಿ ಉತ್ಪಾದಕರಿಗೆ ಮಾದರಿಯಾಗಿ, ಎರ್ಲಡ್ಡುಗಳು ಉಳಿಯಬೇಕೆಂಬುದು ವನ್ಯಜೀವಿ ಸಂಘಟನೆಗಳ ಕೋರಿಕೆ.

ಹಾಗೆ ನೋಡಿದರೆ ಇದು ಎರ್ಲಡ್ಡುಗಳ ಪ್ರಶ್ನೆ ಮಾತ್ರವಲ್ಲ. ಅಬ್ಡಾಸಾ ಪ್ರದೇಶದಲ್ಲಿಯೇ ಅಪಾಯದ ಅಂಚಿನಲ್ಲಿರುವ 25 ಪಕ್ಷಿ ಪ್ರಭೇದಗಳಿವೆ. ರಾಣ್ ಆಫ್ ಕಚ್‌ನ ಖಾದಿರ್ ದ್ವೀಪವು ಫ್ಲೆಮಿಂಗೊಗಳಿಗೆ ಹೆಸರುವಾಸಿಯಾದ ತಾಣ. ಇವುಗಳನ್ನು ರಕ್ಷಿಸುವ ಅಂತರರಾಷ್ಟ್ರೀಯ ಒಡಂಬಡಿಕೆಗೆ ಕೇಂದ್ರ ಸರ್ಕಾರ ಬದ್ಧವಾಗಿದೆ. ಈ ಪರಿಸ್ಥಿತಿಯಲ್ಲಿ ಮುಂದಿನ ತಿಂಗಳ 20ರ ವೇಳೆಗೆ, ಸುಪ್ರೀಂ ಕೋರ್ಟ್ ನೇಮಿಸಿದ್ದ ಪರಿಣತರ ಸಮಿತಿಯ ವರದಿಯೂ ಬರಲಿದೆ. ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಯಾವ ನಿರ್ದೇಶನಗಳನ್ನು ನೀಡಲಿದೆ ಎಂಬುದನ್ನು ಕಾದು ನೋಡಬೇಕಾಗಿದೆ.

ಚುರುಮುರಿ



ಕೊಬ್ಬು ಕರಗಿಸಿದರೆ ಕಾಸು!

• ಸುಮಂಗಲಾ

'ಏ ನೋಡಿಲ್ಲಿ... ಒಂದು ಕೆ.ಜಿ. ತೂಕ ಇಳಿಸಿಕಂಡ್ರೆ 1,000 ಕೋಟಿ ರೂಪಾಯಿ ಕೊಡ್ತೀನಂತ ಗಡ್ಕರಿ ಮಾಮಾ ಹೇಳ್ಯಾನ... ಲಗೂನೆ ಒಂದ್ ಹತ್ ಕೆ.ಜಿ. ತೂಕ ಇಳಿಸು, ಎಷ್ಟ್ ರೊಕ್ಕ ಬರತೈತಿ' ಪೇಪರು ಕೈಯಲ್ಲಿ ಹಿಡಿದ ಬೆಕ್ಕಣ್ಣ ಒಂದೇ ಉಸುರಿಗೆ ವದರಿತು.

ಪೂರ್ಣ ಸುದ್ದಿ ಓದಿದ ನನಗೆ ನಗು ತಡೆಯಲಾಗಲಿಲ್ಲ. 'ಹುಚ್ ಪ್ಯಾಲಿ... ಒಂದ್ ಕೆ.ಜಿ. ತೂಕ ಇಳಿಸಿದರ 1,000 ಕೋಟಿ ರೂಪಾಯಿ ಕೊಡ್ತೀನಂತ ಗಡ್ಕರಿ ಮಾಮಾ ಹೇಳಿದ್ದು ಉಜ್ಜೈನಿ ಸಂಸದ ಫಿರೋಜಿಯಾಗೆ ಕಣಲೇ. ಫಿರೋಜಿಯಾ 125 ಕೆ.ಜಿ. ಇದ್ದರಂತ, ಅದಕ್ಕ ನೀ ಹೆಚ್ಚಿನ ಕೊಬ್ಬು ಕರಗಿಸಿದರ ಕ್ಷೇತ್ರದ ಅಭಿವೃದ್ಧಿಗೆ ರೊಕ್ಕ ಕೊಡ್ತೀನಂತ ಆಸೆ ಹುಟ್ಟಸ್ಯಾರ. ಅದೇನ್ ಮನಿಖರ್ಚಿಗೆ ಕೊಡ್ತಾರಂತ ಮಾಡೀಯೇನ್'.

ವಿವರಣೆ ಕೇಳಿ ತಲೆದೂಗಿದ ಬೆಕ್ಕಣ್ಣ, 'ನೋಡ್... ನಮ್ಮ ಗಡ್ಕರಿ ಮಾಮಾ ಎಷ್ಟ್ ಬೆರಕಿ ಅದಾನ. ಕೊಬ್ಬು ಕರಗಿಸಿದರ ಕ್ಷೇತ್ರಾಭಿವೃದ್ಧಿಗೆ ಕಾಸು... ವ್ಹಾವ್' ಎಂದು ಹೊಗಳಿತು.

'ಅಲ್ಲಿ ಪರ್ಸೆಂಟೇಜ್ ವ್ಯವಹಾರ ಹೆಂಗೈತಿ ಗೊತ್ತಿಲ್ಲ. 1,000 ಕೋಟಿ ರೂಪಾಯಿಗೆ ಮೂವತ್ತು, ನಲ್ವತ್ತು ಪರ್ಸೆಂಟೇಜ್ ಸೇರಿಸಿ ಕೊಡ್ತೀರೇನು ಅಂತ ಗಡ್ಕರಿ ಮಾಮಾಗೆ ಕೇಳು' ನಾನು ಕಿಚಾಯಿಸಿದೆ.

'ನಮ್ಮ ಕರುನಾಡಿನ ಸಂಸದರಿಗೆ ಈ ಥರಾ ಕರಾರು ಇಟ್ಟು ಕ್ಷೇತ್ರದ ಅಭಿವೃದ್ಧಿ ಮಾಡ್ರಿ ಅಂದರ ಹೆಂಗಿರತೈತಿ?' ಬೆಕ್ಕಣ್ಣ ಕನಸು ಕಾಣತೊಡಗಿತು.

'ಕೊಬ್ಬು ಕರಗಿಸ್ರೀ ಅನ್ನೂದರ ಬದಲಿಗೆ 'ನಾಲಿಗೆ ಬಿಗಿಹಿಡಿದರ ಅಭಿವೃದ್ಧಿಗೆ ಕಾಸು' ಅಂತ ಎಲ್ಲಾ ಪಕ್ಷಗಳ ನಾಲಿಗೆವೀರ ಸಂಸದರು, ಶಾಸಕರಿಗೆ ಕರಾರು ಇಡಬೇಕು. ಗಂಡಸರಾದರೆ ನನ್ನ ಎದುರು ಗೆಲ್ಲಲಿ, ನಾವೇನು ಬಳೆ ತೊಟ್ಕಂಡೀವೇನು ಹಿಂತಾ ಆಣಿಮುತ್ತುಗಳು, ದ್ವೇಷಭಾಷಣಗಳಾದರೂ ನಿಲ್ಲಬಹುದು' ಎಂದೆ.

'ಹಂಗೆಲ್ಲ ನಾಲಿಗೆಗೆ ಬೀಗ ಹಾಕೂದು ಇಲ್ಲಿ ನಡಿಯಂಗಿಲ್ಲ. ಕ್ಷೇತ್ರಾಭಿವೃದ್ಧಿ ಕಾಸು ನೀವೇ ಇಟ್ಟುಕೊಳ್ಳಿರಿ, ನಮ್ಮ ನಾಲಿಗೆ ನಮ್ಮ ಸ್ವಾತಂತ್ರ್ಯ ಅನ್ನತಾರಷ್ಟೆ' ಬೆಕ್ಕಣ್ಣ ಕಣಿ ಹೇಳಿ ನಕ್ಕಿತು.

ದಿನದ ಟ್ವೀಟ್

ಬದುಕಿನ ಕುಚೋದ್ಯ


'ನನ್ನ ಪಾಸ್‌ಪೋರ್ಟ್ ಅರ್ಜಿಯಲ್ಲಿ 'ಶಾಶ್ವತ ಗುರುತು' ಎಂದು ಕೇಳಿರುವೆಡೆ ಏನು ಬರೆಯಲಿ' ಎಂದು ನನ್ನ ಪತ್ನಿಯನ್ನು ಕೇಳಿದೆ. 'ಬಲಗೈಯಲ್ಲಿ ಮೊಬೈಲ್' ಎಂದು ಬರೆಯಿರಿ ಎಂದಳು!



ಹರ್ಷ್ ಗೋಯಂಕಾ, ಉದ್ಯಮಿ

ಕಿಡಿನುಡಿ

ಟಿ.ವಿ. ದೃಶ್ಯಾವಳಿಗಳನ್ನು ನೋಡಿ ಗಾಬರಿಯಾಯಿತು ಮತ್ತು ಸಂಭ್ರಮಿಸುತ್ತಿದ್ದ ವರದಿಗಾರರು ಹಾಗೂ ಆ್ಯಂಕರ್‌ಗಳನ್ನು ಕಂಡು ಸಿಟ್ಟು ಬಂತು. ನೋಡುವುದನ್ನು ನಿಲ್ಲಿಸಿದೆ. ಇಂದು ಬುಲ್ಡೋಜರ್‌ಗಳಿಂದ ನೆಲಸಮ ಆಗಿದ್ದು ಈ ನೆಲದ ಕಾನೂನು. #Bulldozers



ಸುಮಂತ್ ರಾಮನ್, ರಾಜಕೀಯ ವಿಶ್ಲೇಷಕ

25 ವರ್ಷಗಳ ಹಿಂದೆ

ಶುಕ್ರವಾರ, 13-6-1997

• **ಕೇಸರಿಗೆ ಭಾರೀ ವಿಜಯ**

ನವದೆಹಲಿ, ಜೂನ್ 12– ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಎರಡು ದಶಕಗಳ ನಂತರ ನಡೆದ ಚುನಾವಣೆಯಲ್ಲಿ ಸೀತಾರಾಂ ಕೇಸರಿ ಅವರು ತಮ್ಮ ಇಬ್ಬರು ಪ್ರತಿಸ್ಪರ್ಧಿಗಳಿಗಿಂತ 5,342 ಅಧಿಕ ಮತಗಳನ್ನು ಗಳಿಸಿ ಇಂದು ಮೊದಲ ಸುತ್ತಿನ ಎಣಿಕೆಯಲ್ಲಿಯೇ ಆಯ್ಕೆಗೊಂಡರು.

ಕಾಂಗ್ರೆಸ್ ಕಾರ್ಯಾಲಯದಲ್ಲಿ ನಡೆದ ಮತಗಳ ಎಣಿಕೆಯ ನಂತರ ರಾತ್ರಿ 8:30ರಲ್ಲಿ ಫಲಿತಾಂಶವನ್ನು ಪಕ್ಷದ ಚುನಾವಣಾ ಅಧಿಕಾರಿ ಆಸ್ಕರ್ ಫರ್ನಾಂಡೀಸ್ ಅವರು ಪ್ರಕಟಿಸಿದರು. ಒಟ್ಟು ಚಲಾಯಿಸಿದ ಮತಗಳು 7,557. ಇದರಲ್ಲಿ ಸೀತಾರಾಂ ಕೇಸರಿ ಅವರು ಗಳಿಸಿದ ಒಟ್ಟು ಮತ 6,225. ಶರದ್ ಪವಾರ್ ಅವರು ಗಳಿಸಿದ ಮತ 882 ಮತ್ತು ರಾಜೇಶ್ ಪೈಲಟ್ ಅವರು ಪಡೆದ ಮತ 354. ತಿರಸ್ಕೃತ ಮತಗಳು 96.

• **ಹವಾಲ: ಕಮಲನಾಥ್ ಆರೋಪಮುಕ್ತ**

ನವದೆಹಲಿ, ಜೂನ್ 12 (ಪಿಟಿಐ)– ಹವಾಲ ಪ್ರಕರಣಕ್ಕೆ ಸಂಬಂಧಿಸಿದಂತೆ ಸರಿಯಾದ ಸಾಕ್ಷಿಯ ಅಭಾವದಿಂದಾಗಿ ದೆಹಲಿ ಕೋರ್ಟ್ ಕೇಂದ್ರದ ನಾಲ್ವರು ಮಾಜಿ ಸಚಿವರುಗಳಾದ ಬೂಟಾ ಸಿಂಗ್, ಕಮಲನಾಥ್, ಬಿ.ಡಿ. ಧಾಣ್ಕೆ, ಚಾಂದ್ ರಾಂ ಹಾಗೂ ಜೈನ್ ಸಹೋದರರನ್ನು ಆರೋಪಮುಕ್ತಗೊಳಿಸಿದೆ.

ರೂ 65 ಕೋಟಿ ಮೊತ್ತದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಅಧ್ಯಕ್ಷ ಎಲ್.ಕೆ.ಅಡ್ವಾಣಿ ಹಾಗೂ ಕೇಂದ್ರದ ಮಾಜಿ ಸಚಿವರಾದ ವಿ.ಸಿ.ಶುಕ್ಲಾ ಅವರನ್ನು ಆರೋಪಗಳಿಂದ ಖುಲಾಸೆ ಮಾಡಿರುವ ದೆಹಲಿ ಹೈಕೋರ್ಟ್‌ನ ಏ. 8ರ ಆದೇಶದ ಹಿನ್ನೆಲೆಯಲ್ಲಿ ಈ ತೀರ್ಪು ನೀಡಲಾಗಿದೆ.

50 ವರ್ಷಗಳ ಹಿಂದೆ

ಮಂಗಳವಾರ, 13-6-1972

• **ಕಲ್ಲೆಸೆತ, ಸಭಾತ್ಯಾಗ, ಕರಪತ್ರ ದಹನದೊಡನೆ ಅಧಿವೇಶನ ಪ್ರಾರಂಭ**

ಮುಂಬೈ, ಜೂನ್ 12– ನಿಲುವಳಿ ಸೂಚನೆಯೊಂದಕ್ಕೆ ಅವಕಾಶವೀಯದ ಸ್ಪೀಕರ್ ತೀರ್ಪಿನ ವಿರುದ್ಧ ಪ್ರತಿಭಟನೆ ಸೂಚಿಸಲು ಇಡೀ ವಿರೋಧಪಕ್ಷದ ಸಭಾತ್ಯಾಗ, ಪ್ರೇಕ್ಷಕರ ಗ್ಯಾಲರಿಯಿಂದ ರಿಪಬ್ಲಿಕನ್ ಪಕ್ಷದ ಯುವಕರಿಬ್ಬರ ಕಲ್ಲೆಸೆತ ಹಾಗೂ ಕರಪತ್ರಗಳ ದಹನದೊಡನೆ ಮಹಾರಾಷ್ಟ್ರ ವಿಧಾನಸಭೆಯ ಸುದೀರ್ಘ ಎರಡು ತಿಂಗಳ ಮಳೆಗಾಲದ ಅಧಿವೇಶನ ಇಂದು ಪ್ರಾರಂಭವಾಯಿತು.

ಹರಿಜನರು ಹಾಗೂ ನವಬೌದ್ಧರನ್ನು ಹೀನಾಯವಾಗಿ ನಡೆಸಿಕೊಂಡವರ ವಿರುದ್ಧ ಕ್ರಮ ಕೈಗೊಳ್ಳದಿರುವುದಕ್ಕಾಗಿ ಸರ್ಕಾರವನ್ನು ಖಂಡಿಸಲು ಹೀಗೆ ಮಾಡಲಾಯಿತು.

ಹರಿಜನರನ್ನು ಸವರ್ಣ ಹಿಂದೂಗಳು ಬಹಿಷ್ಕರಿಸಿದ ಎರಡು ಪ್ರಕರಣಗಳು ಇತ್ತೀಚಿನ ವಾರಗಳಲ್ಲಿ ವರದಿಯಾಗಿದ್ದವು.

• **ಪ್ರೋತ್ಸಾಹ ಇಲ್ಲದ ಸಾಹಿತಿಗಳ ಉತ್ತಮ ಕೃತಿ ಬೆಳಕು ಕಾಣಲು ನೆರವಿನ ಭರವಸೆ**

ಬೆಂಗಳೂರು, ಜೂನ್ 12– ಅನೇಕ ಸಾಹಿತಿಗಳಿಗೆ ಸಾಕಷ್ಟು ಪ್ರೋತ್ಸಾಹ ಇಲ್ಲದೆ ಉತ್ತಮ ಕೃತಿಗಳು ಬೆಳಕಿಗೆ ಬರದೆ ಇರುವ ಪರಿಸ್ಥಿತಿಯನ್ನು ಸರ್ಕಾರ ಗಮನಿಸಿ, ಅಂತಹ ಕೃತಿಗಳು ಹೊರಬರಲು ಸಾಧ್ಯವಾದ ಸಹಾಯ ಮಾಡಲು ಯೋಚಿಸುವುದಾಗಿ ಶಿಕ್ಷಣ ಸಚಿವ ಶ್ರೀ ಎ.ಆರ್. ಬದರಿನಾರಾಯಣ ಅವರು ಇಂದು ಇಲ್ಲಿ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕನ್ನಡ–ಕನ್ನಡ ನಿಘಂಟುವಿನ ದ್ವಿತೀಯ ಸಂಪುಟದ ಎರಡನೇ ಸಂಚಿಕೆ ಬಿಡುಗಡೆ ಮಾಡಿದ ಅವರು, ಭಾಷೆಯ ಬಗ್ಗೆ ಅಭಿಮಾನ ಸಹಜವಾದರೂ ಸಂಪರ್ಕ ಭಾಷೆಯನ್ನು ಕಡೆಗಣಿಸಬಾರದು. ಸಂಸ್ಕೃತ ಭಾಷೆಯನ್ನು ಕಡೆಗಣಿಸುವುದು ಸರಿಯಲ್ಲ ಎಂದರು.

ಸಂಗತ

ಇರಲಿ ವೃತ್ತಿಘನತೆಯ ಪ್ರಜ್ಞೆ

ವೃತ್ತಿಯೊಂದು ನಮ್ಮಿಂದ ಏನನ್ನು ಬಯಸುತ್ತದೆ ಎನ್ನುವುದನ್ನು ಮನಗಂಡು, ಅದಕ್ಕೆ ಅನುಗುಣವಾಗಿ ಮಾನಸಿಕವಾಗಿ ಸಿದ್ಧರಾಗಬೇಕು

• ರಾಜಕುಮಾರ ಕುಲಕರ್ಣಿ

ಕಳೆದ ವರ್ಷದ 'ನೀಟ್'ನಲ್ಲಿ ಅತ್ಯುತ್ತಮ ರ‍್ಯಾಂಕ್‌ನೊಂದಿಗೆ ತೇರ್ಗಡೆಯಾದ ನನ್ನ ಪರಿಚಿತರ ಮಗ ವೈದ್ಯಕೀಯ ಕೋರ್ಸಿಗೆ ಪ್ರವೇಶ ಪಡೆಯಲು ನಿರಾಕರಿಸಿದ ಸಂಗತಿ ನನಗೆ ಅಚ್ಚರಿಯನ್ನುಂಟು ಮಾಡಿತು. ಈ ಕುರಿತು ಪ್ರಶ್ನಿಸಿದಾಗ, 'ವೈದ್ಯಕೀಯ ವೃತ್ತಿ ಸದಾಕಾಲ ಸೇವೆಯನ್ನು ಬಯಸುವಂತಹದ್ದು. ಅಲ್ಲಿ ವೈಯಕ್ತಿಕ ಬದುಕಿಗೆ ಹೆಚ್ಚಿನ ಅವಕಾಶವಿಲ್ಲ. ಹಗಲು ಹೊತ್ತು ಬಿಡಿ, ರಾತ್ರಿ ವೇಳೆಯಲ್ಲೂ ರೋಗಿಗಳ ಚಿಕಿತ್ಸೆಗೆ ಮುಂದಾಗಬೇಕು. ವೈಯಕ್ತಿಕ ಬದುಕಿನ ಆಶೋತ್ತರಗಳನ್ನು ಬದಿಗೊತ್ತಿ ಆ ವೃತ್ತಿಯಲ್ಲಿ ಸಾಧಿಸುವಂತಹದ್ದಾದರೂ ಏನಿದೆ?' ಎಂದು ಹೇಳಿದ. ಅವನ ಪ್ರತಿಕ್ರಿಯೆ ಕೇಳಿ ಒಂದುಕ್ಷಣ ದಂಗಾಗಿ ಹೋದೆ.

ಪ್ರತಿಭಾವಂತನಾದ ಅವನು ವೈದ್ಯಕೀಯ ವೃತ್ತಿಯನ್ನು ಆರಿಸಿಕೊಂಡರೆ ಸಮಾಜಕ್ಕೊಬ್ಬ ಸೇವಾ ಮನೋಭಾವದ ವೈದ್ಯ ದೊರೆಯುವನೆಂದು ಮೊದಲಿನಿಂದ ಭರವಸೆ ಇಟ್ಟುಕೊಂಡಿದ್ದ ನನಗೆ, ಆ ಸಂದರ್ಭ ಅವನ ಪ್ರತಿಕ್ರಿಯೆಯಿಂದ ನಿರಾಸೆಯ ಜೊತೆಗೆ ಅವನಲ್ಲಿನ ವೃತ್ತಿಘನತೆಯ ಅರಿವಿನ ಕೊರತೆಯಿಂದ ಮನಸ್ಸಿಗೆ ನೋವಾಯಿತು.

ಕೆಲವು ವೃತ್ತಿಗಳೇ ಹಾಗೆ, ಸದಾಕಾಲ ಒಂದಿಷ್ಟು ಅಗತ್ಯಗಳನ್ನು ಬಯಸುತ್ತವೆ. ವೈದ್ಯಕೀಯ ವೃತ್ತಿಯನ್ನು ಆರಿಸಿಕೊಳ್ಳುವ ವ್ಯಕ್ತಿ ಹಗಲು ರಾತ್ರಿಯೆಂಬ ಭೇದವಿಲ್ಲದೆ ಸದಾಕಾಲ ರೋಗಿಗಳ ಸೇವೆಗೆ ತೆರೆದುಕೊಳ್ಳುವ ಮುಕ್ತ ಮನಸ್ಸು ಹೊಂದಿರಬೇಕು. ಶಿಕ್ಷಕ ವಿದ್ಯಾರ್ಥಿಗಳಿಗೆ ಮಾದರಿಯಾಗುವ ವ್ಯಕ್ತಿತ್ವವನ್ನು ರೂಪಿಸಿಕೊಂಡಿರಬೇಕು. ಪೊಲೀಸ್ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುವವರು ಕಾನೂನಿನ ಪರಿಪಾಲಕರಾಗಿರಬೇಕು.ಗ್ರಂಥಪಾಲಕಪುಸ್ತಕಗಳಓದಿನಆರಾಧಕನಾಗಿರಬೇಕು.

ವೃತ್ತಿಯೊಂದನ್ನು ಆಯ್ಕೆ ಮಾಡಿಕೊಳ್ಳುವ ಮುನ್ನ ಆ ವೃತ್ತಿ ನಮ್ಮಿಂದ ಏನನ್ನು ಬಯಸುತ್ತದೆ ಎನ್ನುವುದನ್ನು ಮನಗಾಣಬೇಕು. ಅದಕ್ಕೆ ಅನುಗುಣವಾಗಿ ಮಾನಸಿಕವಾಗಿ ಸಿದ್ಧರಾಗಬೇಕು. ಇಲ್ಲಿ ತ್ಯಾಗ ಮಾಡುತ್ತಿದ್ದೇನೆ ಅಥವಾ ವೈಯಕ್ತಿಕ ಬದುಕನ್ನು ಕಳೆದುಕೊಳ್ಳುತ್ತಿದ್ದೇನೆ ಎನ್ನುವುದಕ್ಕಿಂತ ವೃತ್ತಿಘನತೆಯನ್ನು ಎತ್ತಿ ಹಿಡಿಯುವುದು ಆದ್ಯತೆಯಾಗಬೇಕು. ಸಂಬಳ ಮತ್ತು ಸವಲತ್ತುಗಳು ಬೇಕು ಎನ್ನುವುದಾದರೆ ಅದರೊಂದಿಗೆ ವೃತ್ತಿಯು ಬೇಡುವ ಕೆಲವು ಅವಶ್ಯಕತೆಗಳನ್ನು ಮೈಗೂಡಿಸಿಕೊಳ್ಳುವುದೂ ಅತ್ಯಗತ್ಯ.

'ವಿದ್ಯಾರ್ಥಿಗಳಿಗೆ ಪರೋಕ್ಷವಾಗಿಯಾದರೂ ತಿಳಿದು ಅವರ ಚಾರಿತ್ರ್ಯಕ್ಕೆ ಕೆಟ್ಟ ಮಾದರಿಯಾಗುವ ಯಾವ ಕೆಲಸವನ್ನೂ ಖಾಸಗಿಯಲ್ಲಿ ಕೂಡ ಮಾಡುವುದು ಅಧ್ಯಾಪಕನಿಗೆ ಸಲ್ಲುವುದಿಲ್ಲ. ಅಂಥವನು ಆ ವೃತ್ತಿಯನ್ನು ಬಿಟ್ಟುಬಿಡಬೇಕು ಎಂದು ನಾನು ದೃಢವಾಗಿ ನಂಬಿದವನು. ಉಪಾಧ್ಯಾಯನ ಘನತೆ ಇರುವುದು ಅವನ ಸಂಬಳದಿಂದಲ್ಲ- ವಿದ್ವತ್ತು, ಚಾರಿತ್ರ್ಯದಿಂದ ಕೂಡಿದ ವ್ಯಕ್ತಿತ್ವ ಮತ್ತು ಬೋಧನಾಶಕ್ತಿಗಳಿಂದ' ಎಂದಿದ್ದಾರೆ ಎಸ್.ಎಲ್.ಭೈರಪ್ಪ ತಮ್ಮ ಆತ್ಮಕತೆ 'ಭಿತ್ತಿ'ಯಲ್ಲಿ.

ತಮ್ಮ ವ್ಯಕ್ತಿತ್ವದ ಹಿರಿಮೆಯಿಂದ ತಮ್ಮ ವೃತ್ತಿಗೊಂದು ಘನತೆ ತಂದುಕೊಟ್ಟವರ ಅನೇಕ ಉದಾಹರಣೆಗಳಿವೆ. ಬಿ.ಸಿ.ರಾಯ್ ಅವರು ಸೇವಾ ಮನೋಭಾವದಿಂದ ವೈದ್ಯಕೀಯ ಲೋಕದಲ್ಲಿ ಚಿರಸ್ಮರಣೀಯರಾಗಿ ಉಳಿದಿರುವರು. ಜುಲೈ 1ರಂದು ಅವರ ಜನ್ಮದಿನವನ್ನು ವೈದ್ಯರ ದಿನವೆಂದು ಆಚರಿಸಲಾಗುತ್ತದೆ. ಅತ್ಯುತ್ತಮ ಸೇವೆ ಸಲ್ಲಿಸಿದ ವೈದ್ಯರಿಗೆ 'ಬಿ.ಸಿ.ರಾಯ್' ಪ್ರಶಸ್ತಿಯನ್ನು ಕೊಡುವುದರ ಮೂಲಕ ರಾಯ್ ಅವರ ಹೆಸರನ್ನು ಅಜರಾಮರಗೊಳಿಸಲಾಗಿದೆ. ಎಂಜಿನಿಯರ್ ಹುದ್ದೆಗೆ ಎಂ.ವಿಶ್ವೇಶ್ವರಯ್ಯನವರು ಪ್ರತಿಭೆ ಮತ್ತು ಪ್ರಾಮಾಣಿಕತೆಯಿಂದ ವಿಶಿಷ್ಟ ಘನತೆ ತಂದುಕೊಟ್ಟರು. ವಿಜ್ಞಾನಿ ಎಂದಾಕ್ಷಣ ಥಟ್ಟನೆ ನೆನಪಾಗುವುದು ಅಬ್ದುಲ್ ಕಲಾಂ ಅವರ ಹೆಸರು. ಕುವೆಂಪು ತಮ್ಮ ಮಹಾಕೃತಿ 'ಶ್ರೀ ರಾಮಾಯಣ ದರ್ಶನಂ' ಸಮರ್ಪಿಸಿದ್ದು ತಮ್ಮನ್ನು ತುಂಬ ಪ್ರಭಾವಿಸಿದ ಗುರುಗಳಾದ ವೆಂಕಣ್ಣಯ್ಯನವರಿಗೆ. ರಾಜ್‌ಕುಮಾರ್ ಅವರು ಕಲೆಯ ಘನತೆಗೆ ಕುಂದುಬರದಂತೆ ಬದುಕಿದರು. ರಾಜಕಾರಣಿಯಾಗಿ ರಾಮಮನೋಹರ ಲೋಹಿಯಾ ಇವತ್ತಿಗೂ ಮಾದರಿ ವ್ಯಕ್ತಿ.



ಬದಲಾದ ಕಾಲಘಟ್ಟದಲ್ಲಿ ವೃತ್ತಿಘನತೆ ಹಿನ್ನೆಲೆಗೆ ಸರಿದು ಹಣ ಗಳಿಕೆಯೇ ಮುನ್ನೆಲೆಗೆ ಬಂದಿದೆ. ಅದಕ್ಕೆಂದೇ ಇಲ್ಲಿ ನೀತಿ ಪಾಠ ಬೋಧಿಸುವ ಶಿಕ್ಷಕರೂ ಅಕ್ರಮ ಗಳಿಕೆಗೆ ಮುಂದಾಗುತ್ತಾರೆ. ಕಾನೂನನ್ನು ಎತ್ತಿಹಿಡಿಯಬೇಕಾದ ವೃತ್ತಿಯಲ್ಲಿ ಇರುವವರೇ ಅನ್ಯಾಯ ಎಸಗುತ್ತಾರೆ. ದೇಶದ ನೀತಿ, ನಿಯಮಗಳನ್ನು ರೂಪಿಸುವವರೇ ಅನೀತಿಯ ಮಾರ್ಗ ಹಿಡಿಯುತ್ತಾರೆ. ಕೆಲವೊಮ್ಮೆ ಪಾಲಕರ ಒತ್ತಾಯ ಮತ್ತು ಮಹತ್ವಾಕಾಂಕ್ಷೆಗೆ ಮಣಿದು ಮಕ್ಕಳು ತಮಗೆ ಇಷ್ಟವಿಲ್ಲದ ಕೋರ್ಸ್- ವೃತ್ತಿಗೆ ಸೇರಿಕೊಳ್ಳುವುದುಂಟು. ವೃತ್ತಿಯಲ್ಲಿ ಆಸಕ್ತಿಯೇ ಇಲ್ಲದ ವ್ಯಕ್ತಿಯಿಂದ ವೃತ್ತಿಘನತೆಯನ್ನು ನಿರೀಕ್ಷಿಸುವುದಾದರೂ ಹೇಗೆ? ಆಗ ನಷ್ಟವಾಗುವುದು ಸಮಾಜಕ್ಕೆ ವಿನಾ ವ್ಯಕ್ತಿ ಅಥವಾ ಕುಟುಂಬಕ್ಕಲ್ಲ.

ವೃತ್ತಿಘನತೆಯ ಪ್ರಜ್ಞೆಯನ್ನು ಕಳೆದುಕೊಂಡರೆ, ಸಾಲು ಸಾಲು ಕೊಲೆಗಳನ್ನು ಮಾಡಿಯೂ ಜನಮನ್ನಣೆಗೆ ಪಾತ್ರವಾಗುವ ಸಿನಿಮಾ ಮಾಧ್ಯಮದ ಕಥಾನಾಯಕರ ಪಾತ್ರಗಳೇ ನಮ್ಮ ಯುವಜನಾಂಗಕ್ಕೆ ಮಾದರಿಯೂ ಆದರ್ಶವೂ ಆಗುವ ದುರಂತಕ್ಕೆ ನಾವೇ ಹೊಣೆಯಾಗಬೇಕಾಗುತ್ತದೆ.

ಯಶವಂತ ಚಿತ್ತಾಲರ 'ಪುರುಷೋತ್ತಮ' ಪುಸ್ತಕದಲ್ಲಿ ಹೀಗೊಂದು ಮಾತಿದೆ: 'ನಿರ್ಜೀವ ಕಲ್ಲಿನಂತೆ ತೆಪ್ಪಗೆ ಬಿದ್ದ ಮಾವಿನ ಗೊರಟೆಗೂ ತಿಳಿವಳಿಕೆ ಉಂಟಂತಲ್ಲಪ್ಪಾ, ತನ್ನ ಜನ್ಮದ ಸಾರ್ಥಕ್ಯ ಇರುವುದು ಸೂರ್ಯನತ್ತ ಮುಖ ಮಾಡಿದ ಮರವಾಗುವುದರಲ್ಲೆಂದು'. ಇಂಥದ್ದೊಂದು ಘನತೆಯನ್ನು ಮನುಷ್ಯ ರೂಢಿಸಿಕೊಳ್ಳಬೇಕಿದೆ.

ವಾಚಕರ ವಾಣಿ

ಕೆರೆಗಳೆಂಬ ಅಮೂಲ್ಯ ತಾಣಗಳು

ಬೆಂಗಳೂರಿನ 210 ಕೆರೆಗಳಲ್ಲಿ 19 ಕೆರೆಗಳನ್ನು ನುಂಗಲಾಗಿದೆ, ಒತ್ತುವರಿಯಾಗಿರುವ 21 ಕೆರೆಗಳಲ್ಲಿ ಸರ್ಕಾರಿ ಶಾಲೆ ಮತ್ತು ಇತರ ಕಟ್ಟಡಗಳು ನಿರ್ಮಾಣವಾಗಿವೆ ಎಂಬ ಸುದ್ದಿ (ಪ್ರ.ವಾ., ಜೂನ್ 11) ಆತಂಕಕಾರಿಯಾಗಿದೆ. ಹೈಕೋರ್ಟ್ ಆದೇಶದಂತೆ, ಕೆರೆಯಿಂದ 30 ಮೀಟರ್ ಸುತ್ತ ಯಾವುದೇ ಕಟ್ಟಡ ನಿರ್ಮಾಣ ಮಾಡುವಂತಿಲ್ಲ. ಶಾಸಕಾಂಗ ಹಾಗೂ ಕಾರ್ಯಾಂಗವು ಕೆರೆ ರಕ್ಷಣೆ ಮಾಡಲು ವಿಫಲವಾದಾಗ ನ್ಯಾಯಾಂಗ ಚಾಟಿ ಬೀಸಬೇಕಾಗುತ್ತದೆ.

ಕೆರೆಗಳ ರಕ್ಷಣೆಗೆ ಸಂಬಂಧಿಸಿದಂತೆ ನ್ಯಾಯಾಲಯ ನೀಡಿರುವ ಆದೇಶಗಳನ್ನು ಉಲ್ಲಂಘಿಸುವ ಅಧಿಕಾರಿಗಳನ್ನು ಜೈಲಿಗೆ ಕಳುಹಿಸಬೇಕು. ಆಗಮಾತ್ರ ಕೆರೆ ರಕ್ಷಣೆ ಸಾಧ್ಯ. ವಾಸ್ತವದಲ್ಲಿ ಕೆರೆಗಳು 'ಚಿನ್ನದ ಮೊಟ್ಟೆ ಇಡುವ ಕೋಳಿಗಳು'. ಕೆರೆಗಳಿಂದ ಹೂಳು ತೆಗೆದು ನಗರದಲ್ಲಿ ಬಿದ್ದ ಮಳೆನೀರು ಸಂಗ್ರಹ ಮಾಡಿದರೆ ನಿರಂತರ ಅಂತರ್ಜಲ ಅಭಿವೃದ್ಧಿಯಾಗಿ ನಗರದ ನೀರಿನ ಹಾಹಾಕಾರ ಕಡಿಮೆಯಾಗುತ್ತದೆ, ಪ್ರಾಣಿ ಪಕ್ಷಿಗಳಿಗೆ ಆಸರೆಯಾಗುತ್ತದೆ.

ಡಾ. ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ರಾಜ್ಯಸಭಾ ಚುನಾವಣೆ ತೆರೆದಿಟ್ಟ ಕಟು ವಾಸ್ತವ

ರಾಜ್ಯದಲ್ಲಿನ ರಾಜ್ಯಸಭಾ ಚುನಾವಣೆಯ ಫಲಿತಾಂಶ ನಿರೀಕ್ಷೆಯಂತೆ ಬಂದಿದ್ದು, ಕೆಲವು ಕಟು ವಾಸ್ತವಗಳನ್ನು ತೆರೆದಿಟ್ಟಿದೆ. ರಾಷ್ಟ್ರೀಯ ಪಕ್ಷಗಳಲ್ಲಿ ಶಾಸಕರ ಮೇಲೆ ಹೈಕಮಾಂಡ್ ಹಿಡಿತ ಸ್ವಲ್ಪವೂ ಕಡಿಮೆಯಾಗಿಲ್ಲ, ಕರ್ನಾಟಕದಿಂದ ರಾಜ್ಯಸಭೆಗೆ ಕನ್ನಡೇತರರನ್ನು, ಹೊರರಾಜ್ಯದವರನ್ನು ಆಯ್ಕೆ ಮಾಡುವ ಅಲಿಖಿತ ನಿಯಮಾವಳಿಯನ್ನು ಮುಂದುವರಿಸಿಕೊಂಡು ಹೋಗಲಾಗುತ್ತದೆ, ಬಿಜೆಪಿ ವಿರುದ್ಧ ಒಗ್ಗೂಡುವ ವಿರೋಧ ಪಕ್ಷಗಳ ಪ್ರಯತ್ನ ಕನಸಾಗೇ ಉಳಿಯುತ್ತದೆ ಮತ್ತು ಕಾಂಗ್ರೆಸ್ ಪಕ್ಷದ ಸೆಕ್ಯುಲರ್ ಮಂತ್ರ ಇನ್ನಷ್ಟು ಧ್ವನಿಯನ್ನು ಕಳೆದುಕೊಳ್ಳುತ್ತದೆ ಎನ್ನುವ ಸತ್ಯಗಳು ಮತ್ತೊಮ್ಮೆ ಅನಾವರಣಗೊಂಡಿವೆ. ಹೈಕಮಾಂಡ್ ಭಯದ ಅಡಿಯಲ್ಲಿ ನಡೆದ ಇದನ್ನು ಚುನಾವಣೆ ಎನ್ನಬೇಕೋ ಅಥವಾ ನಾಮನಿರ್ದೇಶನ ಎನ್ನಬೇಕೋ ಎನ್ನುವ ಗೊಂದಲ ಪ್ರಜ್ಞಾವಂತರನ್ನು ಕಾಡುತ್ತಿದೆ.

ರಮಾನಂದ ಶರ್ಮಾ, ಬೆಂಗಳೂರು

ನಿವೃತ್ತಿ ವಯಸ್ಸು: ಆಸೆಯೋ ದುರಾಸೆಯೋ?

ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 65ಕ್ಕೆ ನಿಗದಿಪಡಿಸುವುದರಿಂದ ಬೊಕ್ಕಸಕ್ಕೆ ಹೊರೆಯಾಗುತ್ತದೆ ಮತ್ತು ಉದ್ಯೋಗಾವಕಾಶಗಳ ಮೇಲೆ ನೇರ ಪರಿಣಾಮ ಉಂಟಾಗುತ್ತದೆ ಎಂಬ ಹೈಕೋರ್ಟ್ ಅಭಿಪ್ರಾಯ (ಪ್ರ.ವಾ., ಜೂನ್ 11) ಸಮಾಜದ ಹಿತದೃಷ್ಟಿಯಿಂದ ತುಂಬಾ ಸಂತೋಷದಾಯಕ ಮತ್ತು ಅಭಿನಂದನೀಯ. ಹಿಂದೆ ಸರ್ಕಾರಿ ನೌಕರರ ನಿವೃತ್ತಿ ವಯಸ್ಸು 55ರಿಂದ 58 ನಂತರ 60 ಆಗಿದೆ. ವಿಶ್ವವಿದ್ಯಾಲಯ ಕಾಯ್ದೆಯ ಅನುಸಾರ ನಿವೃತ್ತಿ ವಯಸ್ಸನ್ನು 62ಕ್ಕೆ ನಿಗದಿಪಡಿಸಿರುವುದೇ ಸರಿಯಾದ ನಿಲುವಲ್ಲ. ಅಂತಹುದರಲ್ಲಿ 65 ವರ್ಷಕ್ಕೆ ಏರಿಸುವಂತೆ ಕೋರಿ ವ್ಯಕ್ತಿಯೊಬ್ಬರು ಮೇಲ್ಮನವಿ ಸಲ್ಲಿಸಿರುವುದು ಇನ್ನೂ ವಿಚಿತ್ರ.

ಇಂತಹ ಯಾವುದೇ ನಿರ್ಧಾರ ಕೈಗೊಳ್ಳುವ ಮುನ್ನ ಲಕ್ಷಾಂತರ ಯುವಕ- ಯುವತಿಯರು, ನಿರುದ್ಯೋಗಿಗಳಾಗಿ ಅಲೆಯುತ್ತಿರುವುದನ್ನು ಗಮನಿಸಬೇಕಾಗುತ್ತದೆ. ಯಾವುದೋ ವಿದೇಶಗಳ ಕಥೆ ಹೇಳಿ, ಅಪಾರ ಜನಸಂಖ್ಯೆಯ ನಮ್ಮ ದೇಶದಲ್ಲಿಯೂ ಅದನ್ನು ಅನುಸರಿಸುವುದು ನಮ್ಮ ನಾಡಿಗೆ ಮಾತ್ರವಲ್ಲ ಸಮಾಜಕ್ಕೆ ಮಾಡುವ ಅನ್ಯಾಯ ಸಹ.

ಸುಮಾರು 30 ವರ್ಷಗಳ ಕಾಲ ಸರ್ಕಾರದ ಸಂಬಳ, ಸವಲತ್ತನ್ನು ಅನುಭವಿಸಿದವರೂ ಇಂತಹ ಬೇಡಿಕೆಯ ಪರವಾಗಿ ಇರುವುದನ್ನು ನೋಡಿದರೆ ಇವರಿಗೆ ಇದು ಆಸೆಯೋ, ದುರಾಸೆಯೋ ಎಂಬುದು ತಿಳಿಯುವುದಿಲ್ಲ. ನಿವೃತ್ತರನ್ನು ಸರ್ಕಾರದ ಯಾವುದೇ ಹುದ್ದೆಗೆ ನೇಮಿಸುವುದು ಕೂಡ ಸಮಾಜಕ್ಕೆ ಮಾಡುವ ದ್ರೋಹ. ಸರ್ಕಾರ ಇಂತಹ ತಪ್ಪು ನಿರ್ಧಾರ ಮಾಡಬಾರದು.

ಅತ್ತಿಹಳ್ಳಿ ದೇವರಾಜ, ಹಾಸನ

ಅಶಾಂತಿ ಸೃಷ್ಟಿಯಿಂದ ದುಷ್ಕರ್ಮಿಗಳಿಗೆ ನೆರವು

ಧಾರ್ಮಿಕ ನಿಂದನೆ ಹಾಗೂ ಈ ಸಂಬಂಧದ ಪ್ರತಿಭಟನೆಗಳು ಇತ್ತೀಚೆಗೆ ಹಿಂಸಾರೂಪ ಪಡೆದದ್ದು ಆತಂಕಕಾರಿ ಬೆಳವಣಿಗೆ. ದೇಶದ ಎಲ್ಲ ಧಾರ್ಮಿಕರಿಗೂ ಸಂವಿಧಾನವು ಸಮಾನತೆಯ ಹಕ್ಕು ನೀಡಿದೆ. ಆದರೆ, ಕೆಲ ವಿಕಾರ ಮನಸ್ಸಿನ ವ್ಯಕ್ತಿಗಳ ವಿವಾದಿತ ಹೇಳಿಕೆ ಹಾಗೂ ವಿವಾದಿತ ಕೃತ್ಯಗಳು ದೇಶದ ಶಾಂತಿ, ಸುವ್ಯವಸ್ಥೆ ಹಾಳುಮಾಡುತ್ತಿರುವುದು ಆತಂಕಕಾರಿ ಹಾಗೂ ಮುಂದಿನ ಪೀಳಿಗೆಗೆ ಮಾರಕ.

ಈ ಬಗೆಯ ಬೆಳವಣಿಗೆಗಳನ್ನು ಮತ್ತು ಜನರ ಧಾರ್ಮಿಕ ಭಾವನೆಗಳನ್ನು ನಮ್ಮ ರಾಜಕೀಯ ಪಕ್ಷಗಳು ಹಾಗೂ ನಾಯಕರು ಸಂಪೂರ್ಣವಾಗಿ ಸ್ವಾರ್ಥಕ್ಕೆ ಬಳಸಿಕೊಳ್ಳುವುದು ಎಲ್ಲರಿಗೂ ಗೊತ್ತಿದೆ. ಹೀಗಿದ್ದರೂ ಪ್ರತಿಭಟನೆಯ ನೆಪದಲ್ಲಿ ಗಲಭೆ, ಅಶಾಂತಿ ಸೃಷ್ಟಿಸಿದರೆ ರಾಜಕೀಯ ಮಾಡುವವರ ಕೈಗೆ ಒಂದು ಅಸ್ತ್ರ ಕೊಟ್ಟಂತಾಗುತ್ತದೆ. ಈ ಕುತಂತ್ರದಿಂದ, ಪ್ರತಿಭಟನೆಗಳು ಬೇಡಿಕೆ ಈಡೇರಿಸುವ ಬದಲು, ಗಲಭೆ, ಅಶಾಂತಿಯ ರೂಪ ಪಡೆದು ನಮ್ಮ ಹಾಗೂ ನಮ್ಮ ಅವಲಂಬಿತರ ಅತ್ಯಮೂಲ್ಯ ಜೀವನವನ್ನು ನರಕವಾಗಿಸುವುದಂತೂ ನಿಜ.

ಹುಸೇನಬಾಷಾ, ತಳೇವಾಡ, ಧಾರವಾಡ


ಮತ್ತೆ ಬಾರದಿರಲಿ ಅತಂತ್ರ ಫಲಿತಾಂಶ

ಇದೀಗ ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ಅಕ್ಷರಶಃ ಕಿತ್ತಾಟವಾಗಿ ಬಿಜೆಪಿಗೆ ಲಾಭವಾಗಿದೆ. ಈ ಕಾರಣಕ್ಕಾಗಿಯೇ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳೆರಡೂ 'ಇವರು ಬಿಜೆಪಿಯ ಬಿ ಟೀಮ್' ಎಂದು ಪರಸ್ಪರ ಕಚ್ಚಾಡುವಂತೆಯೂ ಆಗಿದೆ. ಈ ಕಚ್ಚಾಟ ಹಾಸ್ಯಾಸ್ಪದವಾಗಿದೆ. ಹೀಗಾಗಿ, ಯಾರು ಬಿಜೆಪಿಯ ಬಿ ಟೀಮ್ ಎಂಬ ಬಗ್ಗೆ ರಾಜ್ಯದ ಮತದಾರರಲ್ಲಿ ಗೊಂದಲ ಉಂಟಾಗುತ್ತಿದೆ. ಈ ಗೊಂದಲ ಪರಿಹಾರವಾಗಿ ಒಂದು ಸ್ಪಷ್ಟತೆ ಜನರಿಗೆ ಲಭಿಸಬೇಕಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಆಯ್ಕೆಗೆ ಯಾರು ಸೂಕ್ತ ಎಂಬ ಪ್ರಶ್ನೆಗೆ ಮತದಾರರು ಇದೀಗ ಉತ್ತರ ಕಂಡುಕೊಳ್ಳುವ ಯತ್ನದಲ್ಲಿದ್ದಾರೆ. ಈ ಸಂಬಂಧ ಅವರಿಗೆ ಸ್ಪಷ್ಟತೆ ಲಭಿಸಬೇಕಿದೆ. ನಿಲುವು ಮತ್ತು ಬದ್ಧತೆ ವಿಚಾರದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ದ್ವಂದ್ವ ನಿವಾರಿಸಿಕೊಳ್ಳದಿದ್ದರೆ ಮತ್ತೆ ಅತಂತ್ರ ಫಲಿತಾಂಶ ದೊರೆಯುವಂತಾಗುತ್ತದೆ. ಇದಾಗಬಾರದು ಅಲ್ಲವೇ?

ಹುರುಕಡ್ಲಿಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಜನಗಣತಿ ಯಾವಾಗ?



ಪ್ರಜಾವಾಣಿ ವಾರ್ತೆ

ಜನ ಸಾಮಾನ್ಯರಿಗಾಗಿ ರೂಪಿಸಿರುವ ವಿವಿಧ ಕಲ್ಯಾಣ ಯೋಜನೆಗಳ ಗಾತ್ರ, ವ್ಯಾಪ್ತಿಗಳನ್ನು ನಿಗದಿ ಮಾಡಲು ಜನಗಣತಿಯ ವರದಿ ಮತ್ತು ದತ್ತಾಂಶಗಳು ಅತ್ಯಂತ ಮಹತ್ವದ ಆಧಾರಗಳಾಗಿವೆ. ದೇಶದಲ್ಲಿ ಈಗ ಜಾರಿಯಲ್ಲಿರುವ ಬಹುತೇಕ ಕಲ್ಯಾಣ ಕಾರ್ಯಕ್ರಮಗಳ ಗಾತ್ರ ಮತ್ತು ವ್ಯಾಪ್ತಿಯನ್ನು 2011ರ ಜನಗಣತಿ ವರದಿ ಆಧಾರದಲ್ಲಿ ನಿಗದಿ ಮಾಡಲಾಗಿದೆ. ಆದರೆ ಇದು 11 ವರ್ಷಕ್ಕಿಂತಲೂ ಹಳೆಯ ದತ್ತಾಂಶ. ಈ ಮಧ್ಯೆ ದೇಶದ ಜನಸಂಖ್ಯೆಯು ಹಲವು ಕೋಟಿಗಳಷ್ಟು ಏರಿಕೆಯಾಗಿದೆ. 2021ರಲ್ಲಿ ಜನಗಣತಿ ನಡೆದಿಲ್ಲ. ಹೀಗಾಗಿ ದೇಶದ ಕೋಟ್ಯಂತರ ಜನರು ಕಲ್ಯಾಣ ಕಾರ್ಯಕ್ರಮಗಳಿಂದ ವಂಚಿತರಾಗಿದ್ದಾರೆ.

ಮೂಲ ಯೋಜನೆಯ ಪ್ರಕಾರ, 2020 ಏಪ್ರಿಲ್‌ನಿಂದ 2021ರ ಮೊದಲ ಭಾಗದಲ್ಲಿ ಜನಗಣತಿ ಪ್ರಕ್ರಿಯೆ ಪೂರ್ಣಗೊಳ್ಳಬೇಕಿತ್ತು. ಮೊದಲ ಹಂತದಲ್ಲಿ ಕೌಂಟುಬಿಕ ವಿವರಗಳು, ಮೂಲಸೌಕರ್ಯಗಳು ಮತ್ತು ಕುಟುಂಬಗಳು ಹೊಂದಿರುವ ಸ್ವತ್ತುಗಳಿಗೆ ಸಂಬಂಧಿಸಿದ ದತ್ತಾಂಶಗಳನ್ನು ಸಂಗ್ರಹಿಸಬೇಕಿತ್ತು. ಎರಡನೇ ಹಂತದಲ್ಲಿ ಜನಸಂಖ್ಯೆ, ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿಗಳ ಜನಸಂಖ್ಯೆ, ಭಾಷೆ, ಸಾಕ್ಷರತೆ ಮತ್ತು ಆರ್ಥಿಕ ಚಟುವಟಿಕೆಗಳ ಬಗ್ಗೆ ಮಾಹಿತಿ ಕಲೆಹಾಕಬೇಕಿತ್ತು. ಆದರೆ 2020ರಲ್ಲಿ ದೇಶಕ್ಕೆ ಕೋವಿಡ್ ಕಾಲಿಟ್ಟ ಕಾರಣ, ಜನಗಣತಿಯನ್ನು ಮುಂದೂಡಲಾಯಿತು. ಈಗ ಕೋವಿಡ್ ನಿಯಂತ್ರಣಕ್ಕೆ ಬಂದರೂ ಕೇಂದ್ರ ಸರ್ಕಾರವು ಜನಗಣತಿ ನಡೆಸುವ ಬಗ್ಗೆ ಯಾವುದೇ ಸಿದ್ಧತೆ ನಡೆಸಿಲ್ಲ.

ಜನಗಣತಿ ನಡೆಸದೇ ಇರುವುದರ ಬಗ್ಗೆ, ಗೃಹ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿಯು ಗೃಹ ಸಚಿವಾಲಯವನ್ನು 2021ರಲ್ಲೇ ಪ್ರಶ್ನಿಸಿತ್ತು. ಈ ಬಗ್ಗೆ 2021ರ ಮಾರ್ಚ್‌ನಲ್ಲಿ ಗೃಹ ಸಚಿವಾಲಯವು, ಸಮಿತಿಗೆ ಉತ್ತರ ನೀಡಿತ್ತು.

‘ಜನಗಣತಿ ನಡೆಸಲು ಕಾಲಮಿತಿ ಹಾಕಿಕೊಂಡಿದ್ದೇವೆ. ಒಂದನೇ ಹಂತದ ಜನಗಣತಿಯನ್ನು 2022–23ನೇ ಸಾಲಿನಲ್ಲಿ ಮತ್ತು ಎರಡನೇ ಹಂತದ ಜನಗಣತಿಯನ್ನು 2023–24ನೇ ಸಾಲಿನಲ್ಲಿ ನಡೆಸಲಾಗುತ್ತದೆ. ಮೊದಲ ಹಂತದ ಜನಗಣತಿಯ ಜತೆಗೆ ರಾಷ್ಟ್ರೀಯ ಜನಸಂಖ್ಯಾ ನೋಂದಣಿಯನ್ನೂ ಪರಿಷ್ಕರಿಸಲಾಗುವುದು. ಈ ಜನಗಣತಿಗೆ ಸಂಬಂಧಿಸಿದ ಮೊದಲ ಅಂದಾಜು ವರದಿಯನ್ನು 2023–24ರಲ್ಲೇ ನೀಡುವುದಾಗಿ ಮತ್ತು ಪೂರ್ಣ ವರದಿ ಹಾಗೂ ದತ್ತಾಂಶಗಳನ್ನು 2024–25ನೇ ಸಾಲಿನಲ್ಲಿ ನೀಡುವುದಾಗಿ’ ಸಚಿವಾಲಯ ಹೇಳಿತ್ತು. ಜನಗಣತಿ ಕಾರ್ಯಗಳಿಗಾಗಿ ₹8,754.23 ಕೋಟಿ ಮತ್ತು ಎನ್‌ಪಿಆರ್‌ಗಾಗಿ ₹3,941.35 ಕೋಟಿ ವೆಚ್ಚ ಮಾಡಲು ಕೇಂದ್ರ ಸಚಿವ ಸಂಪುಟವು ಅನುಮೋದನೆ ನೀಡಿತ್ತು.

ಸಂಸತ್ತಿನ ಸ್ಥಾಯಿ ಸಮಿತಿಗೆ ಗೃಹ ಸಚಿವಾಲಯವು ಈ ಮಾಹಿತಿ ನೀಡಿ 15 ತಿಂಗಳು ಕಳೆದಿವೆ. ಆದರೆ, ಜನಗಣತಿಗೆ ಸಂಬಂಧಿಸಿದ ಒಂದು ಚಟುವಟಿಕೆಯೂ ಆರಂಭವಾಗಿಲ್ಲ. ಜನಗಣತಿ ಯಾವಾಗ ನಡೆಯುತ್ತದೆ ಎಂಬುದರ ಸುಳಿವೂ ಇಲ್ಲ.

ಕ್ಷೇತ್ರ ಮರುವಿಂಗಡಣೆ

ಜನಗಣತಿಯ ದತ್ತಾಂಶಗಳ ಆಧಾರದ ಮೇಲೆ ದೇಶದ ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆ ಕ್ಷೇತ್ರಗಳನ್ನು ಮರುವಿಂಗಡಣೆ ಮಾಡುವ ಪರಿಪಾಟವಿದೆ. ಆದರೆ, ಇತ್ತೀಚಿನ ಜನಗಣತಿಯ ಮಾಹಿತಿ ಇಲ್ಲದೆಯೇ ಕೇಂದ್ರ ಸರ್ಕಾರವು ಕೆಲವೆಡೆ ಕ್ಷೇತ್ರ ಮರುವಿಂಗಡಣೆಗೆ ಮುಂದಾಗಿದೆ.

ಜಮ್ಮು–ಕಾಶ್ಮೀರದ ರಾಜ್ಯದ ಸ್ಥಾನಮಾನವನ್ನು ರದ್ದುಪಡಿಸಿದ ನಂತರ ಲೆಫ್ಟಿನೆಂಟ್ ಗವರ್ನರ್ ಆಡಳಿತ ಜಾರಿಯಲ್ಲಿದೆ. ಅಲ್ಲಿ ಮತ್ತೆ ಚುನಾಯಿತ ಸರ್ಕಾರವನ್ನು ಸ್ಥಾಪಿಸಬೇಕು ಎಂದು ರಾಜಕೀಯ ಪಕ್ಷಗಳು ಒತ್ತಾಯಿಸುತ್ತಿವೆ. ಕ್ಷೇತ್ರಗಳ ಮರುವಿಂಗಡಣೆ ಮಾಡಿ, ಆನಂತರ ಚುನಾವಣೆ ನಡೆಸಲಾಗುವುದು ಎಂದು ಕೇಂದ್ರ ಸರ್ಕಾರವು ಹೇಳಿತ್ತು. ಆದರೆ, ಕ್ಷೇತ್ರಗಳನ್ನು ಮರುವಿಂಗಡಿಸಲು ಸರ್ಕಾರದ ಬಳಿ ಇತ್ತೀಚಿನ ಜನಗಣತಿಯ ವರದಿಯೇ ಇಲ್ಲ. 11 ವರ್ಷಗಳಷ್ಟು ಹಳೆಯದಾದ ದತ್ತಾಂಶಗಳನ್ನು ಆಧಾರವಾಗಿ ಇಟ್ಟುಕೊಂಡು, ಜಮ್ಮು–ಕಾಶ್ಮೀರದ ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆಗೆ ಕೇಂದ್ರ ಸರ್ಕಾರ ಮುಂದಾಗಿದೆ.

130+ ವರ್ಷಗಳ ಇತಿಹಾಸ

ಭಾರತದ ಜನಗಣತಿಗೆ 130 ವರ್ಷಕ್ಕಿಂತಲೂ ದೀರ್ಘಾವಧಿಯ ಇತಿಹಾಸವಿದೆ. ಬ್ರಿಟಿಷ್ ಆಳ್ವಿಕೆಯಲ್ಲಿ 1872ರಲ್ಲಿ ಮೊದಲ ಬಾರಿಗೆ ಜನಗಣತಿ ನಡೆಸಲಾಗಿತ್ತು. ಮೊದಲ ಜನಗಣತಿಯನ್ನು ಸ್ವಾತಂತ್ರ್ಯ-ಪೂರ್ವ ಭಾರತದ ಎಲ್ಲೆಡೆ ಏಕಕಾಲದಲ್ಲಿ ನಡೆಸಿರಲಿಲ್ಲ. ಆದರೆ, ನಂತರದ ವರ್ಷಗಳಲ್ಲಿ ಜನಗಣತಿಗೆ ಒಂದು ವ್ಯವಸ್ಥಿತ ರೂಪ ನೀಡಲಾಯಿತು.

- ಭಾರತದ ಜನಗಣಿತಯ ವರದಿಗಳು ದೇಶದ ಜನ, ಜನರ ಕೌಟುಂಬಿಕ–ಶೈಕ್ಷಣಿಕ ಮತ್ತು ಆರ್ಥಿಕ ವಿವರಗಳನ್ನು ಹೊಂದಿರುವ ಅತ್ಯಂತ ದೊಡ್ಡ ದಾಖಲಾತಿಯಾಗಿದೆ
- 1881ರಿಂದ 1941ರವರೆಗೆ ಪ್ರತಿ ಹತ್ತು ವರ್ಷಗಳಿಗೆ ಒಮ್ಮೆ ಜನಗಣತಿ ನಡೆಸಲಾಗಿದೆ. ಈ ಅವಧಿಯಲ್ಲಿ ಒಟ್ಟು ಏಳು ಬ್ರಿಟಿಷ್ ಅಧಿಕಾರಿಗಳು ಜನಗಣತಿ ಆಯುಕ್ತರಾಗಿ, ಜನಗಣತಿಯನ್ನು ನಡೆಸಿದ್ದಾರೆ
- ಸ್ವಾತಂತ್ರ್ಯಾನಂತರ ಮೊದಲ ಜನಗಣತಿ ನಡೆಸಿದ್ದು 1951ರಲ್ಲಿ. ಆದರೆ ಅದಕ್ಕಾಗಿ 1947ರಿಂದಲೇ ಸಿದ್ಧತೆ ನಡೆದಿತ್ತು. 1948ರಲ್ಲಿ ಜನಗಣತಿ ಕಾಯ್ದೆಯನ್ನು ಜಾರಿಗೆ ತರಲಾಯಿತು
- 1949ರಲ್ಲಿ ಭಾರತದ ಜನಗಣತಿ ಪ್ರಧಾನ ರಿಜಿಸ್ಟ್ರಾರ್ ಮತ್ತು ಆಯುಕ್ತರು ಎಂಬ ಹುದ್ದೆಯನ್ನು ಸೃಷ್ಟಿಸಲಾಯಿತು. ಜನಗಣತಿ ಕಾರ್ಯಗಳ ಮೇಲ್ವಿಚಾರಣೆ ನಡೆಸಲು ಭಾರತೀಯ ಜನಗಣತಿ ಸಂಘಟನೆಯನ್ನು ರಚಿಸಲಾಯಿತು

ಪಡಿತರ ವ್ಯವಸ್ಥೆಯಿಂದ ಹೊರಗಿರುವ ಅರ್ಹರು

2013ರ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯ ಪ್ರಕಾರ, ನಗರ ಹಾಗೂ ಗ್ರಾಮೀಣ ಪ್ರದೇಶಗಳ ಒಟ್ಟು ಶೇ 67ರಷ್ಟು ಜನರು ಸಬ್ಸಿಡಿ ದರದಲ್ಲಿ ಆಹಾರ ಧಾನ್ಯಗಳನ್ನು ಪಡೆಯಲು ಅರ್ಹತೆ ಹೊಂದಿದ್ದಾರೆ. ಅಂದರೆ, 2011ರ ಜನಗಣತಿ ಪ್ರಕಾರ 121 ಕೋಟಿ ಜನರ ಪೈಕಿ ಸುಮಾರು 80 ಕೋಟಿ ಜನರು ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ. 2011ರ ಜನಗಣತಿಯ ಬಳಿಕ, ಈ 10 ವರ್ಷಗಳಲ್ಲಿ ದೇಶದ ಜನಸಂಖ್ಯೆ ಏರಿಕೆಯಾಗಿದೆ. 2021ರ ಜನಗಣತಿ ನಡೆದಿದ್ದರೆ, ಕೆಲವು ಕೋಟಿ ಜನರು ಈ ಯೋಜನೆ ವ್ಯಾಪ್ತಿಗೆ ಬರುತ್ತಿದ್ದರು. ಜನಗಣತಿ ವಿಳಂಬವಾಗಿರುವುದರಿಂದ, ಹತ್ತಾರು ಕೋಟಿ ಜನರು ಸರ್ಕಾರದ ಯೋಜನೆಯ ಲಾಭದಿಂದ ವಂಚಿತರಾಗುತ್ತಿದ್ದಾರೆ.

ಜನಸಂಖ್ಯೆ ಬೆಳವಣಿಗೆ ದರದ ಆಧಾರದ ಮೇಲೆ ಅಂದಾಜು ಜನಸಂಖ್ಯೆ ಲೆಕ್ಕಹಾಕಿದರೆ, 2020ರಲ್ಲಿ ಸುಮಾರು 137 ಕೋಟಿ ಜನ ಇದ್ದರು ಎನ್ನಬಹುದು. ಇದರ ಆಧಾರದಲ್ಲಿ ಲೆಕ್ಕ ಹಾಕಿದರೆ ಯೋಜನೆ ವ್ಯಾಪ್ತಿಯು 92 ಕೋಟಿ ಜನರಿಗೆ ವಿಸ್ತರಣೆಯಾಗಬೇಕಾಗುತ್ತದೆ ಎಂದು ಅರ್ಥಶಾಸ್ತ್ರಜ್ಞರು ವಿಶ್ಲೇಷಿಸಿದ್ದಾರೆ. ಇದರರ್ಥ, ಜನಗಣತಿ ವಿಳಂಬವಾಗಿರುವುದರಿಂದ ಅಂದಾಜು 10 ಕೋಟಿಗೂ ಹೆಚ್ಚು ಜನರು ಸರ್ಕಾರದ ಸಬ್ಸಿಡಿ ಆಹಾರದಿಂದ ವಂಚಿತರಾಗಿದ್ದಾರೆ. ಸರ್ಕಾರವು ಅಂದಾಜು ಜನಸಂಖ್ಯೆಯನ್ನು ಲೆಕ್ಕಹಾಕಿ ಯೋಜನೆಯನ್ನು ಅರ್ಹರಿಗೆ ತಲುಪಿಸಬೇಕು ಎಂದು ಸಲಹೆ ನೀಡುವ ಆರ್ಥಿಕ ತಜ್ಞರು, ಒಂದೊಮ್ಮೆ ಜನಗಣತಿ ದತ್ತಾಂಶ ಲಭ್ಯವಾದ ಬಳಿಕ, ಅಂದಾಜು ಪರಿಷ್ಕರಿಸಬಹುದು ಎನ್ನುತ್ತಾರೆ. ಕಡೆಪಕ್ಷ, ರಾಜ್ಯಗಳ ಹೆಚ್ಚುವರಿ ಆಹಾರಧಾನ್ಯ ಪೂರೈಕೆ ಬೇಡಿಕೆಯನ್ನಾದರೂ ಸರ್ಕಾರ ಈಡೇರಿಸಬೇಕು ಎಂಬ ಸಲಹೆ ನೀಡಿದ್ದಾರೆ. ಆದರೆ, ಹೊಸ ಜನಗಣತಿ ದತ್ತಾಂಶಗಳು ಲಭ್ಯವಾಗುವವರೆಗೆ ಪರಿಷ್ಕರಣೆಯನ್ನು ಪರಿಗಣಿಸುವುದಿಲ್ಲ ಎಂದು ಆಹಾರ ಕಾರ್ಯದರ್ಶಿ ಇತ್ತೀಚೆಗೆ ಹೇಳಿಕೆ ನೀಡಿದ್ದನ್ನು ಇಲ್ಲಿ ಉಲ್ಲೇಖಿಸಬಹುದು.

ಬಡವರ ಪಿಂಚಣಿಗೂ ಸಮಸ್ಯೆ

ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮಗಳ ಅಡಿಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ವಿಧವೆಯರು, ದುರ್ಬಲರು ಹಾಗೂ ವಯಸ್ಸಾದ ಸುಮಾರು 3.09 ಕೋಟಿ ಜನರಿಗೆ ಪಿಂಚಣಿ ನೀಡಲಾಗುತ್ತಿದೆ. ಇಲ್ಲೂ ಜನಗಣತಿ ದತ್ತಾಂಶಗಳೇ ಆಧಾರ. ಈಗಿನ ಅಂದಾಜಿನ ಪ್ರಕಾರ, ಪಿಂಚಣಿಗೆ ಅರ್ಹತೆ ಇರುವವರ ಸಂಖ್ಯೆ ಸುಮಾರು 6 ಕೋಟಿಗೆ ಏರಿಕೆಯಾಗಿರಬಹುದು. 2011ರ ಬಳಿಕ ಈ ಯೋಜನೆಗಳ ವ್ಯಾಪ್ತಿಗೆ ಬಂದಿರುವ ಹೆಚ್ಚುವರಿ ಫಲಾನುಭವಿಗಳು ಹೊಸ ಜನಗಣತಿವರೆಗೂ ಕಾಯಬೇಕಾದ ಅನಿವಾರ್ಯ ಸೃಷ್ಟಿಯಾಗಿದೆ.

ಕೇಂದ್ರ ಸರ್ಕಾರದ ಬಹುತೇಕ ಯೋಜನೆಗಳು 2011ರ ಸಾಮಾಜಿಕ–ಆರ್ಥಿಕ–ಜಾತಿ ಗಣತಿಯ ಆಧಾರದ ಮೇಲೆ ಫಲಾನುಭವಿಗಳನ್ನು ನಿರ್ಧರಿಸುತ್ತವೆ. ಈ ಗಣತಿ ಸಹ ದಶಕದಷ್ಟು ಹಳೆಯದು. ಉದಾಹರಣೆಗೆ, ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ, ಗರ್ಭಿಣಿಯರು ಸಮೀಪದ ಅಂಗನವಾಡಿಗಳಲ್ಲಿ ತಮ್ಮ ಹೆಸರನ್ನು ನೋಂದಣಿ ಮಾಡಿಕೊಳ್ಳಬಹುದು. ಸಮಸ್ಯೆ ಎಂದರೆ, ಸಂಭಾವ್ಯ ಫಲಾನುಭವಿಗಳ ಸಂಖ್ಯೆ ಎಷ್ಟಿರಬಹುದು ಎಂಬ ಅಂದಾಜು ಸಹ ರಾಜ್ಯಗಳಿಗೆ ಇಲ್ಲವಾಗಿದೆ. ಕೆಲವು ರಾಜ್ಯಗಳು ಈ ಯೋಜನೆಯಡಿ ಹಣಕಾಸು ನೆರವು ನೀಡಲು ಪ್ರತಿ ಅಂಗನವಾಡಿಗಳಿಗೆ ಇಂತಿಷ್ಟು ಸಂಖ್ಯೆಯನ್ನು ಮಿತಿಗೊಳಿಸಿವೆ. ಎಷ್ಟೋ ಗರ್ಭಿಣಿಯರು ಹಾಗೂ ಮಕ್ಕಳು ಅರ್ಹತೆಯ ವ್ಯಾಪ್ತಿಯಲ್ಲಿದ್ದರೂ, ಹಣಕಾಸು ನೆರವಿನಿಂದ ವಂಚಿತರಾಗುತ್ತಿದ್ದಾರೆ.

ವಲಸೆಯ ಲೆಕ್ಕ ಎಲ್ಲಿ?

ಕೋವಿಡ್ ಮೊದಲ ಅಲೆಯಲ್ಲಿ ಹೇರಲಾದ ಲಾಕ್‌ಡೌನ್ ಪರಿಣಾಮದಿಂದ ಸಾವಿರಾರು ಕಾರ್ಮಿಕರು ನಗರಗಳನ್ನು ತೊರೆದು ಸಾವಿರಾರು ಕಿಲೋಮೀಟರ್ ಕಾಲ್ನಡಿಗೆಯಲ್ಲಿ ಸಂಚರಿಸಿ ತಮ್ಮ ಊರುಗಳನ್ನು ಮುಟ್ಟಿಕೊಂಡರು. ಎಷ್ಟೋ ಜನರು ಮಾರ್ಗಮಧ್ಯೆ ಪ್ರಾಣಕಳೆದುಕೊಂಡರು. ಈ ವಿದ್ಯಮಾನವು ದೇಶದ ವಲಸೆ ಕಾರ್ಮಿಕರ ಪಾಡನ್ನು ತೆರೆದಿಟ್ಟಿತು. ವಲಸೆ ಕಾರ್ಮಿಕರ ಸಂಖ್ಯೆ, ಕಾರಣಗಳು ಹಾಗೂ ವಲಸೆಯ ಸ್ವರೂಪವನ್ನು ವಿಶ್ಲೇಷಣೆ ಮಾಡಲು ದಶಕದಷ್ಟು ಹಳತಾಗಿರುವ ಜಣಗಣತಿ ದತ್ತಾಂಶಗಳು ನೆರವಿಗೆ ಬರುವುದಿಲ್ಲ. ಎಷ್ಟು ಸಂಖ್ಯೆಯ ಕಾರ್ಮಿಕರು ಯಾವ ಯಾವ ರಾಜ್ಯಗಳಲ್ಲಿ ಸಿಲುಕಿಕೊಂಡಿದ್ದಾರೆ ಎಂಬ ಸ್ಪಷ್ಟ ಮಾಹಿತಿ ಸರ್ಕಾರದ ಬಳಿಯೂ ಇರಲಿಲ್ಲ.

ಕಾರ್ಮಿಕರ ಮೂಲ ರಾಜ್ಯ, ಅವರು ಕೆಲಸ ಮಾಡಲು ತೆರಳುವ ಸ್ಥಳ, ವಲಸೆಗೆ ಕಾರಣ ಮೊದಲಾದ ಸಮಗ್ರ ಮಾಹಿತಿಯನ್ನು ಜನಗಣತಿ ದಾಖಲೆಗಳು ಒದಗಿಸುತ್ತವೆ. ಈ ದತ್ತಾಂಶಗಳು ಲಭ್ಯವಿದ್ದರೆ, ಒಂದು ದಶಕದ ಅವಧಿಯ ಕಾರ್ಮಿಕರ ವಲಸೆಯ ಸ್ಥಿತಿಗತಿಯನ್ನು ಅರಿತುಕೊಂಡು, ಅದಕ್ಕೆ ಪರಿಹಾರವನ್ನು ಹುಡುಕುವುದು ಸುಲಭವಾಗುತ್ತದೆ ಎನ್ನುತ್ತಾರೆ ತಜ್ಞರು. ಎರಡನೇ ಹಾಗೂ ಮೂರನೇ ಶ್ರೇಣಿಯ ನಗರಗಳಿಂದ ಜನರ ವಲಸೆಯ ಪ್ರಮಾಣ ಎಷ್ಟಿದೆ, ಅವರು ಉದ್ಯೋಗ ಕಂಡುಕೊಳ್ಳುವ ಮೆಟ್ರೊಪಾಲಿಟನ್ ನಗರಗಳಲ್ಲಿ ಅವರಿಗೆ ಆರೋಗ್ಯ ಹಾಗೂ ಸಾಮಾಜಿಕ ಸೇವೆ ಕಲ್ಪಿಸಲು ಈ ದತ್ತಾಂಶಗಳು ನೆರವಾಗುತ್ತವೆ. ನಗರಗಳಿಗೆ ಜನರ ವಲಸೆಯನ್ನು ತಡೆಗಟ್ಟಿ, ಅವರ ಊರುಗಳಲ್ಲೇ ನರೇಗಾ ಮೊದಲಾದ ಯೋಜನೆಗಳಿಂದ ಉದ್ಯೋಗ ಲಭಿಸುವಂತೆ ಯತ್ನಿಸಲೂ ಜನಗಣತಿ ಅಂಶಗಳು ಸಹಕಾರಿಯಾಗುತ್ತವೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಕೋವಿಡ್ ನಡುವೆಯೇ ಜನಗಣತಿ ಮುಗಿಸಿದ್ದ ಅಮೆರಿಕ

ಭಾರತದಂತೆ ಪ್ರತಿ 10 ವರ್ಷಗಳಿಗೊಮ್ಮೆ ಜನಗಣತಿ ನಡೆಸುವ ಅಮೆರಿಕ, ಕೋವಿಡ್ ನಡುವೆಯೂ 2020ರ ಜನಗಣತಿಯನ್ನು ಮುಗಿಸಿದೆ. ನಿಗದಿಯಂತೆ 2019ರ ಜನವರಿಯಲ್ಲಿ ಜನಗಣತಿ ಪ್ರಕ್ರಿಯೆ ಆರಂಭವಾಯಿತು. ಇದಕ್ಕೂ ಒಂದು ವರ್ಷದ ಹಿಂದೆ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು. ನೇರವಾಗಿ ಮನೆಬಾಗಿಲಿಗೆ ತೆರಳಿ ಮಾಹಿತಿ ಸಂಗ್ರಹಿಸುವ ಸಾಂಪ್ರದಾಯಿಕ ವಿಧಾನದ ಜೊತೆಗೆ ಡಿಜಿಟಲ್ ರೂಪದ ದತ್ತಾಂಶ ಸಂಗ್ರಹಕ್ಕೂ ಅವಕಾಶವಿತ್ತು. ಜನರು ಫೋನ್, ಇ–ಮೇಲ್ ಮೂಲಕ ದತ್ತಾಂಶವನ್ನು ದಾಖಲು ಮಾಡುವ ವ್ಯವಸ್ಥೆ ಕಲ್ಪಿಸಲಾಗಿತ್ತು. ಕೋವಿಡ್ ನಿಯಮಗಳನ್ನು ಪಾಲಿಸುತ್ತಲೇ, 2021ರ ಏಪ್ರಿಲ್‌ನಲ್ಲಿ ಜನಗಣತಿಯ ಮೊದಲ ವರದಿಯನ್ನು ಅಮೆರಿಕ ಬಿಡುಗಡೆ ಮಾಡಿತು. ಸೆಪ್ಟೆಂಬರ್‌ನಲ್ಲಿ ಪರಿಷ್ಕೃತ ವರದಿ ಪ್ರಕಟವಾಯಿತು.

ಆಧಾರ: ಜನಗಣತಿ ಸಂಘಟನೆ, ಕೇಂದ್ರ ಗೃಹ ಸಚಿವಾಲಯ, ಪಿಟಿಐ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 145

ದಕ್ಷನ ಮಗಳಾಗಿ ಸತೀದೇವಿ ಜನನ

ನಾರದನಿಗೆ ದಕ್ಷಬ್ರಹ್ಮ ಶಾಪಕೊಟ್ಟ ವಿಷಯ ತಿಳಿದ ಕೂಡಲೇ ಬ್ರಹ್ಮ ಅವರಿದ್ದ ಸ್ಥಳಕ್ಕೆ ಧಾವಿಸಿ ಬರುತ್ತಾನೆ. ತನ್ನ ಮಕ್ಕಳನ್ನು ಸನ್ಯಾಸಿಗಳನ್ನಾಗಿ ಮಾಡಿದ ನಾರದನ ಮೇಲೆ ಕುಪಿತಗೊಂಡಿದ್ದ ದಕ್ಷನನ್ನು ಪ್ರೀತಿಮಾತುಗಳಿಂದ ಶಾಂತಗೊಳಿಸಿದ ಬ್ರಹ್ಮ, ಇಬ್ಬರ ನಡುವೆ ಮತ್ತೆ ಪರಸ್ಪರ ಸ್ನೇಹದ ಬೆಸುಗೆ ಬೆಸೆಯುತ್ತಾನೆ.

ಬ್ರಹ್ಮನ ಮಾತಿನಿಂದ ಸಮಾಧಾನಗೊಂಡ ದಕ್ಷಪ್ರಜಾಪತಿ ಮತ್ತೆ ತನ್ನ ಪತ್ನಿ ವೀರಿಣಿಯಲ್ಲಿ ಸುಂದರಿಯರಾದ ಅರವತ್ತು ಹೆಣ್ಣುಮಕ್ಕಳನ್ನು ಪಡೆದ. ಆ ಅರವತ್ತು ಕನ್ಯೆಯರಲ್ಲಿ ಹತ್ತು ಕನ್ಯೆಯರನ್ನು ಧರ್ಮನಿಗೆ ವಿಧಿವತ್ತಾಗಿ ಮದುವೆ ಮಾಡಿಕೊಟ್ಟ. ಉಳಿದ ಹದಿಮೂರು ಕನ್ಯೆಯರನ್ನು ಕಶ್ಯಪಬ್ರಹ್ಮನಿಗೆ, ಇಪ್ಪತ್ತೇಳು ಕನ್ಯೆಯರನ್ನು ಚಂದ್ರನಿಗೆ, ತಲಾ ಇಬ್ಬರು ಕನ್ಯೆಯರನ್ನು ಭೂತಮುನಿ, ಅಂಗಿರಸ್ಸು ಮತ್ತು ಕೃಶಾಶ್ವ ಅವರಿಗೆ ಮದುವೆ ಮಾಡಿಕೊಟ್ಟ. ಗರುಡನಿಗೆ ಮಿಕ್ಕ ಏಳು ಕನ್ಯೆಯರನ್ನು ಮದುವೆ ಕೊಟ್ಟ. ವಿವಾಹದ ನಂತರ ಪ್ರಜಾಪತಿಯ ಎಲ್ಲಾ ಹೆಣ್ಣುಮಕ್ಕಳಿಗೂ ಅಪಾರ ಸಂತಾನವಾಗಿ ಮೂರು ಲೋಕದಲ್ಲೂ ಜನಸಂಖ್ಯೆ ಬೆಳೆಯಿತು. ಪ್ರಜಾಪತಿಯ ಹೆಣ್ಣುಮಕ್ಕಳಿಗೆ ಹುಟ್ಟಿದ ಅಸಂಖ್ಯ ಮಕ್ಕಳ ವಿವರವಾಗಿ ಬಿಡಿಸಿ ಹೇಳಲು ಸಾಧ್ಯವಿಲ್ಲ ಎಂದು ಬ್ರಹ್ಮನು ನಾರದನಿಗೆ ತಿಳಿಸುತ್ತಾನೆ. ಹಾಗೇ, ಶಿವಶಕ್ತಿದೇವಿಯ ಅವತಾರಿಯಾದ ಸತೀದೇವಿಯನ್ನು ಕೆಲವರು ದಕ್ಷನ ಹಿರಿಯ ಮಗಳೆಂದು ಹೇಳುವರು. ಕೆಲವರು ಮಧ್ಯದವಳೆನ್ನುವರು. ಇನ್ನು ಕೆಲವರು ಕೊನೆಯವಳೆನ್ನುವರು. ಆಯಾಯ ಕಲ್ಪಭೇದದಿಂದ ಈ ಮೂರು ಅಭಿಪ್ರಾಯವೂ ಸರಿಯಾದುದು ಎಂದು ನಾರದನಿಗೆ ಬ್ರಹ್ಮ ಹೇಳುತ್ತಾನೆ.

ಶಿವಶಕ್ತಿದೇವಿ ಪ್ರತ್ಯಕ್ಷಳಾಗಿ ತನಗೆ ನೀಡಿದ ಮಾರ್ಗದರ್ಶನದಂತೆ ದಕ್ಷಬ್ರಹ್ಮ ತನ್ನ ಪತ್ನಿಯಲ್ಲಿ ಪುತ್ರಿ ಜನಿಸಬೇಕೆಂದು ಜಗನ್ಮಾತೆಯಾದ ದೇವಿಯನ್ನು ಮನಸ್ಸಿನಲ್ಲಿ ಧ್ಯಾನಿಸಿದ. ದೇವಿಯನ್ನು ಭಕ್ತಿಯಿಂದ ಅಂಜಲಿಬದ್ಧನಾಗಿ ವಿನಯದಿಂದ ಬಗ್ಗಿ ಗದ್ಗದಸ್ವರದಿಂದ ಸ್ತುತಿಸಿದ. ದಕ್ಷನ ಸ್ತುತಿಯಿಂದ ಸಂತುಷ್ಟಳಾದ ದೇವಿಯು ತನ್ನ ಪೂರ್ವಪ್ರತಿಜ್ಞೆಯಂತೆ ದಕ್ಷನ ಪತ್ನಿಯಾದ ವೀರಿಣಿಯಲ್ಲಿ ಅವತಾರವನ್ನು ಮಾಡುವೆನೆಂದು ಸಂಕಲ್ಪಿಸಿದಳು. ಇದಕ್ಕಾಗಿ ಜಗನ್ಮಾತೆಯು ದಕ್ಷಬ್ರಹ್ಮನ ಮನಸ್ಸಿನಲ್ಲಿ ನೆಲಸಿದಳು. ದಕ್ಷನ ಮನಸ್ಸನ್ನು ಜಗನ್ಮಾತೆ ಪ್ರವೇಶಿಸುತ್ತಿದ್ದಂತೆ ಆತ ತೇಜೋವಂತನಾಗಿ ಪ್ರಕಾಶಿಸಿದ. ನಂತರ ದಕ್ಷಪ್ರಜಾಪತಿ ಶುಭಮುಹೂರ್ತದಲ್ಲಿ ತನ್ನ ಪತ್ನಿಯಲ್ಲಿ ಗರ್ಭದಾನ ಮಾಡಿದ. ಆಗ ಜಗನ್ಮಾತೆಯಾದ ಶಿವಶಕ್ತಿ ದೇವಿಯು ದಕ್ಷನ ಮನಸ್ಸಿನಿಂದ ಪತ್ನಿ ವೀರಿಣಿಯ ಮನಸ್ಸಿನಲ್ಲಿ ನೆಲಸಿದಳು.

ಕೆಲವು ದಿನಗಳಲ್ಲಿಯೇ ವೀರಿಣಿಯಲ್ಲಿ ಗರ್ಭಿಣಿ ಚಿಹ್ನೆಗಳು ಪ್ರಕಟವಾದವು. ದೇವಿಯು ಅವಳಲ್ಲಿ ನೆಲಸಿದ್ದರಿಂದ ಆ ವೀರಿಣಿಯು ಮಹಾಮಂಗಳರೂಪಳಾಗಿ ಮತ್ತು ಸದಾ ಸಂತುಷ್ಟಳಾಗಿರುವಂತೆ ಪ್ರಕಾಶಿಸಿದಳು. ಆಗ ದಕ್ಷಪ್ರಜಾಪತಿಯು ಕುಲಾಭಿವೃದ್ಧಿ, ಐಶ್ವರ್ಯಾಭಿವೃದ್ಧಿ, ವಿದ್ಯಾಭಿವೃದ್ಧಿ ಮತ್ತು ಮನಸ್ಸು ಪರಿಪಾಕಹೊಂದುವುದಕ್ಕಾಗಿ ಪುಂಸವನ ಮತ್ತು ಇತರೆ ಶುಭಕರ್ಮಗಳನ್ನು ಶ್ರದ್ಧೆಯಿಂದ ಆಚರಿಸಿದ. ಆ ಕರ್ಮಾಚರಣೆಗಳು ದೊಡ್ಡ ಉತ್ಸವದಂತೆ ನಡೆಯಿತು.

ವೀರಿಣೆಯ ಗರ್ಭದಲ್ಲಿ ದೇವಿಯು ಬೆಳೆಯುತ್ತಿರುವುದನ್ನು ತಿಳಿದು ಇಂದ್ರ ಮೊದಲಾದ ದೇವತೆಗಳು ದಕ್ಷನ ಮನೆಗೆ ಬಂದು ಲೋಕೋಪಕ್ಕಾರಕ್ಕಾಗಿ ಅವತರಿಸುವಂತಹ ಜಗನ್ಮಾತೆಯಾದ ದೇವಿಯ ಕುರಿತು ಸ್ತೋತ್ರ ಮಾಡಿದರು. ಹಾಗೆಯೇ, ದಕ್ಷಪ್ರಜಾಪತಿ ಮತ್ತವನ ಪತ್ನಿಯಾದ ವೀರಿಣಿಯನ್ನು ತುಂಬಾ ಪ್ರಶಂಸಿಸಿ ಅರಸಿದ ದೇವತೆಗಳು, ನಂತರ ತಮ್ಮ ಸ್ಥಾನಗಳಿಗೆ ತೆರಳಿದರು. ವೀರಿಣಿಗೆ ಒಂಬತ್ತು ತಿಂಗಳುಗಳು ತುಂಬಿದಾಗ ಲೌಕಿಕವಾಗಿ ಮಾಡಬೇಕಾದ ಎಲ್ಲಾ ಕರ್ಮಗಳು ಯಥೋಕ್ತವಾಗಿ ನೆರವೇರಿದವು. ಹತ್ತನೆಯ ತಿಂಗಳಲ್ಲಿ ಗ್ರಹಾನುಕೂಲ ಮತ್ತು ತಾರಾನುಕೂಲವಿರುವಂತಹ ಮತ್ತು ಚಂದ್ರನು ಪೂರ್ಣನಾಗಿರುವಂತಹ ಶುಭಮುಹೂರ್ತದಲ್ಲಿ ತಾಯಿಯಾದ ವೀರಿಣಿಯ ಎದುರಿಗೆ ದೇವಿಯು ಆವಿರ್ಭವಿಸಿದಳು. ಕುಮಾರಿಯು ಜನಿಸಿದೊಡನೆಯೇ ದಕ್ಷಬ್ರಹ್ಮ ತುಂಬಾ ಸಂತೋಷಪಟ್ಟ. ಮಹಾತೇಜಸ್ವಿಯಾಗಿ ಕಂಗೊಳಿಸುತ್ತಿದ್ದ ಮಗಳನ್ನು ನೋಡಿ ಇವಳು ದೇವಿಯ ಅವತಾರವೆಂಬುದನ್ನು ಮನದಟ್ಟು ಮಾಡಿಕೊಂಡ. ಆ ದೇವಿಕುಮಾರಿ ಜನಿಸಿದ ಕೂಡಲೇ ಆಕಾಶದಿಂದ ಪುಷ್ಪವೃಷ್ಟಿಯಾಯಿತು. ಮೇಘಗಳು ಮಳೆಯನ್ನು ಸುರಿಸಿದುವು. ದಿಕ್ಕುಗಳು ಮಲಿನವಾಗಿರದೇ ಪ್ರಸನ್ನವಾದುವು. ದೇವತೆಗಳು ಆಕಾಶದಲ್ಲಿ ನಿಂತು ದೇವದುಂದುಭಿ ಬಾರಿಸಿದರು. ಅಗ್ನಿಯು ಶಾಂತಿಯಿಂದ ಪ್ರದಕ್ಷಿಣಾಕಾರವಾಗಿ ಜ್ವಲಿಸಿತು. •

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ರಸ್ತೆಯೊಂದರಲ್ಲಿ ದುಷ್ಕರ್ಮಿಗಳಿಬ್ಬರು, ವ್ಯಕ್ತಿಯೊಬ್ಬರನ್ನು ಹೊಡೆದು ಕೊಲ್ಲುವ ದೃಶ್ಯವಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಈ ವಿಡಿಯೊ ಜತೆಗೆ ಹಂಚಿಕೊಂಡಿರುವ ಮಾಹಿತಿಯೂ ವೈರಲ್ ಆಗಿದೆ. ‘ನೋಡಿ, ಹಿಂದೂ ವ್ಯಕ್ತಿಯೊಬ್ಬರನ್ನು ರೋಹಿಂಗ್ಯಾ ಮುಸ್ಲಿಮರು ಹೊಡೆದು ಕೊಂದಿದ್ದಾರೆ. ಅಕ್ರಮವಾಗಿ ಭಾರತ ಪ್ರವೇಶಿಸಿರುವ ಇವರು, ದೇಶದ ನಿವಾಸಿಗಳಾದ ಹಿಂದೂಗಳನ್ನು ಹೊಡೆದು ಕೊಲ್ಲುತ್ತಿದ್ದಾರೆ. ರೋಹಿಂಗ್ಯಾ ಮುಸ್ಲಿಮರನ್ನು ದೇಶದಿಂದ ಒದ್ದೋಡಿಸಿ ಎಂದು ಸರ್ಕಾರವನ್ನು ಆಗ್ರಹಿಸಬೇಕು’ ಎಂಬ ವಿವರವನ್ನು ವಿಡಿಯೊಗೆ ನೀಡಲಾಗಿದೆ. ಈ ಪೋಸ್ಟ್‌ಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಲವು ಬಾರಿ ಹಂಚಿಕೊಳ್ಳಲಾಗಿದೆ.

‘ಇದು ತಿರುಚಲಾದ ಮಾಹಿತಿ’ ಎಂದು ‘ದಿ ಲಾಜಿಕಲ್ ಇಂಡಿಯನ್’ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ‘ದೆಹಲಿಯ ಆಜಾದ್‌ಪುರದಲ್ಲಿ 2022ರ ಮಾರ್ಚ್ 3ರಂದು ಈ ಕೊಲೆ ನಡೆದಿದೆ. ವೈರಲ್ ಆಗಿರುವ ಪೋಸ್ಟ್‌ಗಳಲ್ಲಿ ಇರುವಂತೆ, ಹಿಂದೂವನ್ನು ರೋಹಿಂಗ್ಯಾ ಮುಸ್ಲಿಮರು ಕೊಂದ ಪ್ರಕರಣವಲ್ಲ ಇದು. ಬದಲಿಗೆ ಆಜಾದ್‌ಪುರದ ನಿವಾಸಿಯಾದ ನರೇಂದರ್ ಅವರನ್ನು, ಅವರ ಸ್ನೇಹಿತರಾದ ರಾಹುಲ್ ಕಾಳಿ, ರೋಹಿತ್ ಕಾಳಿ ಅವರು ಹೊಡೆದು ಕೊಂದಿದ್ದರು. ಹಣಕಾಸಿನ ವಿಚಾರಕ್ಕೆ ಈ ಕೊಲೆ ನಡೆದಿತ್ತು. ಪೊಲೀಸರು ಇಬ್ಬರನ್ನೂ ಬಂಧಿಸಿ, ಪ್ರಕರಣ ದಾಖಲಿಸಿದ್ದಾರೆ. ತನಿಖೆ ಪ್ರಗತಿಯಲ್ಲಿ ಇದೆ. ಆದರೆ, ಸುಳ್ಳು ಮಾಹಿತಿಯೊಂದಿಗೆ ಈ ವಿಡಿಯೊವನ್ನು ಹಂಚಿಕೊಳ್ಳಲಾಗುತ್ತಿದೆ’ ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಮನವ ಶೋಧಿಸಬೇಕು

ತರಿದುಬಿಡು, ತೊರೆದುಬಿಡು, ತೊಡೆದುಬಿಡು ನೆನಹಿಂದ |
ಕರಕರೆಯ ಬೇರುಗಳ, ಮನದ ಗಂಟುಗಳ ||
ಉರಕೆ ಸೊಗಸೆನಿಸಿದಾ ಪ್ರೀತಿಹಾರಮುಮೊರ್ಮೆ |
ಉರಳಪ್ಪುದಾತ್ಮಕ್ಕೆ – ಮಂಕುತಿಮ್ಮ || 648 ||

ಪದ-ಅರ್ಥ: ತರಿದುಬಿಡು = ಕತ್ತರಿಸಿಬಿಡು, ತೊರೆದುಬಿಡು = ನೀಗಿ ಬಿಡು, ನೆನಹಿಂದ = ನೆನಪಿನಿಂದ, ಕರಕರೆಯ = ಮನಸ್ಸಿಗೆ ಮುಜುಗರವಾದ, ಉರಕೆ = ಎದೆಗೆ, ಪ್ರೀತಿಹಾರಮುಮೊರ್ಮೆ = ಪ್ರೀತಿ ಹಾರಮು (ಪ್ರೀತಿಯ ಹಾರವೂ) + ಒರ್ಮೆ(ಒಮ್ಮೆ), ಉರಳಪ್ಪುದಾತ್ಮಕ್ಕೆ = ಉರಳಪ್ಪುದು(ನೇಣಾಗುವುದು) + ಆತ್ಮಕ್ಕೆ

ವಾಚ್ಯಾರ್ಥ: ನಿನ್ನ ನೆನಪುಗಳಿಂದ, ಮನಸ್ಸಿನ ಗಂಟುಗಳನ್ನು, ಮುಜುಗರವನ್ನು ಮಾಡಿದ ವಿಷಯಗಳ ಬೇರುಗಳನ್ನು ಕತ್ತರಿಸಿ, ಕಳೆದುಬಿಡು, ಅಳಿಸಿಬಿಡು. ಯಾಕೆಂದರೆ ಎದೆಗೆ ಸೊಗಸು ತಂದ ಪ್ರೀತಿಯ ಹಾರ ಕೂಡ ಒಮ್ಮೆ ಆತ್ಮಕ್ಕೆ ಉರುಳಾಗಬಹುದು.

ವಿವರಣೆ: ಮನಸ್ಸಿನ ಹೊಯ್ದಾಟಗಳನ್ನು, ಬೋನಿನೊಳಗೆ ಹಾರಾಡುತ್ತಿರುವ, ಹುಚ್ಚುಹಿಡಿದ ಕೋತಿಗೆ ಹೋಲಿಸುತ್ತಾರೆ. ಅದಕ್ಕೆ ಹುಚ್ಚು ಮಾತ್ರ ಹಿಡಿದಿಲ್ಲ, ಅದು ಸುರೆಯನ್ನು ಕುಡಿದಿದೆ ಮತ್ತು ಅದಕ್ಕೆ ಚೇಳು ಕುಟುಕಿದೆ. ಮನಸ್ಸಿನ ಚಲನೆ ಅಂಥದ್ದು. ಧ್ಯಾನಮಾಡಲು ಪ್ರಯತ್ನಿಸಿದವರಿಗೆಲ್ಲ ಇದು ತಿಳಿದಿದೆ. ಮೇಲೆ ಏಳು ಎಂದು ಕೈಗೆ ಬುದ್ಧಿ ಹೇಳಿದರೆ ಅದು ಥಟ್ಟನೆ ಮೇಲೇಳುತ್ತದೆ. ಆದರೆ ಶಾಂತವಾಗು ಎಂದು ಮನಸ್ಸಿಗೆ ಹೇಳಿದರೆ? ಅದು ಮತ್ತಷ್ಟು ಹಾರಾಡಿ ಅಣಕಿಸುತ್ತದೆ.

ಒಂದು ಅತ್ಯಂತ ನುಣುಪಾದ ಕೇರಂ ಬೋರ್ಡನ್ನು ಕಲ್ಪಿಸಿಕೊಳ್ಳಿ. ಅದರ ಮೇಲೆ ಸಾಕಷ್ಟು ಜಾರುವ ಪುಡಿಯನ್ನು ಹಾಕಿದ್ದೀರಿ. ಹೊಡೆಯುವ ಬಿಲ್ಲೆಯನ್ನು ತಳ್ಳಿದರೆ ಅದು ಮೊದಲು ನೇರ ಹೋದೀತು. ನಂತರ ಬೋರ್ಡಿನ ಅಂಚಿಗೆ, ಬೇರೆ ಬಿಲ್ಲೆಗಳಿಗೆ ಪಟಪಟನೆ ಹೊಡೆದು, ಎಲ್ಲೆಲ್ಲಿಯೋ ಜಾರಿ ಹೋಗುತ್ತದೆ. ಜಾರುವ ಬಿಲ್ಲೆಯ ಬದಲು ಮಣ್ಣಿನ ಮುದ್ದೆ ಇದ್ದರೆ? ಅದು ಜಾರದೆ ಒಂದೆಡೆಗೆ ನಿಲ್ಲುತ್ತದೆ. ಹೀಗೆ ಮನಸ್ಸನ್ನು ಜಾರದಂತೆ ನಿಲ್ಲಿಸುವುದನ್ನೇ ರಾಜಯೋಗದಲ್ಲಿ ಧಾರಣಾ ಎಂದು ಕರೆಯುತ್ತಾರೆ. ಅದು ಏಕಾಗ್ರತೆ,

ಕಠೋಪನಿಷತ್ ಹೇಳುತ್ತದೆ –
ಯದಾ ಪಂಚಾವತಿಷ್ಠಂತೇ ಜ್ಞಾನಾನಿ ಮನಸಾಸಹ |
ಬುದ್ಧಿಶ್ಚ ನ ವಿಚೇಷ್ಟತೇ ತಾಮಾಹು: ಪರಮಾಂ ಗತಿಮ್ ||

(ಮನಸ್ಸು, ಇಂದ್ರಿಯ, ಬುದ್ಧಿ ಇನಿತೂ ಚಲಿಸದೆ ಶಾಂತಿಯನ್ನು ಪಡೆಯುವುದೇ ಪರಮಗತಿ ಎನ್ನುತ್ತಾರೆ). ಈ ಗತಿಯನ್ನು ಪಡೆಯಲು ಏನು ಮಾಡಬೇಕು ಎನ್ನುವುದನ್ನು ಈ ಕಗ್ಗ, ನಮಗರ್ಥವಾಗುವ ಸುಲಭ ಕನ್ನಡದಲ್ಲಿ ತಿಳಿಸುತ್ತದೆ. ‘ತರಿದುಬಿಡು, ತೊರೆದುಬಿಡು, ತೊಡೆದುಬಿಡು ನೆನಹಿಂದ”. ಆ ನೆನಪಿನಲ್ಲಿ ಸೇರಿಕೊಂಡ ಮುಜುಗರದ ಕ್ಷಣಗಳನ್ನು, ಮನಸ್ಸಿನ ಗಂಟುಗಳನ್ನು ತೆಗೆದುಹಾಕಬೇಕು. ಇದಕ್ಕೆ ಅಷ್ಟಾಂಗ ಯೋಗದ ಮಾರ್ಗಗಳು ಸಹಕಾರಿ. ಸೊಗಸಾದ ನೆನಪುಗಳೂ ಬೇಡ. ಯಾಕೆಂದರೆ ಸಂಭ್ರಮದಿಂದ ಎದೆಗೆ ಹಾಕಿಕೊಂಡ ಹಾರವೇ ಉರುಳಾಗಬಹುದು. ಅದನ್ನೇ ಬಸವಣ್ಣನವರು ಸುಂದರವಾಗಿ, ‘ಹೊಗಳಿ, ಹೊಗಳಿ ಎನ್ನ ಹೊನ್ನಶೂಲಕ್ಕೇರಿಸದಿರಯ್ಯಾ’ ಎಂದರು. ಪ್ರಿಯವಾಗುವ ಹೊಗಳಿಕೆಯೇ ಪ್ರಾಣ ತೆಗೆಯುವ ಶೂಲ - ಬಂಗಾರದ್ದಾಗಿದ್ದರೂ ಕೂಡ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಜೂನ್ 13, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ–ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಚತುರ್ದಶಿ ಗಂ. 21-03 ನಕ್ಷತ್ರ: ಅನುರಾಧ ಗಂ. 21-24 ಯೋಗ: ಸಿದ್ಧ ಗಂ. 13-42, ಕರಣ: ಗರಜೆ ಗಂ. 10-48, ವೃಷಭ ಮಾಸದ 29 ನೇ ದಿನ.
ರಾಹುಕಾಲ: ಬೆಳಿಗ್ಗೆ 07:30–09:00
ಸೂರ್ಯೋದಯ: 06-07 **ಸೂರ್ಯಾಸ್ತ:** 06-54
ಮುಸ್ಲಿಂ ದಿನಾಂಕ: 13 ಜುಲ್ಕಾಯದ್
ಅದೃಷ್ಟ ಸಂಖ್ಯೆ : 3, 10

ಮೇಷ: ಪತಿ ಪತ್ನಿಯ ಹೊಂದಾಣಿಕೆಯಿಂದ ಗೃಹ ಸಮಸ್ಯೆಗಳ ಪರಿಹಾರ. ನ್ಯಾಯಾಲಯದಲ್ಲಿದ್ದ ವಿಚಾರ ಒಂದು ಇತ್ಯರ್ಥವಾಗಿ ಮನಸ್ಸಿಗೆ ಸಮಾಧಾನ ಸಿಗಲಿದೆ. ಕೃಷಿ ಕ್ಷೇತ್ರದವರಿಗೆ ಕೆಲಸ ಅಧಿಕವಾಗಿರುವುದು.

ವೃಷಭ: ನಿಮ್ಮ ಮಕ್ಕಳು ಜೀವನದಲ್ಲಿ ಉತ್ತಮ ಹಂತ ತಲುಪಿರುದಕ್ಕೆ ನೆಮ್ಮದಿ ಹಾಗೂ ಸಂತಸ. ಹಿರಿಯರ ಆರೋಗ್ಯದ ತಪಾಸಣೆ ಮಾಡಿಸುವ ಜವಾಬ್ದಾರಿ ಮರೆಯದಿರಿ.

ಮಿಥುನ: ಖರ್ಚು ವೆಚ್ಚ ಮಾಡಬೇಕಾದರೂ ಆದಾಯದ ಹೊಸ ಮೂಲ ಒಂದು ಕುಡಿಯೊಡೆದು ಲಾಭ ತರುವುದು. ಕಲಾವಿದರಿಗೆ ಚಿತ್ರರಂಗದಲ್ಲಿ ಅದರಲ್ಲೂ ಹಾಸ್ಯಗಾರನಾಗಿ ಉತ್ತಮ ಅವಕಾಶ.

ಕರ್ಕಾಟಕ: ಮುಂಬರುವ ಶುಭ ಕಾರ್ಯಗಳಿಗೆ ಹೆಚ್ಚಿನ ತಯಾರಿ ನಡೆಸಿ-ಕೊಳ್ಳಬಹುದು. ಕಾರ್ಯರಂಗದಲ್ಲಿ ಉತ್ಸಾಹದ ಚಟುವಟಿಕೆಯಿಂದ ಹೆಚ್ಚಿನ ಸಂತೋಷ ಇರುವುದು. ವಿದೇಶಿ ಪ್ರಯಾಣ ಸುಖಕರ.

ಸಿಂಹ: ಇಂದು ನಿಮ್ಮ ಉತ್ಸಾಹ ಹೆಚ್ಚಿಸಿಕೊಳ್ಳುವ ಸಮಯ. ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಖರ್ಚು. ನಿಮ್ಮ ಧೈರ್ಯ ಸಾಮರ್ಥ್ಯದ ಜೊತೆಯಲ್ಲಿ ನಿಮ್ಮ ಸಹೋದ್ಯೋಗಿಗಳ ಉತ್ತೇಜನ ಪಡೆಯುವಿರಿ.

ಕನ್ಯಾ: ಬೇರೆಯವರನ್ನು ಮರುಳುಗೊಳಿಸುವ ಮಾತಿನ ಕೌಶಲ್ಯ ನಿಮ್ಮಲ್ಲಿದೆ, ಅದು ನಿಮಗೆ ಮುಳ್ಳಾಗಬಹುದು. ಗೃಹ ನಿರ್ಮಾಣದ ಕೆಲಸ ಆರಂಭಿಸಲು ಸೂಕ್ತ ಸಮಯ. ನಿಶ್ಚಿತ ರೂಪದಲ್ಲಿ ಕೆಲಸಗಳು ಜರುಗಲಿವೆ.

ತುಲಾ: ಬಟ್ಟೆ ವ್ಯಾಪಾರಿಗಳಿಗೆ ಇಂದು ಉತ್ತಮ ಮಾರಾಟ ಹಾಗೂ ಲಾಭ. ಮೇಲಧಿಕಾರಿಗಳ ವಿಶ್ವಾಸ ಸಂಪಾದಿಸುವಲ್ಲಿ ಯಶಸ್ವಿಯಾಗುವಿರಿ. ಮನೆಯ ಸಣ್ಣ ಪುಟ್ಟ ರಿಪೇರಿಗೆ ಹಣ ವ್ಯಯ.

ವೃಶ್ಚಿಕ: ಒಣ ಪ್ರತಿಷ್ಠೆಯಿಂದ ಸಂಬಂಧಗಳು ನುಚ್ಚುನೂರಾಗುವ ಪರಿಸ್ಥಿತಿ ತಂದುಕೊಳ್ಳಬೇಡಿ. ಆಹಾರ ಪದ್ಧತಿ ಬದಲಿಸಿಕೊಳ್ಳುವುದು ಸರಿ. ನೃತ್ಯಾಭ್ಯಾಸ ಮುಂದುವರೆಸಲು ಮನೆಯವರಿಂದ ಒತ್ತಾಯ.

ಧನು: ಆಸ್ತಿ ಕೊಳ್ಳುವ ವಿಷಯದಲ್ಲಿ ಹೆಂಡತಿಯೊಂದಿಗೆ ಮಾತುಕತೆ ನಡೆಸಿ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಅಗಾಧವಾದ ಪ್ರಯತ್ನ ಮಾಡಿ. ಅನುಕಂಪ ತೋರುವವರು ನಿಮ್ಮ ಬಗ್ಗೆಯೂ ಗಮನ ಹರಿಸಿ.

ಮಕರ: ಯಾವುದೇ ಹೊಸ ಉದ್ಯೋಗ ಒಪ್ಪಿಕೊಳ್ಳುವಾಗ ಅಥವಾ ಕರಾರಿಗೆ ಸಹಿ ಮಾಡುವಾಗ ವಕೀಲರು ಅಥವಾ ಸಲಹೆಗಾರರನ್ನು ಬೇಟಿ ಮಾಡಿ. ದೇಹಾಯಾಸ ಇಂದು ಕಡಿಮೆಯಾಗಲಿದೆ.


ಕುಂಭ: ಬೆಲೆ ಬಾಳುವ ವಸ್ತು ಕಳೆದುಕೊಳ್ಳುವ ಸಾಧ್ಯತೆ. ಆದ್ದರಿಂದ ಇಂದು ಬಂಗಾರ ಮತ್ತು ಹಣ ಹಿಡಿದುಕೊಂಡು ಸಂಚರಿಸಬೇಡಿ. ಧ್ಯಾನ ಪ್ರವಚನ ಕೇಳುವುದರತ್ತ ಮನಸ್ಸು ಹರಿಯಲಿದೆ.

ಮೀನ: ಬರಹಗಾರರಿಗೆ ತಮ್ಮ ಬರವಣಿಗೆಯ ಮೇಲೆ ಆಕ್ಷೇಪ ವ್ಯಕ್ತಪಡಿಸುವ ಜನರ ಮಧ್ಯದಲ್ಲಿ ಇರಬೇಕಾದ ಪರಿಸ್ಥಿತಿ. ತಿಂಡಿ-ತಿನಿಸುಗಳ ವ್ಯಾಪಾರದಲ್ಲಿನ ಲಾಭವು ನಿಮ್ಮ ಅಭಿವೃದ್ಧಿಗೆ ಸಹಕಾರಿಯಾಗಲಿದೆ.

ಪದಬಂಧ 4987 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಉಗ್ರವಾಗಿ ಮುಂದುವರೆಯುವನು (4)
4.ಹೆಣ್ಣು ದುಂಬಿಯಿದು (4)
6.ಜಲದೊಳಗಿರುವ ಕ್ಲಿಷ್ಟತೆ! (3)
7.ಪಾಕಕ್ಕೆ ಸಿಕ್ಕಿರುವ ಬಹುಮಾನ (5)
10.ದಕ್ಷಿಣದ ವಿರುದ್ಧ ದಿಕ್ಕು (3)
11.ಈತ ಹಾಲು ಮಾರುವವನು (4)
13.ಮಂದಿಯ ಓಟು (4)

ಮೇಲಿಂದ ಕೆಳಕ್ಕೆ
1.ಅಂತ್ಯ ಕಾಲದ ಕೊನೆಗೆ ಮಣವಿದೆಯಲ್ಲಾ? (4)
2.ಗಾಯಗೊಂಡಿರುವ ಹಾಡುಗಾರ (3)
3.ತಾವರೆಯನ್ನು ಹೀಗೂ ಹೇಳುವರು (3)
5.ದುರಸ್ತಿಯನ್ನು ಹೀಗೆನ್ನಿ (3)
6.ಜನರ ಬಳಿಯಿರುವ ತಂದೆ (3)
7.ತಿಳುವಳಿಕೆಯಿಲ್ಲದವ ಮರದ ಕೊನೆಗಿದ್ದಾನೆ (3)
8.ಹೆಂಡತಿಯ ಸೋದರಿಯ ಗಂಡ (3)
9.ಮನ್ಮಥನ ಇನ್ನೊಂದು ಹೆಸರು (4)
10.ಉಯ್ಯಾಲೆ ಆಡುತ್ತಲೇ ಬರೆದಿಟ್ಟ ಮೃತ್ಯುಪತ್ರ (3)
12.ವಾದ್ಯವನ್ನು ನುಡಿಸುವಿಕೆ (3)



4986ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅರ್ಧಾಂಗಿ 2.ಮನೆತನ 5.ಲೀಲಾಜಾಲ 6.ವಟು 7.ಗಗನ 9.ನವೀನ 12.ಜಯ 13.ಮಡಿವಾಳ 15.ಸೆರೆಮನೆ 16.ಕರುಳು

ಮೇಲಿಂದ ಕೆಳಕ್ಕೆ: 1.ಅತ್ತೆ 2.ಗಿಲೀಟು 3.ಮಲರೋಗ 4.ನಸುಕು 6.ವರ್ತಮಾನ 8.ನವೋದಯ 10.ನಡುಮನೆ 11.ಹಾವಸೆ 12ಜಳಕ 14.ಅಳು

ಸುಡೊಕು 5373

	7	6		4				9
5			6		9			2
2				7		3		
7	8						5	
				9		6		7
6		5					2	
		7	2				9	5
	5				7			
9				5		2		4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5372 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ಬಂಗಾಳದಲ್ಲಿ ರೈಲಿನ ಮೇಲೆ ಕಲ್ಲು ತೂರಾಟ • ರಾಂಚಿಯಲ್ಲಿ ನಿಷೇಧಾಜ್ಞೆ ವಿಸ್ತರಣೆ • ಅಸ್ಸಾಂನ ಕೆಲವೆಡೆ ಕಟ್ಟೆಚ್ಚರ

ಪ್ರವಾದಿ ಅವಹೇಳನ: ನಿಲ್ಲದ ಪ್ರತಿಭಟನೆ

ರಾಂಚಿ/ಹೌರಾ/ಗುವಾಹಟಿ (ಪಿಟಿಐ): ಪ್ರವಾದಿ ಮಹಮ್ಮದ್ ಅವರ ಬಗ್ಗೆ 'ಅವಹೇಳನಕಾರಿ' ಹೇಳಿಕೆ ನೀಡಿದ ಬಿಜೆಪಿಯ ನೂಪುರ್ ಶರ್ಮಾ ಹಾಗೂ ನವೀನ್ ಜಿಂದಾಲ್ ಅವರ ಬಂಧನಕ್ಕೆ ಆಗ್ರಹಿಸಿ ದೇಶದ ವಿವಿಧ ಕಡೆ ಸತತ ಮೂರನೇ ದಿನವೂ ಪ್ರತಿಭಟನೆ ಮುಂದುವರಿಯಿತು. ಪಶ್ಚಿಮ ಬಂಗಾಳದಲ್ಲಿ ರೈಲಿನ ಮೇಲೆ ಕಲ್ಲು ತೂರಾಟ ನಡೆಯಿತು. ಅಸ್ಸಾಂನ ಎರಡು ಜಿಲ್ಲೆಗಳಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ರಾಂಚಿಯಲ್ಲಿ ಪೊಲೀಸ್ ಭದ್ರತೆ ಹೆಚ್ಚಿಸಿ, ನಿಷೇಧಾಜ್ಞೆ ವಿಸ್ತರಿಸಲಾಗಿದೆ.

ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯಲ್ಲಿ ಉದ್ರಿಕ್ತರ ಗುಂಪು ಬೆಥುಯಾಡಹರಿ ರೈಲು ನಿಲ್ದಾಣಕ್ಕೆ ನುಗ್ಗಿ, ರೈಲಿನ ಮೇಲೆ ದಾಳಿ ಮಾಡಿ ಹಾನಿಗೊಳಿಸಿತು. ಭಾನುವಾರ ಸಂಜೆ ಸಾವಿರಾರು ಜನರು ರಸ್ತೆತಡೆ ನಡೆಸುತ್ತಿದ್ದರು. ಪೊಲೀಸರು ಬೆನ್ನಟ್ಟಿದಾಗ, ಕೆಲವು ಜನರ ಗುಂಪು ರೈಲು ನಿಲ್ದಾಣಕ್ಕೆ ನುಗ್ಗಿ ರೈಲಿನ ಮೇಲೆ ಕಲ್ಲುತೂರಾಟ ನಡೆಸಿತು. ರೈಲು ಸಂಚಾರ ಕೆಲ ಸಮಯ ಸ್ಥಗಿತಗೊಂಡಿತ್ತು.

ಅಸ್ಸಾಂನ ಕಛಾರ್ ಹಾಗೂ ಕರೀಮ್‌ಗಂಜ್ ಜಿಲ್ಲೆಗಳಲ್ಲಿ ಭಾನುವಾರ ನಿಷೇಧಾಜ್ಞೆ ಜಾರಿ ಮಾಡಲಾಗಿತ್ತು. ಮೆರವಣಿಗೆ ಅಥವಾ ರ‍್ಯಾಲಿಗೆ ನಿಷೇಧ ಹೇರಲಾಗಿತ್ತು. 'ಕೆಲವು ದಿನಗಳಿಂದ ಈ ಎರಡು ಜಿಲ್ಲೆಗಳಲ್ಲಿ ಪ್ರತಿಭಟನೆ ಹೆಸರಿನಲ್ಲಿ ದೊಡ್ಡ ಪ್ರಮಾಣದಲ್ಲಿ ಜನರು ಸೇರುತ್ತಿದ್ದಾರೆ. ಸಮಾಜಘಾತುಕ ಶಕ್ತಿಗಳು ಈ ಸಮಯದಲ್ಲಿ ವಿಧ್ವಂಸಕ ಕೃತ್ಯ ಎಸಗುವ ಸಾಧ್ಯತೆಯಿರುವುದರಿಂದ ಜನರು ಸಮಾವೇಶಗೊಳ್ಳುವುದನ್ನು ನಿರ್ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

ಶುಕ್ರವಾರದ ಪ್ರಾರ್ಥನೆ ಬಳಿಕ ಹಿಂಸಾಚಾರಕ್ಕೆ ಸಾಕ್ಷಿಯಾಗಿದ್ದ ಪಶ್ಚಿಮ ಬಂಗಾಳದ ಹೌರಾದಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದೆ. ಆದರೂ, ಹಿಂಸಾಪೀಡಿತ ಪ್ರದೇಶಕ್ಕೆ ತೆರಳಲು ಮುಂದಾದ ಪ್ರತಿಪಕ್ಷ ನಾಯಕ ಸುವೇಂದು ಅಧಿಕಾರಿ ಅವರನ್ನು ಪೊಲೀಸರು ತಡೆದಿದ್ದಾರೆ. ತಾವು ಹೌರಾಗೆ ತೆರಳುವ ಉದ್ದೇಶ ಹೊಂದಿರಲಿಲ್ಲ ಎಂದು ಅಧಿಕಾರಿ ಹೇಳಿದ್ದಾರೆ. ಈ ಕಾರಣಕ್ಕೆ ಅವರು ಪೊಲೀಸರ ಜೊತೆ ವಾಗ್ವಾದ ನಡೆಸಿದರು.

ಶುಕ್ರವಾರ ನಡೆದ ಹಿಂಸಾತ್ಮಕ ಪ್ರತಿಭಟನೆಗೆ ಸಾಕ್ಷಿಯಾಗಿದ್ದ ರಾಂಚಿಯಲ್ಲಿ ಭಾನುವಾರವೂ ಬಿಗುವಿನ ವಾತಾವರಣ ಇತ್ತು. ನಗರದಲ್ಲಿ ಪೊಲೀಸ್ ಭದ್ರತೆಯನ್ನು ಇನ್ನಷ್ಟು ಹೆಚ್ಚಿಸಲಾಗಿದೆ. ಹಿಂಸೆಯಲ್ಲಿ ತೊಡಗಿದ್ದ ಸಾವಿರಾರು ಜನರ ವಿರುದ್ಧ 25 ಎಫ್‌ಐಆರ್ ದಾಖಲಾಗಿವೆ. ನಗರದಲ್ಲಿ 33 ಗಂಟೆಗಳ ಬಳಿಕ ಇಂಟರ್‌ನೆಟ್ ಸೇವೆ ಪುನರಾರಂಭಿಸಲಾಗಿದೆ.


ನೂಪುರ್ ಶರ್ಮಾ ಬಂಧನಕ್ಕೆ ಆಗ್ರಹಿಸಿ ಅಹಮದಾಬಾದ್‌ನಲ್ಲಿ ಭಾನುವಾರ ಪ್ರತಿಭಟನೆ ನಡೆಸುತ್ತಿದ್ದ ಜನರನ್ನು ಪೊಲೀಸರು ಚದುರಿಸಿದರು–ಪಿಟಿಐ ಚಿತ್ರ

ಎಲ್ಲೆಲ್ಲಿ ಏನೇನಾಯ್ತು..?

- ನೂಪುರ್ ಶರ್ಮಾ ಅವರು ಹೇಳಿಕೆ ದಾಖಲಿಸಲು ಸೋಮವಾರ ಹಾಜರಾಗುವಂತೆ ಮಹಾರಾಷ್ಟ್ರದ ಭಿವಂಡಿ ಪೊಲೀಸರು ಸಮನ್ಸ್ ನೀಡಿದ್ದಾರೆ. ನವೀನ್ ಜಿಂದಾಲ್ ಅವರಿಗೆ ಇದೇ 15ರಂದು ಹಾಜರಾಗಲು ಸೂಚಿಸಲಾಗಿದೆ
- ರಾಂಚಿಯಲ್ಲಿ ಶುಕ್ರವಾರ ನಡೆದ ಹಿಂಸಾತ್ಮಕ ಪ್ರತಿಭಟನೆ ವೇಳೆ ಗುಂಡೇಟಿನಿಂದ ಮೃತಪಟ್ಟ ಇಬ್ಬರು ವ್ಯಕ್ತಿಗಳು ಪ್ರತಿಭಟನೆಯಲ್ಲಿ ಭಾಗಿಯಾಗಿರಲಿಲ್ಲ ಎಂದು ಅವರ ಕುಟುಂಬದವರು ಭಾನುವಾರ ಹೇಳಿದ್ದಾರೆ
- ಪ್ರತಿಭಟನೆ ಹಾಗೂ ಹಿಂಸಾಚಾರ ಘಟನೆಗಳ ಸಂಬಂಧ ಉತ್ತರ ಪ್ರದೇಶದ 8 ಜಿಲ್ಲೆಗಳಲ್ಲಿ ಒಟ್ಟು 316 ಜನರನ್ನು ಪೊಲೀಸರು ಬಂಧಿಸಿದ್ದಾರೆ. 13 ಪ್ರಕರಣಗಳು ದಾಖಲಾಗಿವೆ
- ನೂಪುರ್ ಶರ್ಮಾ ಅವರನ್ನು ಶ್ಲಾಘಿಸಿ, ಪ್ರವಾದಿ ಮಹಮ್ಮದ್ ಅವರ ಬಗ್ಗೆ ಅವಹೇಳನಕಾರಿ ಬರಹ ಪೋಸ್ಟ್ ಮಾಡಿದ ಆರೋಪದ ಮೇಲೆ ಮಹಾರಾಷ್ಟ್ರದ ಭಿವಂಡಿ ನಗರದ 19 ವರ್ಷದ ಮುಸ್ಲಿಂ ಯುವಕನನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ
- ನೂಪುರ್ ಶರ್ಮಾ ವಿರುದ್ಧ ಅಸಭ್ಯ ಪೋಸ್ಟ್ ಹಾಕಿದ ಉತ್ತರ ಪ್ರದೇಶದ ರೇವತಿ ಪಟ್ಟಣದ ನಿವಾಸಿ ಯಾಕೂಬ್ ಅನ್ಸಾರಿ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ
- ನೂಪುರ್ ಶರ್ಮಾ ಹಾಗೂ ಇತರರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ವಕೀಲ ಮಹಮ್ಮದ್ ಅಶ್ರಫ್ ಭಟ್ ಅವರು ಶ್ರೀನಗರದ ಕೋರ್ಟ್‌ನಲ್ಲಿ ದೂರು ದಾಖಲಿಸಿದ್ದಾರೆ; ವಕೀಲ ಅಬು ಸುಹೇಲ್ ಎಂಬುವರು ನೂಪುರ್ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಪಶ್ಚಿಮ ಬಂಗಾಳದ ಕೊಂತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ
- ಕಳೆದ ವಾರ ದೆಹಲಿಯ ಜಾಮಾ ಮಸೀದಿ ಪ್ರದೇಶದಲ್ಲಿ ನಡೆದ ಪ್ರತಿಭಟನೆ ವೇಳೆ ಶಾಂತಿ ಕದಡಲು ಯತ್ನಿಸಿದ ಆರೋಪದ ಮೇಲೆ ಇಬ್ಬರು ವ್ಯಕ್ತಿಗಳನ್ನು ಬಂಧಿಸಲಾಗಿದೆ
- ಪ್ರವಾದಿ ಮಹಮ್ಮದ್ ಬಗೆಗಿನ ಹೇಳಿಕೆ ಖಂಡಿಸಿ ಜಮ್ಮುವಿನಲ್ಲಿ ಭಾನುವಾರ ಶಾಂತಿಯುತ ಪ್ರತಿಭಟನೆ ನಡೆಯಿತು

ಸೋನಿಯಾ ಆಸ್ಪತ್ರೆಗೆ ದಾಖಲು



ನವದೆಹಲಿ (ಪಿಟಿಐ): 'ಕೋವಿಡ್ ಸಂಬಂಧಿ ಸಮಸ್ಯೆಗಳ ಕಾರಣದಿಂದಾಗಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಭಾನುವಾರ ದೆಹಲಿಯ ಗಂಗಾರಾಮ್ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಪಕ್ಷದ ಮುಖ್ಯ ವಕ್ತಾರ ರಣದೀಪ್ ಸುರ್ಜೆವಾಲಾ ತಿಳಿಸಿದ್ದಾರೆ.

'ಸೋನಿಯಾ ಅವರ ಆರೋಗ್ಯ ಸ್ಥಿರವಾಗಿದ್ದು, ಕೆಲವು ದಿನಗಳ ಕಾಲ ಆಸ್ಪತ್ರೆಯಲ್ಲೇ ಇರಲಿದ್ದಾರೆ. ಅವರ ಆರೋಗ್ಯದ ಮೇಲೆ ನಿಗಾ ವಹಿಸಲಾಗುತ್ತಿದೆ' ಎಂದು ಸುರ್ಜೆವಾಲಾ ಟ್ವೀಟ್ ಮಾಡಿದ್ದಾರೆ. ಜೂನ್ 2ರಂದು ಸೋನಿಯಾ ಅವರಿಗೆ ಕೋವಿಡ್ ದೃಢಪಟ್ಟಿತ್ತು.

'ನ್ಯಾಷನಲ್ ಹೆರಾಲ್ಡ್' ಪತ್ರಿಕೆಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜೂನ್ 8ರಂದು ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯವು (ಇ.ಡಿ) ಸೋನಿಯಾ ಅವರಿಗೆ ಸಮನ್ಸ್ ಜಾರಿ ಮಾಡಿತ್ತು.

ಆದರೆ, ಕೋವಿಡ್ ಕಾರಣ ಹಾಜರಾತಿಗೆ ಮತ್ತೊಂದು ದಿನ ನಿಗದಿಪಡಿಸುವಂತೆ ಅವರು ಕೋರಿದ್ದರು. ಹಾಗಾಗಿ, ಜೂನ್ 23ರಂದು ವಿಚಾರಣೆಗೆ ಹಾಜರಾಗುವಂತೆ ಇ.ಡಿ ಹೊಸ ಸಮನ್ಸ್ ಜಾರಿ ಮಾಡಿದೆ.

‘2025ರ ವೇಳೆಗೆ ಭಾರತ ಹಿಂದೂ ರಾಷ್ಟ್ರ’

ಪ್ರಜಾವಾಣಿ ವಾರ್ತೆ

ಪಣಜಿ: ದಕ್ಷಿಣ ಗೋವಾದ ದೇವಾಲಯ ಪಟ್ಟಣ ಪೋಂಡಾದಲ್ಲಿ ಭಾನುವಾರ ಉದ್ಘಾಟನೆಗೊಂಡ ಅಖಿಲ ಭಾರತೀಯ ಹಿಂದೂ ರಾಷ್ಟ್ರ ಅಧಿವೇಶನವು ಹಿಂದೂ ರಾಷ್ಟ್ರದ ರಚನೆಯ ಬೇಡಿಕೆಗೆ ಸಾಕ್ಷಿಯಾಯಿತು.

ಈ ಬೇಡಿಕೆ ಸಮಂಜಸವಾಗಿರುವುದರಿಂದ ಭಾರತದ ಸಂವಿಧಾನ ಅಡಿ ಅನುಮತಿ ನೀಡಲಾಗಿದೆ. 2025 ರ ವೇಳೆಗೆ ಭಾರತವು ಹಿಂದೂ ರಾಷ್ಟ್ರವಾಗಲಿದೆ ಎಂದು ಹಿಂದೂ ಜನಜಾಗೃತಿ ಸಮಿತಿಯ ಸಂಘಟಕ ಡಾ.ಚಾರುದತ್ತ ಪಿಂಗಳೆ ಪ್ರತಿಪಾದಿಸಿದರು.

ಅಧಿವೇಶನ 7 ದಿನಗಳವರೆಗೆ ನಡೆಯಲಿದ್ದು ದೇಶದಾದ್ಯಂತ ಸುಮಾರು 350 ಹಿಂದೂ ಸಂಘಟನೆಗಳಿಂದ ಸಾವಿರಕ್ಕೂ ಹೆಚ್ಚು ಜನರು ಹಾಗೂ ಯುಎಸ್‌ಎ, ಯುಕೆ, ಹಾಂಗ್ ಕಾಂಗ್, ಸಿಂಗಾಪುರ, ನೇಪಾಳದಿಂದ ಕಾರ್ಯಕ್ರಮಕ್ಕೆ ಹಾಜರಾಗಲಿದ್ದಾರೆ. ಜ್ಞಾನವಾಪಿ ಮಸೀದಿ ವಿಷಯಗಳು, ಪೂಜಾ ಸ್ಥಳಗಳ ಕಾಯಿದೆ, ಕಾಶ್ಮೀರಿ ಹಿಂದೂಗಳು, ಮಸೀದಿಗಳಲ್ಲಿ ಧ್ವನಿವರ್ಧಕಗಳಿಂದ ಉಂಟಾಗುವ ಶಬ್ದ ಮಾಲಿನ್ಯ, ಹಿಜಾಬ್ ಆಂದೋಲನದ ಬಗ್ಗೆ ಚರ್ಚಿಸಲಾಗುವುದು ಎನ್ನಲಾಗಿದೆ.

'ಧಾರ್ಮಿಕ ಮತಾಂಧರು ನಡೆಸಿದ ಹಿಂಸಾಚಾರ ಪರಿಗಣಿಸಿ, ಇಡೀ ಆಡಳಿತ ವ್ಯವಸ್ಥೆ ಹಿಂದೂಗಳ ಹಿತಾಸಕ್ತಿಯಲ್ಲಿ ಉಳಿಯುವವರೆಗೆ ಹಿಂದೂ ರಾಷ್ಟ್ರಕ್ಕಾಗಿ ಹೋರಾಡಬೇಕಾಗುತ್ತದೆ' ಎಂದು ಪಿಂಗಳೆ ಹೇಳಿದರು.

ರಾಷ್ಟ್ರಪತಿ ಚುನಾವಣೆ ಬಿಜೆಪಿ ಸಮಾಲೋಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರಪತಿ ಚುನಾವಣೆಗೆ ನಾಮಪತ್ರ ಸಲ್ಲಿಕೆಗೆ ಮೂರು ದಿನಗಳು ಬಾಕಿ ಉಳಿದಿದ್ದು, ಒಮ್ಮತದ ಅಭ್ಯರ್ಥಿಯ ಆಯ್ಕೆ ನಿಟ್ಟಿನಲ್ಲಿ ವಿರೋಧ ಪಕ್ಷಗಳು ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಜೊತೆ ಸಮಾಲೋಚನೆಗಾಗಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಬಿಜೆಪಿ ನಿಯುಕ್ತಿಗೊಳಿಸಿದೆ.

2017ರ ರಾಷ್ಟ್ರಪತಿ ಚುನಾವಣೆಯಲ್ಲಿ ಬಿಜೆಪಿಯು ಅಭ್ಯರ್ಥಿಯ ಆಯ್ಕೆ ಬಗ್ಗೆ ಸರ್ವಾನುಮತ ರೂಪಿಸಲು ಬಯಸಲಿಲ್ಲ ಎನ್ನುವ ಆರೋಪಕ್ಕೊಳಗಾಗಿತ್ತು. ಹಾಗಾಗಿ, ಆಗ ಪ್ರತಿಪಕ್ಷಗಳೊಂದಿಗೆ ಸ್ಪರ್ಧೆಯನ್ನು ಎದುರಿಸಿತ್ತು. ಆದರೆ, ಈ ಬಾರಿ ಬಿಜೆಪಿಯು ತನ್ನ ಅಭ್ಯರ್ಥಿಯ ಹೆಸರು ಘೋಷಿಸುವ ಮುನ್ನವೇ ವಿರೋಧ ಪಕ್ಷ ಸೇರಿದಂತೆ ಇತರ ಪಕ್ಷಗಳ ನಾಯಕರ ಭೇಟಿಗೆ ಮುಂದಾಗಿದೆ.

ವೈಎಸ್‌ಆರ್‌ಸಿ ಮತ್ತು ಬಿಜೆಡಿಯಂತಹ ಪಕ್ಷಗಳು ಇನ್ನೂ ತಮ್ಮ ನಿಲುವನ್ನು ಸ್ಪಷ್ಟಪಡಿಸದ ಕಾರಣ ಸಮಾಲೋಚನಾ ಕ್ರಮವು ಮಹತ್ವದ್ದಾಗಿದೆ. ಆದರೆ, ಎನ್‌ಡಿಎಯ ಮಿತ್ರಪಕ್ಷ ಜೆಡಿಯು ಹಿಂದೆ (2012) ತಾನು ಭಾಗವಾಗಿದ್ದ ಮೈತ್ರಿ ಅಭ್ಯರ್ಥಿಯ ವಿರುದ್ಧ ಮತ ಚಲಾಯಿಸಿದ ದಾಖಲೆಯನ್ನು ಹೊಂದಿದೆ. 2017ರ ರಾಷ್ಟ್ರಪತಿ ಚುನಾವಣೆಗೆ ಪೂರ್ವಭಾವಿಯಾಗಿ, ರಾಜನಾಥ್ ಸಿಂಗ್ ಮತ್ತು ಆಗಿನ ಕೇಂದ್ರ ಸಚಿವ ಎಂ. ವೆಂಕಯ್ಯ ನಾಯ್ಡು ಅವರು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಭೇಟಿಯಾಗಿ ಅಭ್ಯರ್ಥಿ ಹೆಸರನ್ನು ಸೂಚಿಸುವಂತೆ ಕೇಳಿದ್ದರು. ಆದರೆ, ಅಂತಿಮವಾಗಿ ಎನ್‌ಡಿಎ ಅಭ್ಯರ್ಥಿ ರಾಮನಾಥ ಕೋವಿಂದ್ ಮತ್ತು ಪ್ರತಿಪಕ್ಷದ ಮೀರಾ ಕುಮಾರ್ ಅವರ ನಡುವೆ ಸ್ಪರ್ಧೆ ಏರ್ಪಟ್ಟಿತ್ತು. ಈ ಸಂದರ್ಭದಲ್ಲಿ ಬಿಹಾರದಲ್ಲಿ ಪ್ರತಿಪಕ್ಷಗಳ ಮಹಾಮೈತ್ರಿಕೂಟದ ಪಕ್ಷವಾಗಿದ್ದ ನಿತೀಶ್ ಕುಮಾರ್ ಅವರ ಜೆಡಿಯು, ಕೋವಿಂದ್ ಅವರ ಉಮೇದುವಾರಿಕೆಯನ್ನು ಬೆಂಬಲಿಸಿತ್ತು. ಈ ಬಾರಿಯೂ ಪ್ರತಿಪಕ್ಷಗಳು ಪ್ರತ್ಯೇಕ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಸ್ಪಷ್ಟ ಸೂಚನೆಗಳಿವೆ. ಸಂಸತ್ತಿನಲ್ಲಿ ಬಿಜೆಪಿ ತನಗೆ ಸಹಾಯ ಮಾಡಿದ ಬಿಜೆಡಿ ಮತ್ತು ವೈಎಸ್‌ಆರ್ ಕಾಂಗ್ರೆಸ್‌ನಂಥ ಹಲವು ವಿರೋಧ ಪಕ್ಷಗಳ ಬೆಂಬಲ ಪಡೆಯುವ ಸಾಧ್ಯತೆ ಇದೆ.

ಮುಕ್ತ ಚರ್ಚೆಗೆ ‘ಕೈ’ ಆಹ್ವಾನ

ನವದೆಹಲಿ: ರಾಷ್ಟ್ರಪತಿ ಚುನಾವಣೆಗೆ ಜಂಟಿ ಕಾರ್ಯತಂತ್ರ ರೂಪಿಸಲು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಇದೇ 15ರಂದು ನವದೆಹಲಿಯಲ್ಲಿ ಪ್ರತಿಪಕ್ಷಗಳ 22 ನಾಯಕರ ಸಭೆ ಕರೆದ ಬೆನ್ನಲ್ಲೇ, ಕಾಂಗ್ರೆಸ್ ಕೂಡಾ, ಭಿನ್ನಾಭಿಪ್ರಾಯ ತೊರೆದು ಮುಕ್ತ ಮನಸಿನಿಂದ ಚರ್ಚೆಗೆ ಬರುವಂತೆ ಪ್ರತಿಪಕ್ಷಗಳನ್ನು ಆಹ್ವಾನಿಸಿದೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಜೂನ್ 9ರಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಮತ್ತು ಮಮತಾ ಸೇರಿದಂತೆ ಇತರ ನಾಯಕರನ್ನು ಸಂಪರ್ಕಿಸಿದ್ದಾರೆ. ಆದರೆ, ಅವರ ಅನಾರೋಗ್ಯದ ಕಾರಣ ಇತರ ನಾಯಕರೊಂದಿಗೆ ಸಮನ್ವಯ ಸಾಧಿಸಲು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ನಿಯೋಜಿಸಿದ್ದಾರೆ ಎಂದು ಪಕ್ಷವು ಹೇಳಿದೆ.

'ನಮ್ಮ ದೇಶದ ಸಲುವಾಗಿ ನಮ್ಮ ಭಿನ್ನಾಭಿಪ್ರಾಯಗಳನ್ನು ಮೀರಿ ಒಗ್ಗೂಡುವ ಪಕ್ವ ಸಮಯ ಇದಾಗಿದೆ. ಇದಕ್ಕೆ ಮುಕ್ತ ಮನಸಿನ ಚರ್ಚೆಗಳೂ ಅಗತ್ಯವಾಗಿವೆ' ಎಂದೂ ಕಾಂಗ್ರೆಸ್ ಹೇಳಿದೆ.

ಇ.ಡಿ. ಮುಂದೆ ಇಂದು ರಾಹುಲ್ ಹಾಜರು

ನವದೆಹಲಿ(ಪಿಟಿಐ): ನ್ಯಾಷನಲ್ ಹೆರಾಲ್ಡ್ ಪ್ರಕರಣದ ವಿಚಾರಣೆಗೆ ಸಂಬಂಧಿಸಿದಂತೆ ಕಾಂಗ್ರೆಸ್‌ನ ನಾಯಕ ರಾಹುಲ್ ಗಾಂಧಿ ಅವರು ಸೋಮವಾರ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಹಾಜರಾಗಲಿದ್ದಾರೆ. ಜೊತೆಗೆ ಈ ವಿಷಯವನ್ನು ರಾಜಕೀಯ ಸಮರವಾಗಿ ಬಿಂಬಿಸಲು, ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರು ರಾಹುಲ್ ಅವರೊಂದಿಗೆ ಇ.ಡಿ ಕಚೇರಿಯವರೆಗೂ ಜಾಥಾ ಹೊರಡಲಿದ್ದಾರೆ.

ಇದೇ ವೇಳೆ, ನರೇಂದ್ರ ಮೋದಿ ಸರ್ಕಾರವು ಕೇಂದ್ರದ ತನಿಖಾ ಸಂಸ್ಥೆಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ಎಲ್ಲ ರಾಜ್ಯಗಳ ಇ.ಡಿ ಕಚೇರಿಗಳ ಮುಂದೆ ಸತ್ಯಾಗ್ರಹ ನಡೆಸಲಿದ್ದಾರೆ.

ಐವರು ಉಗ್ರರು ಬಲಿ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದ ಪ್ರತ್ಯೇಕ ಎನ್‌ಕೌಂಟರ್‌ಗಳಲ್ಲಿ ಲಷ್ಕರ್–ಎ–ತೈಯಬಾ ಉಗ್ರ ಸಂಘಟನೆಗೆ ಸೇರಿದ ಐವರು ಭಯೋತ್ಪಾದಕರು ಹತರಾಗಿದ್ದಾರೆ.

ಕಳೆದ 24 ಗಂಟೆಗಳಲ್ಲಿ ಮೂರು ಪ್ರತ್ಯೇಕ ಎನ್‌ಕೌಂಟರ್‌ಗಳಾಗಿದ್ದು, ಭಾನುವಾರ ಬೆಳಿಗ್ಗೆ ನಡೆಸಿದ ಕಾರ್ಯಾಚರಣೆಯಲ್ಲಿ ಕ್ರೀಸ್ಬಲ್ ಪಲ್ಪೊರಾ ಸಂಗಮ್ ಪ್ರದೇಶದ ನಿವಾಸಿ ಅದಿಲ್ ಪಾರೆ ಎಂಬ ಎಲ್‌ಇಟಿ ಭಯೋತ್ಪಾದಕನನ್ನು ಪೊಲೀಸರು ಹತ್ಯೆ ಮಾಡಿದ್ದಾರೆ. ಕಳೆದ ತಿಂಗಳು ಜಿ.ಎಚ್. ಹಸನ್ ದಾರ್ ಮತ್ತು ಸೈಫುಲ್ಲ ಖಾದ್ರಿ ಎಂಬ ಇಬ್ಬರು ಪೊಲೀಸರ ಸಾವಿಗೆ ಕಾರಣವಾಗಿದ್ದ ವ್ಯಕ್ತಿಯೇ ಈ ಪಾರೆ.

ಪುಲ್ವಾಮಾದಲ್ಲಿ ಶನಿವಾರ ತಡ ರಾತ್ರಿ ಕಾರ್ಯಾಚರಣೆಯಲ್ಲಿ ಮೂವರು ಉಗ್ರರು ಹತರಾಗಿದ್ದಾರೆ.

ಸಂಕ್ಷಿಪ್ತ ಸುದ್ದಿ

ಫ್ಯಾಷನ್ ಡಿಸೈನರ್ ಪ್ರತ್ಯುಷಾ ಸಾವು

ಹೈದರಾಬಾದ್: ಖ್ಯಾತ ಫ್ಯಾಷನ್ ಡಿಸೈನರ್‌ಗಳಲ್ಲಿ ಒಬ್ಬರಾಗಿದ್ದ ಪ್ರತ್ಯುಷಾ ಗರಿಮೆಲ್ಲಾ ಇಲ್ಲಿನ ಬಂಜಾರಾ ಹಿಲ್ಸ್‌ನಲ್ಲಿರುವ ತಮ್ಮ ನಿವಾಸದಲ್ಲಿ ಶವವಾಗಿ ಪತ್ತೆಯಾಗಿದ್ದಾರೆ.



'ಪ್ರತ್ಯುಷಾ ಅವರು ಶನಿವಾರ ಕಾರ್ಬನ್ ಮೊನಾಕ್ಸೈಡ್ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರಬಹುದು' ಎಂದು ಪೊಲೀಸರು ಶಂಕಿಸಿದ್ದಾರೆ. ಅನುಮಾನಾಸ್ಪದ ಸಾವು ಪ್ರಕರಣದಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. 36 ವರ್ಷದ ಪ್ರತ್ಯುಷಾ ಅವರು ಹಿಂದಿ ಹಾಗೂ ತೆಲುಗು ಚಿತ್ರರಂಗದ ಸೆಲೆಬ್ರಿಟಿಗಳಿಗೆ ಫ್ಯಾಷನ್ ಡಿಸೈನರ್ ಆಗಿ ಕೆಲಸ ಮಾಡುತ್ತಿದ್ದರು. ದೇಶದ ಪ್ರಮುಖ 30 ಫ್ಯಾಷನ್ ಡಿಸೈನರ್‌ಗಳಲ್ಲಿ ಇವರು ಕೂಡ ಒಬ್ಬರಾಗಿದ್ದರು. 'ಅವರು ಬರೆದಿದ್ದು ಎನ್ನಲಾದ ಡೆತ್‌ನೋಟ್ ಸಿಕ್ಕಿದೆ. ನನ್ನ ಈ ನಿರ್ಧಾರಕ್ಕೆ ಯಾರೂ ಕಾರಣರಲ್ಲ. ನನಗೆ ಒಂಟಿತನ ಕಾಡುತ್ತಿತ್ತು, ಒತ್ತಡಕ್ಕೆ ಒಳಗಾಗಿದ್ದೆ. ಹೀಗಾಗಿ ಪಾಲಕರಿಗೆ ಹೊರೆಯಾಗಲು ಬಯಸುವುದಿಲ್ಲ' ಎಂಬುದಾಗಿ ಬರೆದಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ

ರಾಣಿ 2ನೇ ಎಲಿಜಬೆತ್ ದಾಖಲೆ

ಲಂಡನ್ (ಪಿಟಿಐ): ಜಗತ್ತಿನಲ್ಲೇ ಅತ್ಯಂತ ಸುದೀರ್ಘ ಆಳ್ವಿಕೆ ನಡೆಸಿದ ಎರಡನೇ ರಾಜ ವಂಶಸ್ಥೆಯಾಗಿ ಬ್ರಿಟನ್ ರಾಣಿ 2ನೇ ಎಲಿಜಬೆತ್ ದಾಖಲೆ ನಿರ್ಮಿಸಿದ್ದಾರೆ.

ಫ್ರಾನ್ಸ್‌ನ 14ನೇ ಲೂಯಿಸ್ 1643 ರಿಂದ 1715ರ ವರೆಗೆ ಒಟ್ಟು 72 ವರ್ಷ 110 ದಿನಗಳ ಕಾಲ ಆಳ್ವಿಕೆ ನಡೆಸಿ, ಜಗತ್ತಿನಲ್ಲಿ ಸುದೀರ್ಘವಾಗಿ ಆಳ್ವಿಕೆ ನಡೆಸಿದ ಮೊದಲ ರಾಜ ಎಂಬ ಹೆಸರಿಗೆ ಪಾತ್ರರಾಗಿದ್ದಾರೆ. ಸುದೀರ್ಘ ಅವಧಿಗೆ ಸಿಂಹಾಸನದಲ್ಲಿದ್ದ 2ನೇ ರಾಜನ ದಾಖಲೆ ಇದುವರೆಗೆ ಥಾಯ್ಲೆಂಡ್‌ನ ರಾಜ ಭುಮಿಬೋಲ್ ಅದುಲ್ಯದೇಜ್ ಅವರ ಹೆಸರಲ್ಲಿತ್ತು. ಇದೀಗ 96 ವರ್ಷದ ಬ್ರಿಟನ್‌ನ ರಾಣಿ ಈ ದಾಖಲೆ ಮುರಿದಿದ್ದಾರೆ. 1953ರಲ್ಲಿ ಬ್ರಿಟನ್ ರಾಣಿಯಾಗಿ ಪಟ್ಟಕ್ಕೇರಿದ್ದ 2ನೇ ಎಲಿಜಬೆತ್ 2015ರಲ್ಲಿ ತಮ್ಮ ಅಜ್ಜಿ ವಿಕ್ಟೋರಿಯಾ ಅವರ ಹೆಸರಲ್ಲಿದ್ದ ದಾಖಲೆಯನ್ನು ಮುರಿದು, ಬ್ರಿಟನ್ ರಾಜಮನೆತನದ ದೀರ್ಘಾವಧಿಯ ರಾಣಿ ಎನಿಸಿಕೊಂಡಿದ್ದಾರೆ.

ಸಕ್ರಿಯ ಪ್ರಕರಣ 44,513ಕ್ಕೆ ಏರಿಕೆ

ನವದೆಹಲಿ: ಸೋಮವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡಂತೆ ದೇಶದಲ್ಲಿ 24 ಗಂಟೆಗಳ ಅಂತರದಲ್ಲಿ ಕೋವಿಡ್–19 ದೃಢಪಟ್ಟ 8,582 ಹೊಸ ಪ್ರಕರಣಗಳು ದಾಖಲಾಗಿವೆ. ಈ ಮೂಲಕ ಸಕ್ರಿಯ ಪ್ರಕರಣಗಳ ಸಂಖ್ಯೆ 44,513ಕ್ಕೆ ಏರಿಕೆಯಾಗಿರುವುದು ಕೇಂದ್ರ ಆರೋಗ್ಯ ಸಚಿವಾಲಯದ ಮಾಹಿತಿಯಿಂದ ತಿಳಿದು ಬಂದಿದೆ. ಈ ಅವಧಿಯಲ್ಲಿ ಸೋಂಕಿನಿಂದ ನಾಲ್ವರು ಮೃತಪಟ್ಟಿದ್ದಾರೆ.

ಶ್ರೀಲಂಕಾದಲ್ಲಿ ಇಂಧನ ಪಡಿತರ

ಕೊಲಂಬೊ (ಎಎಫ್‌ಪಿ): ವಿದೇಶಿ ವಿನಿಮಯದ ಬಿಕ್ಕಟ್ಟಿನಿಂದ ತೈಲ ಕೊರತೆ ಎದುರಿಸುತ್ತಿರುವ ಶ್ರೀಲಂಕಾ ಸರ್ಕಾರ, ವಾರಕ್ಕೆ ಇಂತಿಷ್ಟೇ ಎಂಬ ಪಡಿತರ ವ್ಯವಸ್ಥೆಯೊಂದಿಗೆ ಇಂಧನವನ್ನು ಗ್ರಾಹಕರಿಗೆ ಒದಗಿಸಲು ಮುಂದಾಗಿದೆ.

ಜುಲೈ ಮೊದಲ ವಾರದಿಂದ ಇದು ಜಾರಿಗೆ ಬರಲಿದೆ. ವಾಹನಗಳ ಮಾಲೀಕರಿಗೆ ವಾರಕ್ಕೆ ಎಷ್ಟು ಪ್ರಮಾಣದ ಇಂಧನ ಖರೀದಿಗೆ ಅವಕಾಶ ನೀಡಲಾಗುತ್ತದೆ ಎಂಬ ಮಾಹಿತಿಯನ್ನು ಸರ್ಕಾರ ಬಹಿರಂಗಪಡಿಸಿಲ್ಲ.

ಪಾಪ್ ಗಾಯಕ ಜಸ್ಟಿನ್ ಬೀಬರ್‌ಗೆ ಮುಖದ ಪಾರ್ಶ್ವವಾಯು

ಲಾಸ್ ಏಂಜಲೀಸ್ (ಎಪಿ): ಖ್ಯಾತ ಪಾಪ್ ಗಾಯಕ ಜಸ್ಟಿನ್ ಬೀಬರ್ (25) ಮುಖದ ಪಾರ್ಶ್ವವಾಯುವಿಗೆ ಒಳಗಾಗಿದ್ದಾರೆ.

ಸ್ವತಃ ಜಸ್ಟಿನ್ ಬೀಬರ್ ಅವರೇ ಈ ವಿಷಯವನ್ನು ಇನ್‌ಸ್ಟಾಗ್ರಾಂನಲ್ಲಿ ಬಹಿರಂಗಪಡಿಸಿದ್ದಾರೆ. 'ನನಗೆ ರಾಮ್‌ಸೆ ಹಂಟ್ ಸಿಂಡ್ರೋಮ್ ವೈರಸ್ ಸೋಂಕು ತಗುಲಿದ್ದು, ಇದರಿಂದ ನನ್ನ ಮುಖದ ಬಲಭಾಗ ಪಾರ್ಶ್ವವಾಯು ವಿಗೆ ತುತ್ತಾಗಿದೆ. ಈ ವೈರಸ್ ಮುಖದ ಹಾಗೂ ಕಿವಿಯ ನರಗಳ ಮೇಲೆ ಪರಿಣಾಮ ಬೀರುತ್ತದೆ' ಎಂದಿದ್ದಾರೆ.

ಆರೋಪಿಯ ಮನೆ ನೆಲಸಮ

ಒಂದನೇ ಪುಟದಿಂದ

ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾಕ್ಕೆ ಸಂಬಂಧಿಸಿದ ಸಾಹಿತ್ಯ, ಬಾವುಟ ಸೇರಿ 'ಆಕ್ಷೇಪಾರ್ಹ'ವಾದ ಕೆಲವು ವಸ್ತುಗಳು ಜಾವೇದ್ ಮನೆಯಲ್ಲಿ ಸಿಕ್ಕಿವೆ ಎಂದು ಪೊಲೀಸರು ಹೇಳಿದ್ದಾರೆ.

ಕಾನ್ಪುರ ಮತ್ತು ಸಹಾರನ್‌ಪುರದಲ್ಲಿ ಕೂಡ ಪ್ರತಿಭಟನಕಾರರಲ್ಲಿ ಕೆಲವರ ಮನೆಗಳನ್ನು ಧ್ವಂಸ ಮಾಡಲಾಗಿದೆ ಎಂದು ಮೂಲಗಳು ಹೇಳಿವೆ. 'ಸಿ.ಸಿ.ಟಿ.ವಿ ಕ್ಯಾಮರಾ ದೃಶ್ಯಗಳ ಆಧಾರದಲ್ಲಿ ಪ್ರತಿಭಟನಕಾರರನ್ನು ಗುರುತಿಸಲು ಪ್ರಯತ್ನಿಸಲಾಗುತ್ತಿದೆ. ಪ್ರತಿಭಟನಕಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶುಕ್ರವಾರ ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆ ನಡೆದ ಪ್ರಯಾಗರಾಜ್, ಸಹಾರನ್‌ಪುರ, ಮೊರಾದಾಬಾದ್, ಹಾಥರಸ್, ಕಾನ್ಪುರ ಮತ್ತು ಇತರ ಸ್ಥಳಗಳಲ್ಲಿ ಇನ್ನಷ್ಟು ಮನೆಗಳನ್ನು ಉರುಳಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ. 'ಗಲಭೆಕೋರ'ರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯ ನಾಥ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಖೇಲೊ ಇಂಡಿಯಾ ಯೂತ್ ಕ್ರೀಡಾಕೂಟ: ಸಂಭವ್, ವಿಹಿತಾಗೆ ಬೆಳ್ಳಿ ಪದಕ

ಚಿನ್ನಕ್ಕೆ ಕೊರಳೊಡ್ಡಿದ ಕರ್ನಾಟಕದ ಈಜುಪಟುಗಳು

ಬೆಂಗಳೂರು: ಕರ್ನಾಟಕದ ಈಜುಪಟುಗಳು ಹರಿಯಾಣದ ಪಂಚಕುಲಾದಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ಯೂತ್ ಕ್ರೀಡಾಕೂಟದಲ್ಲಿ ಭಾನುವಾರವೂ ಮಿಂಚಿದರು.

4X100 ಮೀ. ಫ್ರೀಸ್ಟೈಲ್‌ನಲ್ಲಿ ಸಂಭವ್ ಆರ್, ಉತ್ಕರ್ಷ್ ಪಾಟೀಲ್, ಧ್ಯಾನ್ ಬಾಲಕೃಷ್ಣ ಮತ್ತು ಅನೀಶ್ ಗೌಡ ಅವರಿದ್ದ ತಂಡವು ಚಿನ್ನದ ಪದಕಕ್ಕೆ ಮುತ್ತಿಟ್ಟಿತು. ಈ ಬಾಲಕರು 3 ನಿಮಿಷ 35.28 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಈ ವಿಭಾಗದಲ್ಲಿ ಮಹಾರಾಷ್ಟ್ರ ಮತ್ತು ಹರಿಯಾಣ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಜಯಿಸಿದವು.


ಸಂಭವ್ ಆರ್– ಪ್ರಜಾವಾಣಿ ಸಂಗ್ರಹ ಚಿತ್ರ

ಈಜು ಸ್ಪರ್ಧೆಯ ತಂಡ ವಿಭಾಗಗಳಲ್ಲಿ ಕರ್ನಾಟಕದ ಬಾಲಕ ಮತ್ತು ಬಾಲಕಿಯರ ತಂಡಗಳು ಅಗ್ರಸ್ಥಾನ ಗಳಿಸಿದವು. ಸಂಭವ್ ಆರ್. ಮತ್ತು ವಿಹಿತಾ ನಯನಾ ಅವರು ಬೆಳ್ಳಿ ಪದಕ ಜಯಿಸಿದರು. ಬಾಲಕರ 50 ಮೀಟರ್ ಫ್ರೀಸ್ಟೈಲ್‌ನಲ್ಲಿ ಸಂಭವ್ 24.04 ಸೆಕೆಂಡುಗಳಲ್ಲಿ ಗುರಿ ತಲುಪಿದರು. ವಿಹಿತಾ, ಬಾಲಕಿಯರ 50 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ 34.67 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. 1500 ಮೀ. ಫ್ರೀಸ್ಟೈಲ್‌ನಲ್ಲಿ ಶಿರಿನ್ (18 ನಿ. 4.49 ಸೆ.) ಬೆಳ್ಳಿ ಮತ್ತು ಅಸ್ಮಿತಾ (18 ನಿ. 29.23ಸೆ) ಕಂಚಿನ ಪದಕಗಳಿಗೆ ಮುತ್ತಿಟ್ಟರು. ಬಾಲಕರ 200 ಮೀ. ಬಟರ್‌ಫ್ಲೈನಲ್ಲಿ ಉತ್ಕರ್ಷ್ ಪಾಟೀಲ್ (2 ನಿ. 5.49 ಸೆ.), ಬಾಲಕರ ವಿಭಾಗದ ಇದೇ ಸ್ಪರ್ಧೆಯಲ್ಲಿ ಹಷಿಕಾ ರಾಮಚಂದ್ರ (2 ನಿ. 22.87 ಸೆ.) ಕಂಚು ಜಯಿಸಿದರು.

ಬಾಲಕಿಯರ 50 ಮೀ. ವಿಭಾಗದಲ್ಲಿ ರಿಧಿಮಾ ವೀರೇಂದ್ರಕುಮಾರ್ (27.92 ಸೆ.) ಮತ್ತು ಬಾಲಕರ 50 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ವಿದಿತ್ ಶಂಕರ್ (30.27 ಸೆ.) ಕೂಡ ಕಂಚಿನ ಪದಕಗಳನ್ನು ತಮ್ಮದಾಗಿಸಿಕೊಂಡರು.

ರಿದ್ಧಿ, ಕಾಪಿಶ್‌ಗೆ ಆರ್ಚರಿ ಚಿನ್ನ: ಹರಿಯಾಣದ ರಿದ್ಧಿ ಮತ್ತು ರಾಜಸ್ಥಾನದ ಕಾಪಿಶ್ ಸಿಂಗ್ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದ ರಿಕರ್ವ್ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿದರು.

ಹರಿಯಾಣ 39 ಚಿನ್ನ 35 ಬೆಳ್ಳಿ ಮತ್ತು 42 ಕಂಚಿನ ಪದಕಗಳೊಂದಿಗೆ ಪದಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿತ್ತು. 2ನೇ ಸ್ಥಾನದಲ್ಲಿರುವ ಮಹಾರಾಷ್ಟ್ರ ಬಳಿ 39 ಚಿನ್ನ, 35 ಬೆಳ್ಳಿ ಮತ್ತು 30 ಕಂಚಿನ ಪದಕಗಳಿವೆ. ಕರ್ನಾಟಕ 21 ಚಿನ್ನ, 13 ಬೆಳ್ಳಿ ಮತ್ತು 18 ಕಂಚು ಗೆದ್ದು ಮೂರನೇ ಸ್ಥಾನದಲ್ಲಿದೆ.





ಭಾರತದ ಕಳಪೆ ಬ್ಯಾಟಿಂಗ್: ಮಿಂಚಿದ ಹೆನ್ರಿಚ್ ಕ್ಲಾಸೆನ್; ಪ್ರವಾಸಿ ತಂಡಕ್ಕೆ ಎರಡನೇ ಜಯ

ಪಂತ್ ಬಳಗಕ್ಕೆ ಮತ್ತೆ ಮುಖಭಂಗ


ಹೆನ್ರಿಚ್ ಕ್ಲಾಸೆನ್ ಬ್ಯಾಟಿಂಗ್ ವೈಖರಿ– ಪಿಟಿಐ ಚಿತ್ರ

ಕಟಕ್ (ಪಿಟಿಐ): ಕಳಪೆ ಬ್ಯಾಟಿಂಗ್‌ನಿಂದಾಗಿ ಭಾರತ ತಂಡವು ದಕ್ಷಿಣ ಆಫ್ರಿಕಾ ಎದುರಿನ ಟಿ20 ಸರಣಿಯ ಎರಡನೇ ಪಂದ್ಯದಲ್ಲಿಯೂ ಮುಖಭಂಗ ಅನುಭವಿಸಿತು.

ಬಾರಾಬತಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು ಗೆದ್ದು, ಐದು ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆ ಸಾಧಿಸಿತು. ಇದೀಗ ರಿಷಭ್ ಪಂತ್ ನಾಯಕತ್ವದ ಬಳಗವು ಈ ಸರಣಿ ಕಿರೀಟ ಧರಿಸಬೇಕೆಂದರೆ ಉಳಿದ 3 ಪಂದ್ಯಗಳಲ್ಲಿಯೂ ಜಯಿಸಲೇಬೇಕಾದ ಒತ್ತಡದಲ್ಲಿದೆ.

ನವದೆಹಲಿಯಲ್ಲಿ ನಡೆದಿದ್ದ ಮೊದಲ ಪಂದ್ಯದಲ್ಲಿ ಬೌಲಿಂಗ್ ಮತ್ತು ಫೀಲ್ಡಿಂಗ್ ಲೋಪಗಳಿಂದಾಗಿ ತಂಡವು ಸೋತಿತ್ತು. ಆದರೆ ಈ ಪಂದ್ಯದಲ್ಲಿ ಪ್ರಮುಖ ಬ್ಯಾಟರ್‌ಗಳ ವೈಫಲ್ಯ ಕಾಡಿತು. ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲ ಓವರ್‌ನಲ್ಲಿಯೇ ಋತುರಾಜ್ ಗಾಯಕವಾಡ್ ವಿಕೆಟ್ ಪತನವಾಯಿತು. ಇಶಾನ್ ಕಿಶನ್ (34;21ಎ), ಶ್ರೇಯಸ್ ಅಯ್ಯರ್ (40; 35ಎ) ಮತ್ತು ಕೊನೆಯ ಹಂತದಲ್ಲಿ ದಿನೇಶ್ ಕಾರ್ತಿಕ್ (ಔಟಾಗದೆ 30) ಅವರ ಬ್ಯಾಟಿಂಗ್ ಬಲದಿಂದ ಭಾರತ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 148 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡವು 18.2 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 149 ರನ್ ಗಳಿಸಿತು. ಹೆನ್ರಿಚ್ ಕ್ಲಾಸೆನ್ (81; 46) ಅಬ್ಬರದ ಬ್ಯಾಟಿಂಗ್ ನಿಂದಾಗಿ ತಂಡದ ಗೆಲುವು ಸುಲಭವಾಯಿತು. ಮಧ್ಯಮವೇಗಿ ಭುವನೇಶ್ವರ್ ಕುಮಾರ್ (13ಕ್ಕೆ4) ಅವರ ಅಮೋಘ ಬೌಲಿಂಗ್‌ಗೆ ಗೆಲುವಿನ ಗೌರವ ಸಿಗಲಿಲ್ಲ.


ಭುವನೇಶ್ವರ್

ಪ್ರವಾಸಿ ತಂಡದಲ್ಲಿ ತೆಂಬಾ ಬವುಮಾ, ಕ್ಲಾಸೆನ್ ಮತ್ತು ಡೇವಿಡ್ ಮಿಲ್ಲರ್ ಬಿಟ್ಟರೆ ಉಳಿದ ಬ್ಯಾಟರ್‌ಗಳು ಎರಡಂಕಿ ತಲುಪಲಿಲ್ಲ. ಆದರೆ ಭುವನೇಶ್ವರ್ ರೀತಿಯಲ್ಲಿ ಉಳಿದ ಬೌಲರ್‌ಗಳಿಂದ ಪರಿಣಾಮಕಾರಿ ದಾಳಿ ಮೂಡಿಬರಲಿಲ್ಲ. ಇನ್ನೊಂದೆಡೆ ಏಕಾಂಗಿ ಹೋರಾಟ ನಡೆಸಿದ ಮಧ್ಯಮಕ್ರಮಾಂಕದ ಬ್ಯಾಟರ್ ಕ್ಲಾಸೆನ್ ಆಟಕ್ಕೆ ಜಯ ಒಲಿಯಿತು.

ಭಾರತದ ಬ್ಯಾಟಿಂಗ್‌ನಲ್ಲಿ ನಾಯಕ ರಿಷಭ್ ಪಂತ್ ಮತ್ತು ಹಾರ್ದಿಕ್ ಪಾಂಡ್ಯ ಬೇಗನೆ ನಿರ್ಗಮಿಸಿದ್ದು ರನ್ ಗಳಿಕೆಯ ವೇಗ ಕುಸಿಯಿತು. ಅಕ್ಷರ್ ಪಟೇಲ್ ಕೂಡ ನಿರೀಕ್ಷೆ ಹುಸಿಗೊಳಿಸಿದರು. 7ನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ದಿನೇಶ್ ಮಾತ್ರ ವಿಶ್ವಾಸ ಉಳಿಸಿ ಕೊಂಡರು. ಅನುಭವಿ ಬ್ಯಾಟರ್ ಎರಡು ಸಿಕ್ಸರ್ ಮತ್ತು ಎರಡು ಬೌಂಡರಿಗಳನ್ನು ದಾಖಲಿಸಿದರು. ಅವರಿಗೆ ಹರ್ಷಲ್ ಪಟೇಲ್ ಉತ್ತಮ ಜೊತೆ ನೀಡಿದರು.

ಸ್ಕೋರ್ ಕಾರ್ಡ್

ಭಾರತ 6ಕ್ಕೆ 148 (20 ಓವರ್)
ಋತುರಾಜ್ ಸಿ ಮಹಾರಾಜ್ ಬಿ ರಬಾಡ 1 (4 ಎ), ಇಶಾನ್ ಸಿ ಡಸೆನ್ ಬಿ ಎನ್ರಿಚ್ 34 (21 ಎ, 4X2, 6X3), ಶ್ರೇಯಸ್ ಸಿ ಕ್ಲಾಸೆನ್ ಬಿ ಪ್ರಿಟೋರಿಯಸ್ 40 (35 ಎ, 4X2, 6X2), ಪಂತ್ ಸಿ ಡಸೆನ್ ಬಿ ಮಹಾರಾಜ್ 5 (7 ಎ), ಹಾರ್ದಿಕ್ ಬಿ ಪಾರ್ನೆಲ್ 9 (12 ಎ, 4X1), ಅಕ್ಷರ್ ಬಿ ಎನ್ರಿಚ್ 10 (11 ಎ, 4X1), ಕಾರ್ತಿಕ್ ಔಟಾಗದೆ 30 (21 ಎ, 4X2, 6X2), ಹರ್ಷಲ್ ಔಟಾಗದೆ 12 (9 ಎ, 4X2)
ಇತರೆ (ಲೆಗ್‌ಬೈ 1, ವೈಡ್ 6) 7
ವಿಕೆಟ್ ಪತನ: 1–3 (ಋತುರಾಜ್ ಗಾಯಕ್ವಾಡ್; 0.5), 2–48 (ಇಶಾನ್ ಕಿಶನ್; 6.4), 3–68 (ರಿಷಬ್ ಪಂತ್; 9.1), 4–90 (ಹಾರ್ದಿಕ್ ಪಾಂಡ್ಯ; 12.4), 5–98 (ಶ್ರೇಯಸ್ ಅಯ್ಯರ್; 13.5), 6–112 (ಅಕ್ಷರ್ ಪಟೇಲ್; 16.6)
ಬೌಲಿಂಗ್: ಕಗಿಸೊ ರಬಾಡ 4–0–15–1, ವೇಯ್ನ್ ಪಾರ್ನೆಲ್ 4–0–23–1, ಎನ್ರಿಚ್ ನಾರ್ಕಿಯಾ 4–0–36–2, ಡ್ವೇನ್ ಪ್ರಿಟೋರಿಯಸ್ 4–0–40–1, ತಬ್ರೇಜ್ ಶಂಸಿ 2–0–21–0, ಕೇಶವ್ 2–0–12–1

ದಕ್ಷಿಣ ಆಫ್ರಿಕಾ 6ಕ್ಕೆ 149 (18.2 ಓವರ್)
ಬವುಮಾ ಬಿ ಚಾಹಲ್ 35 (30 ಎ, 4X4, 6X1), ಹೆಂಡ್ರಿಕ್ಸ್ ಬಿ ಭುವನೇಶ್ವರ್ 4 (3 ಎ, 4X1), ಡ್ವೇನ್ ಪ್ರಿಟೋರಿಯಸ್ ಸಿ ಆವೇಶ್ ಬಿ ಭುವನೇಶ್ವರ್ 4 (5 ಎ, 4X1), ಡಸೆನ್ ಬಿ ಭುವನೇಶ್ವರ್ 1 (7 ಎ), ಕ್ಲಾಸೆನ್ ಸಿ ಬಿಷ್ಣೋಯ್ (ಸಬ್) ಬಿ ಹರ್ಷಲ್ 81 (46 ಎ, 4X7, 6X5), ಮಿಲ್ಲರ್ ಔಟಾಗದೆ 20 (15 ಎ, 4X1, 6X1), ಪಾರ್ನೆಲ್ ಬಿ ಭುವನೇಶ್ವರ್ 1 (4 ಎ), ರಬಾಡ ಔಟಾಗದೆ 0
ಇತರೆ ಲೆಗ್ ಬೈ 1, ವೈಡ್ 2) 3
ವಿಕೆಟ್ ಪತನ: 11–5 (ರೀಜಾ ಹೆಂಡ್ರಿಕ್ಸ್; 0.6), 2–13 (ಡ್ವೇನ್ ಪ್ರಿಟೋರಿಯಸ್; 2.5), 3–29 (ರಸಿ ವಾನ್ ಡೆರ್ ಡಸೆನ್; 5.3), 4–93 (ಬವುಮಾ; 12.2), 5–144 (ಕ್ಲಾಸೆನ್; 16.6), 6–147 (ಪಾರ್ನೆಲ್; 17.6)
ಬೌಲಿಂಗ್: ಭುವನೇಶ್ವರ್ ಕುಮಾರ್ 4–0–13–4, ಆವೇಶ್ ಖಾನ್ 3–0–17–0, ಹಾರ್ದಿಕ್ ಪಾಂಡ್ಯ 3–0–31–0, ಯಜುವೇಂದ್ರ ಚಾಹಲ್ 4–0–49–1, ಹರ್ಷಲ್ ಪಟೇಲ್ 3–0–17–1, ಅಕ್ಷರ್ ಪಟೇಲ್ 1–0–19–0, ಶ್ರೇಯಸ್ ಅಯ್ಯರ್ 0.2–0–2–0

ಫಲಿತಾಂಶ: ದಕ್ಷಿಣ ಆಫ್ರಿಕಾಕ್ಕೆ 4 ವಿಕೆಟ್ ಜಯ

ಟಿಕೆಟ್ ಸೋಲ್ಡ್ ಔಟ್!

ಬೆಂಗಳೂರು: ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವೆ ಇದೇ 19ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಟಿ20 ಪಂದ್ಯಕ್ಕಾಗಿ ಭಾನುವಾರ ಟಿಕೆಟ್ ಮಾರಾಟ ನಡೆಯಿತು. ಅರ್ಧದಿನದಲ್ಲಿಯೇ ಕೌಂಟರ್‌ನಲ್ಲಿ ಲಭ್ಯವಿದ್ದ ಎಲ್ಲ ಟಿಕೆಟ್‌ಗಳೂ ಬಿಕರಿಯಾದವು. ಆನ್‌ಲೈನ್‌ನಲ್ಲಿ ಕೂಡ ವಿವಿಧ ಮುಖಬೆಲೆಯ ಟಿಕೆಟ್‌ಗಳಿಗೆ ಭಾರಿ ಬೇಡಿಕೆ ವ್ಯಕ್ತವಾಗಿದೆ.

‘ಬೆಳಿಗ್ಗೆ ಕೌಂಟರ್‌ನಲ್ಲಿ ಟಿಕೆಟ್ ಮಾರಾಟ ಆರಂಭವಾಯಿತು. ಇಲ್ಲಿ ₹ 750 ಬೆಲೆಯ ನಾಲ್ಕು ಸಾವಿರ ಮತ್ತು ₹ 2000 ಬೆಲೆ ಐದು ಸಾವಿರ ಟಿಕೆಟ್ ಮಾರಾಟವಾದವು. ಆನ್‌ಲೈನ್‌ನಲ್ಲಿ ₹ 6000ಕ್ಕಿಂತ ಹೆಚ್ಚಿನ ಟಿಕೆಟ್‌ಗಳು ಬಿಕರಿಯಾಗುತ್ತಿವೆ. ಮಧ್ಯರಾತ್ರಿಯ ವೇಳೆಗೆ ಸ್ಪಷ್ಟ ಚಿತ್ರಣ ಸಿಗಲಿದೆ. ಆನ್‌ಲೈನ್‌ನಲ್ಲಿ ಉಳಿದ ಟಿಕೆಟ್‌ಗಳನ್ನು ಕೌಂಟರ್‌ನಲ್ಲಿ ಮಾರಾಟ ಮಾಡಲಾಗುವುದು’ ಎಂದು ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ‘ಪ್ರಜಾವಾಣಿ’ಗೆ ತಿಳಿಸಿದರು.

ಪ್ರಸಾರ ಹಕ್ಕುಗಳಿಗೆ ಬಂಪರ್ ಮೌಲ್ಯ

ಐಪಿಎಲ್: ₹100 ಕೋಟಿ ದಾಟಿದ ಪ್ರತಿ ಪಂದ್ಯದ ಬೆಲೆ



ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಟಿ.ವಿ. ಮತ್ತು ಡಿಜಿಟಲ್ ಪ್ರಸಾರ ಹಕ್ಕುಗಳನ್ನು ಪಡೆಯಲು ಪೈಪೋಟಿ ಏರ್ಪಟ್ಟಿದೆ. ಇದರಿಂದಾಗಿ ನಿರೀಕ್ಷೆಗೂ ಮೀರಿದ ಮೌಲ್ಯವು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಬೊಕ್ಕಸ ತುಂಬಲಿದೆ.

ಪ್ರಕ್ರಿಯೆಯ ಮೊದಲ ದಿನವಾದ ಭಾನುವಾರದ ಮುಕ್ತಾಯಕ್ಕೆ ಐಪಿಎಲ್ ಟೂರ್ನಿಯ ಪ್ರತಿ ಪಂದ್ಯದ ಮೌಲ್ಯವು ₹ 100 ಕೋಟಿ ದಾಟಿತು. ಇದರಿಂದಾಗಿ ಒಟ್ಟಾರೆ ₹ 50 ಸಾವಿರ ಕೋಟಿಗೂ ಹೆಚ್ಚು ಮೌಲ್ಯವನ್ನು ಗಳಿಸುವ ನಿರೀಕ್ಷೆ ಮೂಡಿದೆ. ಭಾರತ ಉಪಖಂಡ ಮಟ್ಟದ ಪ್ರಸಾರ ಹಕ್ಕುಗಳಿಗಾಗಿ ಬಿಡ್ ನಡೆಯಿತು. ವಯಾಕಾಮ್ 18, ಡಿಸ್ನಿ ಸ್ಟಾರ್, ಸೋನಿ ಮತ್ತು ಝೀ ಮಾಧ್ಯಮ ಸಂಸ್ಥೆಗಳು ಕಣದಲ್ಲಿವೆ.

ಏಳು ಗಂಟೆಗಳ ಪೈಪೋಟಿಯಲ್ಲಿ ಪ್ಯಾಕೇಜ್ ಎ (ಭಾರತದಲ್ಲಿ ಟಿ.ವಿ. ಹಕ್ಕುಗಳು) ಮತ್ತು ಪ್ಯಾಕೇಜ್ ಬಿ (ಭಾರತದಲ್ಲಿ ಡಿಜಿಟಲ್ ಹಕ್ಕುಗಳು) ಸೇರಿ ₹ 42 ಸಾವಿರ ಕೋಟಿಯವರೆಗೂ ಬಿಡ್ ವ್ಯಕ್ತವಾಗಿದೆ. ಇದು ಎರಡನೇ ದಿನವಾದ ಸೋಮವಾರ ಇನ್ನೂ ಹೆಚ್ಚುವ ನಿರೀಕ್ಷೆ ಇದೆ. ಈ ಎರಡು ಪ್ಯಾಕೇಜ್‌ಗಳ ಹಕ್ಕುದಾರರು ಸೋಮವಾರ ಸಂಜೆಯ ವೇಳೆಗೆ ಹೊರಹೊಮ್ಮುವ ನಿರೀಕ್ಷೆ ಇದೆ.

ನಂತರ ನಡೆಯುವ ಪ್ಯಾಕೇಜ್ ಸಿ (ತಲಾ ₹ 16 ಕೋಟಿಯಂತೆ 18 ಪಂದ್ಯಗಳ ಹಕ್ಕು) ಪಡೆಯಲು ಬಿ ಪ್ಯಾಕೇಜ್ ವಿಜೇತರೂ ಅರ್ಹರಾಗಿದ್ದಾರೆ. ಪ್ಯಾಕೇಜ್ ಡಿ (ವಿದೇಶದಲ್ಲಿ ಟಿ.ವಿ. ಮತ್ತು ಡಿಜಿಟಲ್ ಪ್ರಸಾರ ಹಕ್ಕು–ಪಂದ್ಯವೊಂದಿಗೆ ₹ 3 ಕೋಟಿ) ಕೂಡ ಬಿಡ್ ಮಾಡಬಹುದು.

‘ಇವತ್ತು ಸಂಜೆ 5.30ರವರೆಗಿನ ಪ್ರಕ್ರಿಯೆಯಲ್ಲಿ ಪ್ರತಿ ಪಂದ್ಯವೊಂದಕ್ಕೆ ಟಿ.ವಿ. ಹಕ್ಕುಗಳ (ಮೂಲಬೆಲೆ: ₹49ಕೋಟಿ) ಬಿಡ್ ₹57 ಕೋಟಿಯವರೆಗೂ ಹೆಚ್ಚಿತು. ಡಿಜಿಟಲ್‌ನಲ್ಲಿ ₹ 33 ಕೋಟಿ ಮೂಲಬೆಲೆಯಿಂದ ₹ 48 ಕೋಟಿಗೆ ಅಚ್ಚರಿಯ ರೀತಿಯಲ್ಲಿ ಬೆಳೆಯಿತು’ ಎಂದು ಬಿಸಿಸಿಐ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

‘ಕಳೆದ ಐದು ವರ್ಷಗಳಲ್ಲಿ ಪ್ರತಿಯೊಂದು ಪಂದ್ಯಕ್ಕೆ ₹54.5 ಕೋಟಿ ಮೌಲ್ಯ ಇತ್ತು. ಆಗ ಟಿ.ವಿ. ಹಕ್ಕುಗಳನ್ನು ಮಾತ್ರ ನೀಡಲಾಗಿತ್ತು. ಈಗ ಟಿ.ವಿ. ಮತ್ತು ಡಿಜಿಟಲ್ ಒಟ್ಟಾರೆಯಾಗಿ ಪರಿಗಣಿಸಿದರೆ ₹ 100 ಕೋಟಿ (₹ 105 ಕೋಟಿ) ದಾಟಿದೆ. ಇದೊಂದು ಅಚ್ಚರಿಯ ಬೆಳವಣಿಗೆಯಾಗಿದೆ. ನಾಳೆಯೂ ಇದು ಮುಂದುವರಿಯಲಿದೆ’ ಎಂದು ಅಧಿಕಾರಿ ಹೇಳಿದ್ದಾರೆ.

ನಾಲ್ಕು ಬಿಡ್‌ದಾರರಲ್ಲಿ ಯಾರು ಮುಂಚೂಣಿಯಲ್ಲಿದ್ದಾರೆಂಬುದು ಸ್ಪಷ್ಟವಾಗಿಲ್ಲ. ಆದರೆ, ಡಿಜಿಟಲ್ ಹಕ್ಕುಗಳಿಗಾಗಿ ವಯಾಕಾಮ್ 18–ಉದಯಶಂಕರ್ ಕಾನ್ಸೋರ್ಟಿಯಂ ಮತ್ತು ಸದ್ಯ ಹಕ್ಕುಗಳನ್ನು ಹೊಂದಿರುವ ಡಿಸ್ನಿ (ಸ್ಟಾರ್) ಮಧ್ಯೆ ತುರುಸಿನ ಸ್ಪರ್ಧೆ ಏರ್ಪಟ್ಟಿದೆ ಎನ್ನಲಾಗಿದೆ.

‘ಬಿಡ್ ಪ್ರಕ್ರಿಯೆಯ ಮುಕ್ತಾಯದ ವೇಳೆಗೆ ಇಂದಿನ ಮೊತ್ತಕ್ಕೆ ಹೆಚ್ಚೆಂದರೆ ಇನ್ನೂ ₹ 5500 ಕೋಟಿ ಸೇರಬಹುದು. ಇದರಿಂದಾಗಿ ₹45 ಸಾವಿರ ಕೋಟಿ ದಾಟುವ ನಿರೀಕ್ಷೆ ಇದೆ’ ಎಂದು ಬಿಸಿಸಿಐನ ಮುಂಬೈನ ಅಧಿಕಾರಿಯೊಬ್ಬರು ಹೇಳಿದ್ದಾರೆ.

ವಿದೇಶಗಳಲ್ಲಿ ಉತ್ತಮ ಸಂಖ್ಯೆಯಲ್ಲಿ ವೀಕ್ಷಕರನ್ನು ಹೊಂದಿರುವ ಝೀ ಸಮೂಹವು ಡಿ ಪ್ಯಾಕೇಜ್ ಪಡೆಯುವ ಸಾಧ್ಯತೆ ಹೆಚ್ಚಿದೆ. ಝೀ ಫೈವ್ ಆ್ಯಪ್ ಬಹಳಷ್ಟು ಜನಪ್ರಿಯವಾಗಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಪೋಪ್, ರೂಟ್ ಶತಕ; ಇಂಗ್ಲೆಂಡ್ ತಿರುಗೇಟು

ನಾಟಿಂಗ್‌ಹ್ಯಾಂ (ಎಪಿ): ಒಲಿ ಪೋಪ್ (145) ಮತ್ತು ಜೋ ರೂಟ್ (ಬ್ಯಾಟಿಂಗ್ 127) ಅವರ ಶತಕದ ನೆರವಿನಿಂದ ಇಂಗ್ಲೆಂಡ್ ತಂಡ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ನ್ಯೂಜಿಲೆಂಡ್‌ಗೆ ತಿರುಗೇಟು ನೀಡಿದೆ.

ನಾಟಿಂಗ್‌ಹ್ಯಾಂನಲ್ಲಿ ನಡೆಯುತ್ತಿರುವ ಪಂದ್ಯದ ಮೂರನೇ ದಿನದಾಟದ ಚಹಾ ವಿರಾಮದ ವೇಳೆಗೆ ಇಂಗ್ಲೆಂಡ್ ಮೊದಲ ಇನಿಂಗ್ಸ್‌ನಲ್ಲಿ 97 ಓವರ್‌ಗಳಲ್ಲಿ 5 ವಿಕೆಟ್‌ಗೆ 416 ರನ್ ಗಳಿಸಿದೆ.

ಒಂದು ವಿಕೆಟ್‌ಗೆ 90 ರನ್‌ಗಳಿಂದ ಭಾನುವಾರ ಆಟ ಮುಂದುವರಿಸಿದ ಇಂಗ್ಲೆಂಡ್ ತಂಡ ಅಲೆಕ್ಸ್ ಲೀಸ್ (67) ಅವರನ್ನು ಮೊದಲ ಅವಧಿಯಲ್ಲಿ ಕಳೆದುಕೊಂಡಿತು. ಈ ವೇಳೆ ಜತೆಯಾದ ಪೋಪ್ ಮತ್ತು ರೂಟ್ ಮೂರನೇ ವಿಕೆಟ್‌ಗೆ 187 ರನ್ ಸೇರಿಸಿ ತಂಡಕ್ಕೆ ಆಸರೆಯಾದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ನ್ಯೂಜಿಲೆಂಡ್ 553, ಇಂಗ್ಲೆಂಡ್: 5ಕ್ಕೆ 416 (97 ಓವರ್) ಅಲೆಕ್ಸ್ ಲೀಸ್ 67, ಒಲಿ ಪೋಪ್ 145, ಜೋ ರೂಟ್ ಬ್ಯಾಟಿಂಗ್ 127, ಬೆನ್ ಫೋಕ್ಸ್ ಬ್ಯಾಟಿಂಗ್ 8, ಟ್ರೆಂಟ್ ಬೌಲ್ಟ್ 84ಕ್ಕೆ 3)

ಹಾಕಿ: ಭಾರತ ತಂಡಗಳಿಗೆ ನಿರಾಸೆ

ಆ್ಯಂಟ್ವರ್ಪ್, ಬೆಲ್ಜಿಯಂ (ಪಿಟಿಐ): ಭಾರತ ತಂಡದವರು ಎಫ್‌ಐಎಚ್ ಪ್ರೊ ಹಾಕಿ ಲೀಗ್‌ನ ಎರಡನೇ ಲೆಗ್‌ನ ಪಂದ್ಯದಲ್ಲಿ ಬೆಲ್ಜಿಯಂ ಎದುರು 2–3 ಗೋಲುಗಳ ಸೋಲು ಅನುಭವಿಸಿದರು.

ಭಾನುವಾರ ನಡೆದ ಪಂದ್ಯದಲ್ಲಿ ಎರಡು ಗೋಲುಗಳನ್ನು ತಂದಿತ್ತ ಅಲೆಕ್ಸಾಂಡರ್ ಹೆಂಡ್ರಿಕ್ಸ್ (49 ಮತ್ತು 59ನೇ ನಿ.) ಬೆಲ್ಜಿಯಂ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಇನ್ನೊಂದು ಗೋಲನ್ನು ನಿಕೊಲಸ್ ಕೆರ್ಪೆಲ್ (33) ತಂದಿತ್ತರು. ಭಾರತದ ಪರ ಅಭಿಷೇಕ್ (25) ಮತ್ತು ಮನ್‌ದೀಪ್ ಸಿಂಗ್ (60) ಗೋಲು ಗಳಿಸಿದರು.

ಈ ಗೆಲುವಿನ ಮೂಲಕ ಬೆಲ್ಜಿಯಂ, ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿತು. ಭಾರತ 3ನೇ ಸ್ಥಾನದಲ್ಲಿದೆ. ಮುಂದಿನ ವಾರ ನಡೆಯಲಿರುವ ಪಂದ್ಯದಲ್ಲಿ ಭಾರತ, ನೆದರ್ಲೆಂಡ್ಸ್ ಸವಾಲು ಎದುರಿಸಲಿದೆ.

ಮಹಿಳಾ ತಂಡಕ್ಕೆ ಸೋಲು: ಭಾರತ ಮಹಿಳಾ ತಂಡದವರು ಬೆಲ್ಜಿಯಂ ಎದುರು 0–5 ಗೋಲುಗಳ ನಿರಾಸೆ ಅನುಭವಿಸಿದರು. ಬಾರ್ಬರಾ ನೆಲೆನ್ (2ನೇ ನಿ.), ಚಾರ್ಲೊಟ್ ಏಂಜೆಲ್ಬರ್ಟ್ (4), ಅಬಿ ರೇ (19), ಸ್ಟೆಫಾನಿ ವಾಂಡೆನ್ ಬೊರ್ (23) ಮತ್ತು ಆಂಬ್ರೆ ಬಾಲೆಂಜೈನ್ (36) ಅವರು ಆತಿಥೇಯ ತಂಡದ ಪರ ಗೋಲು ಗಳಿಸಿದರು.

ಜೆಪಿಬಿಎಲ್ ಹರಾಜು; ಮೂವರು ಐಕಾನ್ ಆಟಗಾರರಿಗೆ ₹ 3.5 ಲಕ್ಷ

ಮಿಥುನ್, ಪ್ರತೀಕ್, ಪ್ರಕಾಶ್‌ಗೆ ಹೆಚ್ಚು ಬೆಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವ ಆಟಗಾರರಾದ ಮಿಥುನ್ ಮಂಜುನಾಥ್, ಸಾಯ್ ಪ್ರತೀಕ್ ಮತ್ತು ಪ್ರಕಾಶ್ ರಾಜ್ ಅವರು ಚೊಚ್ಚಲ ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್‌ನ (ಜೆಪಿಬಿಎಲ್) ’ಬೆಲೆಯುಳ್ಳ‘ ಸ್ಪರ್ಧಿಗಳು ಎನಿಸಿಕೊಂಡರು.

ಜೆಪಿಬಿಎಲ್‌ನ ಮೊದಲ ಋತುವಿನ ಟೂರ್ನಿಗೆ ಎಂಟು ತಂಡಗಳಿಗೆ ಆಟಗಾರರ ಆಯ್ಕೆಗಾಗಿ ಹರಾಜು ಪ್ರಕ್ರಿಯೆ ಭಾನುವಾರ ನಡೆಯಿತು. ಮಿಥುನ್, ಪ್ರತೀಕ್ ಮತ್ತು ಪ್ರಕಾಶ್ ಅವರನ್ನು ಕ್ರಮವಾಗಿ ಮಲ್ನಾಡ್ ಫಾಲ್ಕನ್ಸ್, ಮಂಡ್ಯ ಬುಲ್ಸ್ ಹಾಗೂ ಕೆಜಿಎಫ್ ವೂಲ್ವ್ಸ್ ತಂಡಗಳು ₹ 3.5 ಲಕ್ಷ ನೀಡಿ ತಮ್ಮದಾಗಿಸಿಕೊಂಡವು.

ಇತರ ಐಕಾನ್ ಆಟಗಾರರಾದ ಸನೀತ್ ದಯಾನಂದ್ (ಕೊಡಗು ಟೈಗರ್ಸ್, ₹ 2.6 ಲಕ್ಷ), ಡೇನಿಯಲ್ ಫರೀದ್ (ಬಂಡಿಪುರ ಟಸ್ಕರ್ಸ್, 3.1 ಲಕ್ಷ), ರಘು ಮರಿಸ್ವಾಮಿ (ಮಂಗಳೂರು ಶಾರ್ಕ್ಸ್, 3.3 ಲಕ್ಷ), ತಾನ್ಯಾ ಹೇಮಂತ್ (ಮೈಸೂರು ಪ್ಯಾಂಥರ್ಸ್, ₹3.2 ಲಕ್ಷ), ಜನನಿ ಅನಂತಕುಮಾರ್ (ಬೆಂಗಳೂರು ಲಯನ್ಸ್, ₹ 2.5 ಲಕ್ಷ) ಅವರು ಹರಾಜಿನಲ್ಲಿ ವಿವಿಧ ತಂಡಗಳ ಪಾಲಾದರು.


ಐಕಾನ್ ಆಟಗಾರರಾದ (ಎಡದಿಂದ) ಮಿಥುನ್ ಮಂಜುನಾಥ್, ರಘು ಮರಿಸ್ವಾಮಿ, ಡೇನಿಯಲ್ ಫರೀದ್ ಮತ್ತು ಸಾಯ್ ಪ್ರತೀಕ್ ಅವರು ಹರಾಜಿನಲ್ಲಿ ಹೆಚ್ಚಿನ ಬೆಲೆ ಪಡೆದುಕೊಂಡರು

ಐಕಾನ್ ಆಟಗಾರರಿಗೆ ₹ 2.5 ಲಕ್ಷ ಮೂಲಬೆಲೆ ಹಾಗೂ ₹ 3.5 ಲಕ್ಷ ಗರಿಷ್ಠ ಬೆಲೆ ನಿಗದಿಪಡಿಸಲಾಗಿತ್ತು. ಸಾಯ್ ಪ್ರತೀಕ್ ಅವರನ್ನು ಪಡೆದುಕೊಳ್ಳಲು ನಾಲ್ಕು ತಂಡಗಳು ಪೈಪೋಟಿ ನಡೆಸಿದವು. ಲಾಟರಿ ಎತ್ತಿದಾಗ ಮಂಡ್ಯ ಬುಲ್ಸ್‌ಗೆ ಅದೃಷ್ಟ ಒಲಿಯಿತು.

ಆಟಗಾರರಿಗೆ ಗರಿಷ್ಠ ಬೆಲೆಯನ್ನೂ ನಿಗದಿಪಡಿಸಲಾಗಿತ್ತು. ಹರಾಜಿನಲ್ಲಿ ಕೆಲವು ಆಟಗಾರರ ಗರಿಷ್ಠ ಬೆಲೆ ತಲುಪಿದ ಬಳಿಕವೂ ಅವರನ್ನು ತಮ್ಮದಾಗಿಸಿಕೊಳ್ಳಲು 3–4 ತಂಡಗಳು ಪೈಪೋಟಿಯಲ್ಲಿರುತ್ತಿದ್ದವು. ಅವರು ಯಾವ ತಂಡ ಸೇರಬೇಕು ಎಂಬುದನ್ನು ಲಾಟರಿ ಎತ್ತಿ ನಿರ್ಧರಿಸಲಾಯಿತು.

14 ವರ್ಷದ ರುಜುಲಾ ರಾಮು ಅವರಿಗೆ ಕೊಡಗು ಟೈಗರ್ಸ್ ₹ 1.80 ಲಕ್ಷ ನೀಡಿದರೆ, ಲೀಗ್‌ನ ಅತಿ ಕಿರಿಯ ಆಟಗಾರ ಜಡೆ ಅನಿಲ್ ಅವರನ್ನು ಬಂಡಿಪುರ ಟೈಗರ್ಸ್ ₹ 30 ಸಾವಿರ ನೀಡಿ ತನ್ನದಾಗಿಸಿಕೊಂಡಿತು.

ಮುಖ್ಯಾಂಶಗಳು
- ಪ್ರತಿ ತಂಡದಲ್ಲಿ ಎಂಟು ಆಟಗಾರರು
- ಒಟ್ಟು 64 ಆಟಗಾರರು ಹರಾಜಿನಲ್ಲಿ ಆಯ್ಕೆ
- 238 ಸ್ಪರ್ಧಿಗಳಿಂದ ನೋಂದಣಿ

’ಹರಾಜು ಪ್ರಕ್ರಿಯೆ ಸುಗಮವಾಗಿ ನಡೆಯಿತು. ಎಲ್ಲ ಎಂಟು ತಂಡಗಳೂ ಸಮತೋಲನದಿಂದ ಕೂಡಿವೆ. ಕಣದಲ್ಲಿದ್ದ ಎಲ್ಲ ಆಟಗಾರರ ರ‍್ಯಾಂಕಿಂಗ್ ಮತ್ತು ಇತ್ತೀಚಿನ ಸಾಧನೆ ಗಮನಿಸಿ ತಂಡಗಳು ಆಯ್ಕೆ ಮಾಡಿಕೊಂಡವು‘ ಎಂದು ಲೀಗ್ ನಿರ್ದೇಶಕ ಅರವಿಂದ್ ಭಟ್ ತಿಳಿಸಿದರು.

’ಮೊದಲ ಋತುವಿನಲ್ಲಿ ಕರ್ನಾಟಕದ ಆಟಗಾರರಿಗೆ ಮಾತ್ರ ಅವಕಾಶ ನೀಡಲಾಗಿದೆ. ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ 238 ಸ್ಪರ್ಧಿಗಳು ಹರಾಜಿನಲ್ಲಿ ಭಾಗವಹಿಸಿದ್ದರು. ಅವರನ್ನು 64 ಆಟಗಾರರು ಆಯ್ಕೆಯಾದರು‘ ಎಂದು ಜೆಪಿಬಿಎಲ್ ಕಮಿಷನರ್ ಪ್ರಶಾಂತ್ ರೆಡ್ಡಿ ಹೇಳಿದರು.

ಜೆಪಿಬಿಎಲ್ ಟೂರ್ನಿ ಜುಲೈ 1ರಿಂದ 10ರ ವರೆಗೆ ನಡೆಯಲಿದೆ.

ಜೆಪಿಬಿಎಲ್ ತಂಡಗಳು (ಆಟಗಾರರು ಹಾಗೂ ಪಡೆದ ಬೆಲೆ, ₹ಗಳಲ್ಲಿ)

ಬೆಂಗಳೂರು ಲಯನ್ಸ್ – ಪಿ.ವಿ. ಸಿಂಧು (ರಾಯಭಾರಿ)	
ಜನನಿ ಅನಂತಕುಮಾರ್*	2.50 ಲಕ್ಷ
ಎಸ್.ಭಾರ್ಗವ್	2 ಲಕ್ಷ
ಎಚ್.ವಿ.ನಿತಿನ್	2 ಲಕ್ಷ
ಎಸ್.ಸಂಜೀತ್	2 ಲಕ್ಷ
ವೈಭವ್ ಶ್ರೀನಾಥ್	50 ಸಾವಿರ
ಆದಿತ್ಯ ದಿವಾಕರ್	50 ಸಾವಿರ
ಸುದೀಪ್ ಸುರೇಶ್	25 ಸಾವಿರ
ಸುಪ್ರಜಾ	25 ಸಾವಿರ
ಕೊಡಗು ಟೈಗರ್ಸ್ – ಅಶ್ವಿನಿ ಪೊನ್ನಪ್ಪ (ರಾಯಭಾರಿ)	
ಸನೀತ್ ದಯಾನಂದ್*	2.60 ಲಕ್ಷ
ರುಜುಲಾ ರಾಮು	1.80 ಲಕ್ಷ
ವಸಂತಕುಮಾರ್	1.90 ಲಕ್ಷ
ರಮ್ಯಾ ವೆಂಕಟೇಶ್	1 ಲಕ್ಷ
ಡಿ.ಶೀತಲ್	50 ಸಾವಿರ
ಎಸ್.ಆದರ್ಶ ಕುಮಾರ್	40 ಸಾವಿರ
ವಿಶೇಷ್ ಶರ್ಮ	30 ಸಾವಿರ
ಸೈಫ್ ಅಲಿ	25 ಸಾವಿರ
ಮಂಡ್ಯ ಬುಲ್ಸ್ – ಸಾಯಿ ಪ್ರಣೀತ್ (ರಾಯಭಾರಿ)	
ಸಾಯ್ ಪ್ರತೀಕ್*	3.50 ಲಕ್ಷ
ಆಶಿತ್ ಸೂರ್ಯ	2 ಲಕ್ಷ
ಅನಿರುದ್ಧ ದೇಶಪಾಂಡೆ	1 ಲಕ್ಷ
ಅನನ್ಯಾ ಪ್ರವೀಣ್	80 ಸಾವಿರ
ಕಿರಣ್ ಬಾಲಾಜಿ	80 ಸಾವಿರ
ಕಾರ್ಣಿಕಶ್ರೀ	50 ಸಾವಿರ
ಅರುಜ್ ಮಹೇಶ್ವರಿ	35 ಸಾವಿರ
ಕಾಮೂರ್ತಿ ರಾಘವೇಂದ್ರ	30 ಸಾವಿರ
ಮಂಗಳೂರು ಶಾರ್ಕ್ಸ್ – ಕೆ. ಶ್ರೀಕಾಂತ್ (ರಾಯಭಾರಿ)	
ರಘು ಮರಿಸ್ವಾಮಿ*	3.30 ಲಕ್ಷ
ಕುಶಾಲ್ ರಾಜ್	2 ಲಕ್ಷ
ಪ್ರೇರಣಾ ಎನ್.ಶೇಟ್	90 ಸಾವಿರ
ವಿಜೇತಾ ಹರೀಶ್	80 ಸಾವಿರ
ಜಯಂತ್ ಗೋಪಾಲ್	80 ಸಾವಿರ
ಸುನಿಲ್ ಗ್ಲಾಡ್ಸನ್	30 ಸಾವಿರ
ಸಿ.ಸಚಿನ್	30 ಸಾವಿರ
ಎಸ್.ಶಶಾಂಕ್	25 ಸಾವಿರ
ಮಲ್ನಾಡ್ ಫಾಲ್ಕನ್ಸ್ – ಚಿರಾಗ್ ಶೆಟ್ಟಿ (ರಾಯಭಾರಿ)	
ಮಿಥುನ್ ಮಂಜುನಾಥ್*	3.50 ಲಕ್ಷ
ಪೃಥ್ವಿ ರಾಯ್	2 ಲಕ್ಷ
ಧೃತಿ ಯತೀಶ್	1.60 ಲಕ್ಷ
ಶಮಂತ್ ಕಿದಿಯೂರ್	1.40 ಲಕ್ಷ
ವೆಂಕಟೇಶ್ ಪ್ರಸಾದ್	50 ಸಾವಿರ
ಪ್ರಣವ್ ಕೃಷ್ಣಮೂರ್ತಿ	25 ಸಾವಿರ
ಅರವಿಂದ್ ಕೊಂಗರ	25 ಸಾವಿರ
ಜಾನ್ವಿ	25 ಸಾವಿರ
ಬಂಡಿಪುರ ಟಸ್ಕರ್ಸ್ – ಜ್ವಾಲಾ ಗುಟ್ಟಾ (ರಾಯಭಾರಿ)	
ಡೇನಿಯಲ್ ಫರೀದ್*	3.10 ಲಕ್ಷ
ವೈಭವ್	2 ಲಕ್ಷ
ಅಭಿಷೇಕ್ ಯೆಲಿಗಾರ್	1.80 ಲಕ್ಷ
ಅಲ್ಫಿಯಾ ರಿಯಾಜ್	80 ಸಾವಿರ
ಅಪೇಕ್ಷಾ ನಾಯಕ್	80 ಸಾವಿರ
ಕಿಶಲ್ ಗಣಪತಿ	50 ಸಾವಿರ
ಜಡೆ ಅನಿಲ್	30 ಸಾವಿರ
ವಿ.ಗಣೇಶ್	25 ಸಾವಿರ
ಮೈಸೂರು ಪ್ಯಾಂಥರ್ಸ್ – ಸಾತ್ವಿಕ್ ಸಾಯಿರಾಜ್ (ರಾಯಭಾರಿ)	
ತಾನ್ಯಾ ಹೇಮಂತ್*	3.20 ಲಕ್ಷ
ರೋಹಿತ್ ಮರಿಸ್ವಾಮಿ	2 ಲಕ್ಷ
ರಾಹುಲ್ ಭಾರದ್ವಾಜ್	2 ಲಕ್ಷ
ಚಿರಂಜೀವಿ ರೆಡ್ಡಿ	80 ಸಾವಿರ
ಜಿ.ಕಿರಣ್ ಕುಮಾರ್	80 ಸಾವಿರ
ಮುಸ್ಕಾನ್ ಖಾನ್	50 ಸಾವಿರ
ತರುಣ್ ಮೊರಬ್	30 ಸಾವಿರ
ರಿಯಾ ಪಿಳ್ಳೈ	30 ಸಾವಿರ
ಕೆಜಿಎಫ್ ವೂಲ್ವ್ಸ್ – ಎಚ್.ಎಸ್. ಪ್ರಣಯ್ (ರಾಯಭಾರಿ)	
ಪ್ರಕಾಶ್ ರಾಜ್*	3.50 ಲಕ್ಷ
ಸುಹಾಸ್ ವಿ ಗೌಡ	2 ಲಕ್ಷ
ಹೇಮಂತ್ ಗೌಡ	1 ಲಕ್ಷ
ಗ್ಲೋರಿಯಾ ವಿ.	90 ಸಾವಿರ
ನರೇನ್ ಎಸ್.ಅಯ್ಯರ್	80 ಸಾವಿರ
ರುದ್ರ ಶಾಹಿ	50 ಸಾವಿರ
ರಶ್ಮಿ ಗಣೇಶ್	30 ಸಾವಿರ
ಪಿ.ಅಮೃತಾ	30 ಸಾವಿರ

* ಐಕಾನ್ ಆಟಗಾರರು

₹ 2,060 ಕೋಟಿ ಮೌಲ್ಯದ ಫ್ಲಿಪ್‌ಕಾರ್ಟ್ ಷೇರು ಖರೀದಿಸಿದ ಟೆನ್ಸೆಂಟ್

ನವದೆಹಲಿ (ಪಿಟಿಐ): ಚೀನಾದ ಟೆನ್ಸೆಂಟ್ ಕಂಪನಿಯು ಫ್ಲಿಪ್‌ಕಾರ್ಟ್‌ನ ₹2,060 ಕೋಟಿ ಮೌಲ್ಯದ ಷೇರುಗಳನ್ನು ಅದರ ಸಹ ಸ್ಥಾಪಕ ಬಿನ್ನಿ ಬನ್ಸಲ್ ಅವರಿಂದ ಖರೀದಿಸಿದೆ.

ಟೆನ್ಸೆಂಟ್ ಕ್ಲೌಡ್ ಯುರೋಪ್ ಬಿವಿ ಕಂಪನಿಗೆ ಷೇರುಗಳನ್ನು ಮಾರಾಟ ಮಾಡಿದ ಬಳಿಕ ಫ್ಲಿಪ್‌ಕಾರ್ಟ್‌ನಲ್ಲಿ ಬನ್ಸಲ್ ಹೊಂದಿರುವ ಷೇರುಪಾಲು ಶೇ 1.84ರಷ್ಟು ಆಗಿದೆ ಎನ್ನುವ ಮಾಹಿತಿ ಅಧಿಕೃತ ದಾಖಲೆಗಳಲ್ಲಿ ಇದೆ.

ಈ ಕುರಿತು ಕಳುಹಿಸಿದ ಇ–ಮೇಲ್‌ಗೆ ಫ್ಲಿಪ್‌ಕಾರ್ಟ್ ಮತ್ತು ಬನ್ಸಲ್ ಅವರಿಂದ ಯಾವುದೇ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಸಿಂಗಪುರದಲ್ಲಿ ಕೇಂದ್ರ ಕಚೇರಿ ಹೊಂದಿರುವ ಫ್ಲಿಪ್‌ಕಾರ್ಟ್, ಭಾರತದಲ್ಲಿ ಮಾತ್ರವೇ ಕಾರ್ಯಾಚರಿಸುತ್ತಿದೆ. ಖರೀದಿ ಪ್ರಕ್ರಿಯೆಯು 2021ರ ಅಕ್ಟೋಬರ್ 26ರಂದೇ ಪೂರ್ಣಗೊಂಡಿದ್ದು, ಪ್ರಸಕ್ತ ಹಣಕಾಸು ವರ್ಷದ ಆರಂಭದಲ್ಲಿ ಸರ್ಕಾರದ ಅಧಿಕಾರಿಗಳ ಗಮನಕ್ಕೆ ತರಲಾಗಿದೆ.



‘ಖರೀದಿ ವಹಿವಾಟು ಸಿಂಗಪುರದಲ್ಲಿ ನಡೆದಿದೆ. ಆದರೆ ಫ್ಲಿಪ್‌ಕಾರ್ಟ್ ಜವಾಬ್ದಾರಿಯುತ ಕಂಪನಿಯಾಗಿ ಅದರ ಬಗ್ಗೆ ಭಾರತೀಯ ಅಧಿಕಾರಿಗಳಿಗೆ ಮಾಹಿತಿ ನೀಡಿದೆ’ ಎಂದು ಮೂಲಗಳು ಹೇಳಿವೆ. ಭಾರತದ ಜೊತೆ ಗಡಿಗಳನ್ನು ಹಂಚಿಕೊಂಡಿರುವ ದೇಶಗಳ ಹೂಡಿಕೆದಾರರು ಭಾರತದ ಕಂಪನಿಗಳನ್ನು ತಮ್ಮ ಸುಪರ್ದಿಗೆ ತೆಗೆದುಕೊಳ್ಳುವುದನ್ನು ತಪ್ಪಿಸಲು ಸರ್ಕಾರವು ಎಫ್‌ಡಿಐ ನಿಯಮ ಬಿಗಿಗೊಳಿಸಿದೆ. ಆದರೆ ಈ ವಹಿವಾಟು ಈ ನಿಯಮದ ಅಡಿ ಬರುವುದಿಲ್ಲ ಎಂದು ಮೂಲಗಳು ವಿವರಿಸಿವೆ.

ಭಾರತದಲ್ಲಿ ಕಾರ್ಯಾಚರಿಸುತ್ತಿರುವ ಹಲವು ಕಂಪನಿಗಳಲ್ಲಿ ಟೆನ್ಸೆಂಟ್ ಕಂಪನಿಯು ಹೂಡಿಕೆ ಮಾಡಿದೆ. ಟೆನ್ಸೆಂಟ್ ಸಮೂಹದ ಪಬ್‌ಜಿ ಮೊಬೈಲ್, ಪಬ್ಜಿ ಮೊಬೈಲ್ ಲೈಟ್ ಸೇರಿದಂತೆ ಹಲವು ಗೇಮಿಂಗ್ ಆ್ಯಪ್‌ಗಳಿಗೆ ಸರ್ಕಾರವು ನಿಷೇಧ ಹೇರಿದೆ.

4.8 ಲಕ್ಷ ಮನೆಗಳ ನಿರ್ಮಾಣ ವಿಳಂಬ


ನವದೆಹಲಿ (ಪಿಟಿಐ): ದೇಶದ ಪ್ರಮುಖ ಏಳು ನಗರಗಳಲ್ಲಿ ಈ ವರ್ಷ ₹ 4.48 ಲಕ್ಷ ಕೋಟಿ ಮೌಲ್ಯದ 4.8 ಲಕ್ಷ ಮನೆಗಳ ನಿರ್ಮಾಣ ಸ್ಥಗಿತ ಅಥವಾ ವಿಳಂಬ ಆಗಿದೆ. ಇದರಲ್ಲಿ ದೆಹಲಿ–ಎನ್‌ಸಿಆರ್‌ನಲ್ಲಿಯೇ 2.4 ಲಕ್ಷ ಮನೆಗಳು ಇವೆ ಎಂದು ಆಸ್ತಿ ಸಲಹಾ ಸಂಸ್ಥೆ ಅನರಾಕ್ ತಿಳಿಸಿದೆ.

ಬೆಂಗಳೂರು, ದೆಹಲಿ–ಎನ್‌ಸಿಆರ್, ಮುಂಬೈ ಮೆಟ್ರೋಪಾಲಿಟನ್ ಪ್ರದೇಶ, ಕೋಲ್ಕತ್ತ, ಚೆನ್ನೈ, ಹೈದರಾಬಾದ್ ಮತ್ತು ಪುಣೆ ನಗರಗಳಲ್ಲಿ 2014 ಅಥವಾ ಅದಕ್ಕಿಂತಲೂ ಮೊದಲು ಆರಂಭ ಆದ ವಸತಿ ಯೋಜನೆಗಳನ್ನು ಮಾತ್ರವೇ ಸಂಸ್ಥೆಯು ಪರಿಗಣಿಸಿದೆ.



2022ರ ಜನವರಿಯಿಂದ ಮೇವರೆಗಿನ ಅವಧಿಯಲ್ಲಿ 36,830 ಮನೆಗಳ ನಿರ್ಮಾಣ ಪೂರ್ಣಗೊಂಡಿದೆ. ಈ ನಗರಗಳಲ್ಲಿ 2021ರ ಕ್ಯಾಲೆಂಡರ್ ವರ್ಷದ ಅಂತ್ಯದ ವೇಳೆಗೆ ₹ 4.84 ಲಕ್ಷ ಕೋಟಿ ಮೌಲ್ಯದ 5.17 ಲಕ್ಷ ಮನೆಗಳು ಹಾಗೆಯೇ ಉಳಿದಿವೆ.

ವಿಳಂಬ/ಸ್ಥಗಿತ ಆಗಿರುವ ಯೋಜನೆಗಳ ವಿವರ



‘ನಿರ್ಮಾಣ ವೆಚ್ಚದಲ್ಲಿ ಭಾರಿ ಏರಿಕೆ ಕಂಡಿರುವ ನಡುವೆಯೂ ನಿರ್ಮಾಣಗಾರರು ಕೆಲಸ ಮುಂದುವರೆಸಿದ್ದಾರೆ. ಕಳೆದ ಎರಡು ವರ್ಷಗಳಲ್ಲಿಯೂ ಮನೆಗಳಿಗೆ ಬೇಡಿಕೆ ಹೆಚ್ಚಿನ ಮಟ್ಟದಲ್ಲಿ ಇರುವುದು ಅನುಕೂಲ ಆಗಿದೆ’ ಎಂದು ಸಂಸ್ಥೆಯ ಹಿರಿಯ ನಿರ್ದೇಶಕ ಪ್ರಶಾಂತ್ ಠಾಕೂರ್ ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹515
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹517

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹332-616
ದ್ವಿತಳಿ (ಬಿ.ವಿ)	₹406-847

ಸಾಲದ ಸುಳಿ: ಪಾರಾಗುವುದು ಹೇಗೆ?


ಹಣಕಾಸು ಸಾಕ್ಷರತೆ
ರಾಜೇಶ್ ಕುಮಾರ್ ಟಿ.ಆರ್.

‘ಸಾಲವನು ಕೊಂಬಾಗ ಹಾಲೋಗರುಂಡಂತೆ, ಸಾಲಿಗನು ಬಂದು ಎಳೆವಾಗ - ಕಿಬ್ಬದಿಯ ಕೀಲು ಮುರಿದಂತೆ’ ಎನ್ನುತ್ತಾನೆ ಸರ್ವಜ್ಞ. ಹೌದು, ಸಾಲ ಎಂಬುದು ಪಡೆಯುವಾಗ ಸಿಹಿ, ಹಿಂದಿರುಗಿಸುವಾಗ ಕಹಿ. ಅದರಲ್ಲೂ ಮೈತುಂಬಾ ಸಾಲ ಮಾಡಿಕೊಂಡಿದ್ದರಂತೂ ಮುಗಿದೇ ಹೊಯಿತು! ಸಾಲ ಕೊಟ್ಟವರು ಮನೆ ಬಾಗಿಲಿಗೇ ಬಂದು ನಿಮ್ಮ ನೆಮ್ಮದಿ ಕಿತ್ತುಕೊಳ್ಳುತ್ತಾರೆ. ಹಾಗಾದರೆ, ಕೆಟ್ಟ ಸಾಲಗಳಿಂದ ಪಾರಾಗಿ, ಸಾಲದ ಸುಳಿಯಿಂದ ಬಚಾವಾಗುವುದು ಹೇಗೆ? ಇದರ ಬಗ್ಗೆ ಒಮ್ಮೆ ಗಮನ ಹರಿಸೋಣ.

1. ಸಾಲಗಳ ಪಟ್ಟಿ ಮಾಡಿ, ಯಾವ ಸಾಲ ಮೊದಲು ಪಾವತಿಸಬೇಕು ಎಂಬುದನ್ನು ಅರಿಯಿರಿ: ವಾಹನ ಸಾಲ, ವೈಯಕ್ತಿಕ ಸಾಲ, ಚಿನ್ನದ ಮೇಲೆ ಸಾಲ, ಗೃಹ ಸಾಲ, ಕ್ರೆಡಿಟ್ ಕಾರ್ಡ್ ಸಾಲ, ಉದ್ಯಮ ಸಾಲ, ಹೀಗೆ ಕೆಲವರು ಎಲ್ಲ ಬಗೆಯ ಸಾಲಗಳನ್ನು ಪಡೆದು ಸಾಲದ ಸುಳಿಗೆ ಸಿಲುಕಿರುತ್ತಾರೆ. ಕೆಲವರಂತೂ ಒಂದು ಹೆಜ್ಜೆ ಮುಂದೆ ಹೋಗಿ ಒಂದು ಸಾಲ ತೀರಿಸಲು ಮತ್ತೊಂದು, ಅದನ್ನು ಸರಿದೂಗಿಸಲು ಇನ್ನೊಂದು ಸಾಲ ಮಾಡುತ್ತಲೇ ಹೋಗುತ್ತಾರೆ.

ಹೀಗೆ ಮಾಡುವುದರಿಂದ ಸಮಸ್ಯೆ ಪರಿಹಾರವಾಗದು. ಮೊದಲನೆಯದಾಗಿ, ಸಾಲಗಳ ಒಂದು ಪಟ್ಟಿಯನ್ನು ಮಾಡಿಕೊಂಡು ಹೆಚ್ಚು ಬಡ್ಡಿ ದರವಿರುವ ಸಾಲಗಳನ್ನು ಬೇಗನೆ ತೀರಿಸಲು ಪ್ರಯತ್ನಿಸಬೇಕು. ಉದಾಹರಣೆಗೆ, ನೀವು ವೈಯಕ್ತಿಕ ಸಾಲ, ವಾಹನ ಸಾಲ ಮತ್ತು ಗೃಹ ಸಾಲ ಪಡೆದುಕೊಂಡಿದ್ದೀರಿ ಎಂದಿಟ್ಟುಕೊಳ್ಳಿ. ಹೀಗಿದ್ದಾಗ ಮೊದಲು ವೈಯಕ್ತಿಕ ಸಾಲ ತೀರಿಸಿ. ಏಕೆಂದರೆ, ವೈಯಕ್ತಿಕ ಸಾಲದ ಬಡ್ಡಿ ದರ ಶೇ 13ರಿಂದ ಶೇ 18ರವರೆಗೂ ಇರುತ್ತದೆ. ವಾಹನ ಸಾಲದ ಬಡ್ಡಿ ದರ ಶೇ 10ರಿಂದ ಶೇ 12ರವರೆಗೆ ಇರುವುದರಿಂದ ಈ ಸಾಲ ತೀರಿಸಲು ಎರಡನೆಯ ಆದ್ಯತೆ ನೀಡಿ.

ಗೃಹ ಸಾಲದ ಬಡ್ಡಿ ದರ ಶೇ 7.5ರಿಂದ ಶೇ 8.5ರವರೆಗೆ ಇರುವುದರಿಂದ ಮತ್ತು ಇದು ದೀರ್ಘಾವಧಿ ಅಡಮಾನ ಸಾಲವಾಗಿರುವುದರಿಂದ ಗೃಹ ಸಾಲದ ಮರುಪಾವತಿಗೆ ಮೂರನೆಯ ಆದ್ಯತೆ ಕೊಡಿ.

2. ಸಾಲದ ಅವಧಿಯನ್ನು ತಾತ್ಕಾಲಿಕವಾಗಿ ಹೆಚ್ಚಿಸಿಕೊಳ್ಳಿ: ಗೃಹ ಸಾಲದಂತಹ ದೀರ್ಘಾವಧಿಯ ಸಾಲಗಳು ಅಥವಾ ಇನ್ಯಾವುದೇ ಮಾದರಿಯ ದೀರ್ಘಾವಧಿ ಸಾಲಗಳನ್ನು ಮಾಡಿದ್ದಲ್ಲಿ ಸಾಲದ ಹೊರೆಯನ್ನು ತಾತ್ಕಾಲಿಕವಾಗಿ ಇಳಿಸಿಕೊಳ್ಳುವ ದೃಷ್ಟಿಯಿಂದ ಪ್ರತಿ ತಿಂಗಳು ಪಾವತಿಸುವ ಮಾಸಿಕ ಕಂತು (ಇಎಂಐ ಮೊತ್ತ) ಕಡಿಮೆ ಮಾಡಿಕೊಳ್ಳಿ. ಗೃಹ ಸಾಲವಾಗಿದ್ದ ಪಕ್ಷದಲ್ಲಿ ಬ್ಯಾಂಕ್ ಅಧಿಕಾರಿಗಳ ಜೊತೆ ಮಾತನಾಡಿ ಅವಧಿ ಹೆಚ್ಚಿಸಿಕೊಂಡು ಇಎಂಐ ಮೊತ್ತ ತಗ್ಗಿಸಿಕೊಳ್ಳಿ.

ಕೈಸಾಲ ಪಡೆದಿದ್ದರೆ ಅದನ್ನು ಕೊಟ್ಟ ವ್ಯಕ್ತಿಯ ಜೊತೆ ಮಾತನಾಡಿ ಸಾಲದ ಮರುಪಾವತಿಗೆ ಹೆಚ್ಚು ಸಮಯ ಕೇಳಿಕೊಳ್ಳುವ ಜೊತೆಗೆ ಪ್ರತಿ ತಿಂಗಳು ಇಂತಿಷ್ಟು ಮೊತ್ತ ನೀಡುವೆ ಎಂದು ಮಾತು ಕೊಡಿ. ಹೀಗೆ ಮಾಡಿದಾಗ ತಾತ್ಕಾಲಿಕವಾಗಿ ಸಾಲದ ಹೊರೆಯಿಂದ ಒಂದಿಷ್ಟು ನೆಮ್ಮದಿ ಪಡೆಯಬಹುದು. ಆದರೆ ನೆನಪಿರಲಿ, ಸಾಲದ ಅವಧಿ ಹೆಚ್ಚಿಸಿಕೊಳ್ಳುವುದರಿಂದ ನೀವು ಕಟ್ಟುವ ಬಡ್ಡಿಯ ಪ್ರಮಾಣ ಹೆಚ್ಚುತ್ತದೆ. ಆದ್ದರಿಂದ ತೀರಾ ಅನಿವಾರ್ಯ ಎನ್ನುವ ಸಂದರ್ಭದಲ್ಲಿ ಮಾತ್ರ ಈ ಅನುಕೂಲ ಪಡೆದುಕೊಳ್ಳಿ.

3. ದೀರ್ಘಾವಧಿ ಸಾಲಗಳ ಬಡ್ಡಿ ಕಡಿಮೆ ಮಾಡಿಕೊಳ್ಳಿ: ಇಎಂಐ ಹೆಚ್ಚಿಸುವುದರಿಂದ ಸಾಲದ ಅಸಲಿನ ಮೊತ್ತವನ್ನು ಕಡಿಮೆ ಮಾಡಿಕೊಳ್ಳುವುದರ ಜೊತೆಗೆ ಒಟ್ಟಾರೆ ಪಾವತಿಸುವ ಬಡ್ಡಿಯ ಪ್ರಮಾಣ ಇಳಿಕೆ ಮಾಡಿಕೊಳ್ಳಬಹುದು ಎನ್ನುವುದನ್ನು ಉದಾಹರಣೆ ಸಮೇತ ನೋಡೋಣ.

25 ವರ್ಷಗಳ ಅವಧಿಗೆ ಶೇ 8ರ ಬಡ್ಡಿ ದರದಲ್ಲಿ ₹ 50 ಲಕ್ಷ ಸಾಲ ಪಡೆದಿದ್ದೀರಿ ಎಂದುಕೊಳ್ಳಿ. ಇದಕ್ಕೆ ₹ 38,591 ಮಾಸಿಕ ಕಂತಿನ ರೂಪದಲ್ಲಿ ಪಾವತಿಸಬೇಕಾಗುತ್ತದೆ. 25ನೆಯ ವರ್ಷದ ಕೊನೆಯಲ್ಲಿ ಸಾಲದ ಅಸಲು ಮೊತ್ತ ₹ 50 ಲಕ್ಷದ ಜೊತೆಗೆ ಅದಕ್ಕೆ ಬಡ್ಡಿಯಾಗಿ ನೀವು ₹ 65 ಲಕ್ಷ ಕಟ್ಟಬೇಕಾಗುತ್ತದೆ. ₹ 50 ಲಕ್ಷ ಸಾಲಕ್ಕೆ ₹ 65 ಲಕ್ಷ ಬಡ್ಡಿ ಪಾವತಿಸುವುದು ದೊಡ್ಡ ಹೊರೆ.

ಈ ದೊಡ್ಡ ಮೊತ್ತದ ಬಡ್ಡಿಯ ಹೊರೆ ಇಳಿಸಿಕೊಳ್ಳಬೇಕು ಅಂದರೆ ಅದಕ್ಕೆ ಎರಡು ಮಾರ್ಗಗಳಿವೆ. ಒಂದನೆಯದ್ದು, ಪ್ರತಿ ವರ್ಷ ಒಂದು ಇಎಂಐ ಅನ್ನು ಹೆಚ್ಚುವರಿಯಾಗಿ ಪಾವತಿಸುವುದು. ಮತ್ತೊಂದು, ಪ್ರತಿ ವರ್ಷ ಇಎಂಐ ಮೊತ್ತವನ್ನು ಶೇ 10ರಷ್ಟು ಹೆಚ್ಚಳ ಮಾಡುವುದು. ಅಂದರೆ ₹ 38,591 ಇದ್ದ ಇಎಂಐ ಮೊತ್ತವನ್ನು ಮುಂದಿನ ವರ್ಷ ₹42,450ಕ್ಕೆ ಏರಿಸುವುದು. ಹಾಗೆಯೇ, ಅದರ ಮುಂದಿನ ವರ್ಷ ₹ 46,695ಕ್ಕೆ ಹೆಚ್ಚಳ ಮಾಡುವುದು.

ಇದರ ಜೊತೆಗೆ ಪ್ರತಿ ವರ್ಷ ಒಂದು ಹೆಚ್ಚುವರಿ ಇಎಂಐ, ಅಂದರೆ ವರ್ಷಕ್ಕೆ 12 ಕಂತುಗಳನ್ನು ಕಟ್ಟುವ ಬದಲಿಗೆ 13 ಕಂತುಗಳನ್ನು, ಪಾವತಿಸಬೇಕು. ಹೀಗೆ ಮಾಡಿದಾಗ ₹ 65 ಲಕ್ಷ ಬಡ್ಡಿ ಕಟ್ಟುವ ಬದಲಿಗೆ ಒಟ್ಟು ಸಾಲಕ್ಕೆ ನೀವು ₹ 26,82,514 ರೂಪಾಯಿ ಮಾತ್ರ ಬಡ್ಡಿಯ ರೂಪದಲ್ಲಿ ಪಾವತಿಸುತ್ತೀರಿ.

4. ಹೆಚ್ಚು ಬಡ್ಡಿ ಇರುವ ಸಾಲ ತೀರಿಸಲು ಕಡಿಮೆ ಬಡ್ಡಿಯ ಸಾಲ ಪಡೆಯಿರಿ: ಹೆಚ್ಚು ಬಡ್ಡಿಯ ಸಾಲ ತೀರಿಸಲು ಕಡಿಮೆ ಬಡ್ಡಿಯ ಸಾಲ ಪಡೆದರೆ ತಪ್ಪಿಲ್ಲ. ಉದಾಹರಣೆಗೆ ನೀವು ₹ 1 ಲಕ್ಷ ಕ್ರೆಡಿಟ್ ಕಾರ್ಡ್ ಸಾಲ ಪಾವತಿಸಬೇಕು ಎಂದಿಟ್ಟುಕೊಳ್ಳಿ. ಕ್ರೆಡಿಟ್ ಕಾರ್ಡ್ ಬಿಲ್ ಕಟ್ಟದಿದ್ದರೆ ವಾರ್ಷಿಕ ಶೇ 35ರಿಂದ ಶೇ 45ರಷ್ಟು ಬಡ್ಡಿ ಪಾವತಿಸಬೇಕಾಗುತ್ತದೆ.

ಆಗ ಕ್ರೆಡಿಟ್ ಕಾರ್ಡ್ ಸಾಲ ತೀರಿಸಲು ಶೇ 13ರಿಂದ ಶೇ 16ರ ಬಡ್ಡಿ ದರದಲ್ಲಿ ಸಿಗುವ ವೈಯಕ್ತಿಕ ಸಾಲವನ್ನು ಪಡೆಯಬಹುದು. ಇದರಿಂದ ನಿಮಗೆ ಬಡ್ಡಿ ಹೊರೆ ಕಡಿಮೆಯಾಗುತ್ತದೆ. ಶೇ 35ರಿಂದ ಶೇ 45ರಷ್ಟು ಬಡ್ಡಿ ಕಟ್ಟುವ ಬದಲು ವೈಯಕ್ತಿಕ ಸಾಲಕ್ಕೆ ಶೇ 13ರಿಂದ ಶೇ 16ರ ಬಡ್ಡಿ ದರ ಪಾವತಿಸಬೇಕಾಗುತ್ತದೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)



ಜಾಗತಿಕ ಕುಸಿತ: ತತ್ತರಿಸಿದ ಸೆನ್ಸೆಕ್ಸ್, ನಿಫ್ಟಿ

ಸತತ ಮೂರು ವಾರಗಳಿಂದ ಗಳಿಕೆಯ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಕುಸಿತದ ಹಾದಿ ತುಳಿದಿವೆ. ಜೂನ್ 10ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಇಳಿಕೆ ಕಂಡಿವೆ. 54,303 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 2.63ರಷ್ಟು ತಗ್ಗಿದೆ. 16,201 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 2.31ರಷ್ಟು ಕುಸಿದಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಹಿಂಜರಿಕೆ, ಹಣದುಬ್ಬರ, ಬಡ್ಡಿ ದರ ಹೆಚ್ಚಳ, ತೈಲ ಬೆಲೆ ಏರಿಕೆಯ ಬಿಸಿ ಸೇರಿ ಹಲವು ಅಂಶಗಳು ಮಾರುಕಟ್ಟೆಗೆ ಪೆಟ್ಟು ಕೊಟ್ಟಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಿಡ್ ಕ್ಯಾಪ್ 100 ಸೂಚ್ಯಂಕ ಶೇ 1.60ರಷ್ಟು ಕುಸಿದಿದೆ. ಬಿಎಸ್‌ಇ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 2ರಷ್ಟು ಇಳಿಕೆಯಾಗಿದೆ. ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 2.64ರಷ್ಟು, ಲೋಹ ಸೂಚ್ಯಂಕ ಶೇ 2.42ರಷ್ಟು, ಬ್ಯಾಂಕ್ ಸೂಚ್ಯಂಕ ಶೇ 2.24ರಷ್ಟು ತಗ್ಗಿವೆ.

ಇಳಿಕೆ: ಶ್ರೀ ಸಿಮೆಂಟ್ಸ್ ಶೇ 7.07ರಷ್ಟು ಕುಸಿದಿದೆ. ಏಷ್ಯನ್ ಪೇಂಟ್ಸ್ ಶೇ 6.17ರಷ್ಟು ತಗ್ಗಿದೆ. ಬಜಾಜ್ ಫೈನಾನ್ಸ್ ಶೇ 5.98ರಷ್ಟು ಇಳಿದಿದೆ.

ಮುನ್ನೋಟ: ಯುರೋಪಿನ ಕೇಂದ್ರಿಯ ಬ್ಯಾಂಕ್ ಮತ್ತು ಅಮೆರಿಕದ ಫೆಡರಲ್ ಬ್ಯಾಂಕ್ ಮುಂಬರುವ ದಿನಗಳಲ್ಲಿ ಕೈಗೊಳ್ಳಲಿರುವ ನಿರ್ಧಾರಗಳು ಷೇರು ಮಾರುಕಟ್ಟೆ ಮೇಲೆ ಪರಿಣಾಮ ಬೀರಲಿವೆ. ರಷ್ಯಾ - ಉಕ್ರೇನ್ ಬಿಕ್ಕಟ್ಟು ಶಮನಗೊಳ್ಳದಿದ್ದರೆ ತೈಲ ಬೆಲೆ ಮತ್ತಷ್ಟು ಜಿಗಿಯುವ ಸಂಭವವಿದೆ.

ಚೀನಾದಲ್ಲಿ ಮತ್ತೆ ಕೋವಿಡ್ ಸಂಬಂಧಿತ ಲಾಕ್ ಡೌನ್‌ಗಳು ಜಾರಿಗೆ ಬರುತ್ತಿವೆ. ಇದರ ನಡುವೆ, ಜಾಗತಿಕವಾಗಿ ಆರ್ಥಿಕ ಹಿಂಜರಿತ ಎದುರಾಗುವ ಆತಂಕವೂ ಇದೆ. ಹಾಗಾಗಿ ಸದ್ಯದ ಸ್ಥಿತಿಯಲ್ಲಿ ಆಂತರಿಕ ಮೌಲ್ಯಕ್ಕಿಂತ ಹೆಚ್ಚು ಮೌಲ್ಯ ಪಡೆದುಕೊಂಡಿರುವ ಷೇರುಗಳಿಂದ ದೂರ ಉಳಿಯುವುದು ಒಳಿತು. ಉತ್ತಮ ವಹಿವಾಟು ಹೊಂದಿರುವ, ಕಡಿಮೆ ಮೌಲ್ಯಮಾಪನ ಹೊಂದಿರುವ ಷೇರುಗಳ ಮೇಲೆ ಅಳೆದು ತೂಗಿ ಹೂಡಿಕೆ ಮಾಡುವುದನ್ನು ಪರಿಗಣಿಸಬಹುದು.

ಅಥ್ಲೆಟಿಕ್ಸ್: ಐಶ್ವರ್ಯ ಮಿಂಚು


ಐಶ್ವರ್ಯ

ಚೆನ್ನೈ : ಕರ್ನಾಟಕದ ಬಿ. ಐಶ್ವರ್ಯ ಅವರು ಇಲ್ಲಿ ನಡೆಯುತ್ತಿರುವ ಅಂತರರಾಜ್ಯ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಮಿಂಚು ಹರಿಸಿದರು.

ಲಾಂಗ್‌ಜಂಪ್ ಸ್ಪರ್ಧೆಯ ಅರ್ಹತಾ ಸುತ್ತಿನಲ್ಲಿ ಭಾನುವಾರ 6.73 ಮೀಟರ್ಸ್ ಜಿಗಿತದ ಮೂಲಕ ಭಾರತದ ಮಹಿಳೆಯರ ಪೈಕಿ ಎರಡನೇ ಶ್ರೇಷ್ಠ ಸಾಧನೆ ಮಾಡಿದ ಶ್ರೇಯವನ್ನು ಗಳಿಸಿದರು. ರಾಷ್ಟ್ರೀಯ ದಾಖಲೆಯು ವಿಶ್ವ ಚಾಂಪಿಯನ್‌ಷಿಪ್ ಕಂಚು ವಿಜೇತ ಅಂಜು ಬಾಬಿ ಜಾರ್ಜ್ (6.83 ಮೀ.) ಅವರ ಹೆಸರಿನಲ್ಲಿದೆ.

ಐಶ್ವರ್ಯ ಅವರು ಕಾಮನ್‌ವೆಲ್ತ್ ಗೇಮ್ಸ್‌ಗೆ ನಿಗದಿಪಡಿಸಿದ್ದ ಮಾನದಂಡವನ್ನೂ (6.50 ಮೀ.) ಮೀರಿದರು. ಅಲ್ಲದೆ 2011ರಲ್ಲಿ ಮಯೂಕಾ ಜಾನಿ (6.63 ಮೀ.) ಅವರು ನಿರ್ಮಿಸಿದ್ದ ಕೂಟದಾಖಲೆಯನ್ನೂ ಮೀರಿದರು.

ಸಂದೇಶ್‌ಗೆ ಬೆಳ್ಳಿ: ಪುರುಷರ ವಿಭಾಗದ ಹೈಜಂಪ್‌ನಲ್ಲಿ ಕರ್ನಾಟಕದ ಜೈಸಿ ಸಂದೇಶ್ (2.21 ಮೀ.) ಬೆಳ್ಳಿ ಪದಕ ಜಯಿಸಿದರು.

ಯೂತ್ ವೇಟ್‌ಲಿಫ್ಟಿಂಗ್; ಭಾರತಕ್ಕೆ 2 ಬೆಳ್ಳಿ ಪದಕ

ನವದೆಹಲಿ (ಪಿಟಿಐ): ಭಾರತದ ಆಕಾಂಕ್ಷಾ ಕಿಶೋರ್ ಮತ್ತು ವಿಜಯ್ ಪ್ರಜಾಪತಿ ಅವರು ಮೆಕ್ಸಿಕೊದ ಲಿಯೊನ್‌ನಲ್ಲಿ ನಡೆಯುತ್ತಿರುವ ಐಡಬ್ಲ್ಯುಎಫ್ ವಿಶ್ವ ಯೂತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಜಯಿಸಿದರು.

ಶನಿವಾರ ನಡೆದ 40 ಕೆ.ಜಿ ವಿಭಾಗದ ಸ್ಪರ್ಧೆಯಲ್ಲಿ ಆಕಾಂಕ್ಷಾ ಒಟ್ಟು 129 ಕೆ.ಜಿ ಭಾರ (59 ಕೆ.ಜಿ+ 68 ಕೆ.ಜಿ) ಎತ್ತುವ ಮೂಲಕ ಎರಡನೇ ಸ್ಥಾನ ಗಳಿಸಿದರು.

ವಿಜಯ್ 49 ಕೆ.ಜಿ. ವಿಭಾಗದಲ್ಲಿ ಒಟ್ಟು 175 ಕೆ.ಜಿ (78 ಕೆ.ಜಿ + 97ಕೆ.ಜಿ) ಸಾಧನೆಯೊಂದಿಗೆ ಬೆಳ್ಳಿ ಗೆದ್ದರು.

ಆಕಾಂಕ್ಷಾ ಅವರು ಔರಂಗಾಬಾದ್‌ನ ಸಾಯ್ ರಾಷ್ಟ್ರೀಯ ಉತ್ಕೃಷ್ಟತಾ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಬ್ಯಾಡ್ಮಿಂಟನ್: ಅಕ್ಸೆಲ್ಸೆನ್‌ಗೆ ಪ್ರಶಸ್ತಿ


ವಿಕ್ಟರ್ ಅಕ್ಸೆಲ್ಸೆನ್

ಜಕಾರ್ತ (ಎಎಫ್‌ಪಿ): ಡೆನ್ಮಾರ್ಕ್‌ನ ವಿಕ್ಟರ್ ಅಕ್ಸೆಲ್ಸೆನ್ ಅವರು ಇಂಡೊನೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

ಭಾನುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಹಣಾಹಣಿಯಲ್ಲಿ ಅಕ್ಸೆಲ್ಸೆನ್, ತೈವಾನ್‌ನ ಚೊ ಟಿಯೆನ್ ಚೆನ್ ಅವರನ್ನು ಸುಲಭವಾಗಿ ಮಣಿಸಿದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ಅಕ್ಸೆಲ್ಸೆನ್ ಅವರಿಗೆ 21-10, 21-12ರಿಂದ ಜಯ ಒಲಿಯಿತು.

ಇಲ್ಲಿನ ಇಸ್ಟೋರಾ ಸ್ಪೋರ್ಟಿಂಗ್ ಅರೆನಾದಲ್ಲಿ 41 ನಿಮಿಷಗಳ ಕಾಲ ಈ ಪಂದ್ಯ ನಡೆಯಿತು.

ಚೆನ್ ಯುಫಿಗೆ ಗರಿ: ಮಹಿಳಾ ಸಿಂಗಲ್ಸ್ ವಿಭಾಗದ ಪ್ರಶಸ್ತಿಯು ಚೀನಾದ ಚೆನ್ ಯುಫಿ ಅವರ ಪಾಲಾಯಿತು. ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಯುಫಿ 21-16, 18-21, 21-15ರಿಂದ ಥಾಯ್ಲೆಂಡ್‌ನ ರಚನಾಕ್ ಇಂತನನ್ ಅವರಿಗೆ ಸೋಲುಣಿಸಿದರು.

ಸೆಮಿಫೈನಲ್‌ನಲ್ಲಿ ಚೆನ್ 21-17, 21-14ರಿಂದ ತಮ್ಮದೇ ದೇಶದ ಬಿಂಗ್ ಜಿಯಾವೊ ಅವರನ್ನು ಮಣಿಸಿದ್ದರು.

ಫುಟ್‌ಬಾಲ್: ಸಿರಿಲ್ ಜೋನ್ಸ್ ಮಿಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿರಿಲ್ ಜೋನ್ಸ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಡಿವೈಇಎಸ್ ಎಫ್‌ಸಿ ತಂಡವು ಬಿಡಿಎಫ್‌ಎ ಬಿ ಡಿವಿಷನ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಡಿವೈಇಎಸ್ 3–1ರಿಂದ ಮೊಹಮ್ಮಡನ್ ಸ್ಪೋರ್ಟಿಂಗ್ ತಂಡವನ್ನು ಸೋಲಿಸಿತು. ಸಿರಿಲ್ 20, 41 ಮತ್ತು 70 + 1ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. ಸ್ಪೋರ್ಟಿಂಗ್ ಪರ ಕೆ. ಪುಗಲೆಂದಿ ಗೋಲು ಹೊಡೆದರು. ಇನ್ನುಳಿದ ಪಂದ್ಯಗಳಲ್ಲಿ ಗೋವನ್ಸ್ ಎಫ್‌ಸಿ 4–1ರಿಂದ ಬೆಂಗಳೂರು ಮಾರ್ಸ್ ಎದುರು, ಶ್ರೀಗಜಾನನ ಎಫ್‌ಸಿ 1–0ಯಿಂದ ತಿಲಕ್ ಮೆಮೊರಿಯಲ್ ಎದುರು, ವೆಹಿಕಲ್ ಎಫ್‌ಸಿ 2–1ರಿಂದ ಸನ್‌ರೈಸ್ ಎದುರು ಜಯ ಸಾಧಿಸಿದವು.

ಬೆರೆಟಿನಿಗೆ ಪ್ರಶಸ್ತಿ


ಬೆರೆಟಿನಿ

ಸ್ಟುಟ್‌ಗಾರ್ಟ್, ಜರ್ಮನಿ (ಎಎಫ್‌ಪಿ): ಇಟಲಿಯ ಮ್ಯಾಟಿಯೊ ಬೆರೆಟಿನಿ, ಸ್ಟುಟ್‌ಗಾರ್ಟ್ ಎಟಿಪಿ ಟೆನಿಸ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡರು.

ಭಾನುವಾರ ನಡೆದ ಫೈನಲ್‌ನಲ್ಲಿ ಅವರು 6-4, 5-7, 6-3 ರಲ್ಲಿ ಬ್ರಿಟನ್‌ನ ಆ್ಯಂಡಿ ಮರೆ ವಿರುದ್ಧ ಗೆದ್ದರು. ತೊಡೆಯ ಸ್ನಾಯು ಸೆಳೆತದಿಂದ ಬಳಲಿದ ಮರೆ, ಪೂರ್ಣ ಸಾಮರ್ಥ್ಯದೊಂದಿಗೆ ಆಡಲು ವಿಫಲರಾದರು.ಕಳೆದ ವರ್ಷ ವಿಂಬಲ್ಡನ್ ರನ್ನರ್ ಅಪ್ ಆಗಿದ್ದ ಬೆರೆಟಿನಿ, ಮೊದಲ ಸೆಟ್ ಗೆದ್ದು ಉತ್ತಮ ಆರಂಭ ಪಡೆದರು. ಎರಡನೇ ಸೆಟ್ ಗೆದ್ದ ಮರೆ ಸಮಬಲ ಸಾಧಿ ಸಿದರು. ಮೂರನೇ ಸೆಟ್‌ನಲ್ಲಿ ಬೆರೆಟಿನಿ ಆರಂಭದಲ್ಲೇ ಎದುರಾಳಿಯ ಸರ್ವ್ ಮುರಿದು ಮೇಲುಗೈ ಸಾಧಿಸಿದರು.